ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2961
2. ವಿಧಾನಸಭೆ ಸದಸ್ಯರ ಹೆಸರು : ಶ್ರೀ ನಾಗೇಂದ್ರ ಎಲ್.(ಚಾಮರಾಜ)
3. ಉತ್ತರಿಸುವ ದಿನಾಂಕ: : 18.03.2021.
4. ಉತ್ತರಿಸುವ ಸಚಿವರು : ಮಾನ್ಯ ಕಾರ್ಮಿಕ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಖಾಸಗಿ ಕಾರ್ಖಾನೆಗಳಲ್ಲಿನ ಕಾರ್ಮಿಕರ ನಿವೃತ್ತಿ ವಯಸ್ಸನ್ನು ಗರಿಷ್ಠ ಎಷ್ಟು ವರ್ಷಗಳಿಗೆ ನಿಗದಿಪಡಿಸಲಾಗಿದೆ.	1961 ರ ಕರ್ನಾಟಕ ಔದ್ಯೋಗಿಕ ಉದ್ಯೋಗಗಳ (ಸ್ಥಾಯೀ ಆದೇಶಗಳು) ನಿಯಮ 3(1) ರಲ್ಲಿ ತಿಳಿಸಿರುವಂತೆ ಮಾದರಿ ಸ್ಥಾಯೀ ಆದೇಶಗಳ ಅನುಸೂಚಿ – I ರ ಕ್ರಮ ಸಂಖ್ಯೆ 15–A ರಲ್ಲಿ 60 ವರ್ಷ ಇರಬಹುದು ಅಥವಾ ಕಾರ್ಮಿಕ ಮತ್ತು ಆಡಳಿತ ವರ್ಗದವರು ಪರಸ್ಪರ ಚರ್ಚಿಸಿ ಮಾಡಿಕೊಂಡ ಒಪ್ಪಂದ ಅಥವಾ ಐತೀರ್ಪಿಗೆ ಒಳಪಟ್ಟು ಕಾರ್ಮಿಕರ ನಿವೃತ್ತಿ ವಯಸ್ಸು ನಿಗದಿಪಡಿಸಬಹುದೆಂಬ ನಿಯಮ ಇರುತ್ತದೆ.
ಆ)	ನಿವೃತ್ತಿ ವಯೋಮಿತಿ ತೀರ್ಮಾನವನ್ನು ಯಾರಿಂದ ತೆಗೆದುಕೊಳ್ಳಲಾಗಿರುತ್ತದೆ.	ರಾಜ್ಯದಲ್ಲಿ ಖಾಸಗಿ ಕಾರ್ಖಾನೆಗಳಲ್ಲಿನ ಕಾರ್ಮಿಕರ ನಿವೃತ್ತಿ ವಯಸ್ಸನ್ನು ಕಾರ್ಮಿಕ ಮತ್ತು ಆಡಳಿತ ವರ್ಗದವರು ಪರಸ್ಪರ ಒಪ್ಪಂದದೊಂದಿಗೆ ನಿಗದಿಪಡಿಸಿಕೊಳ್ಳುತ್ತಾರೆ. ಒಪ್ಪಂದ ಮಾಡಿಕೊಂಡಂತೆ ಕಾರ್ಮಿಕರ ನಿವೃತ್ತಿ ವಯಸ್ಸಿನ ಬಗ್ಗೆ ಸಂಸ್ಥೆಯು 1946 ರ ಔದ್ಯೋಗಿಕ ಉದ್ಯೋಗಗಳ (ಸ್ಥಾಯೀ ಆದೇಶಗಳು) ಕಾಯ್ದೆಯ ಕಲಂ 3(1) ರಡಿಯಲ್ಲಿ ಸ್ಥಾಯೀ ಆದೇಶಗಳ ಕರಡು ನಿಯಮಗಳನ್ನು ರಚಿಸಿಕೊಂಡು ದೃಢೀಕರಣಾಧಿಕಾರಿಗಳಿಗೆ ದೃಢೀಕರಣಕ್ಕಾಗಿ ಸಲ್ಲಿಸುತ್ತಾರೆ. ದೃಢೀಕರಣಾಧಿಕಾರಿಗಳು ಉಭಯಪಕ್ಷಗಳ ಸಭೆ ನಡೆಸಿ ಕರಡು ಸ್ಥಾಯೀ ಆದೇಶವನ್ನು ದೃಢೀಕರಿಸುತ್ತಾರೆ. ದೃಢೀಕರಣಾಧಿಕಾರಿಗಳು ದೃಢೀಕರಿಸಿದ ಕರಡು ಸ್ಥಾಯೀ ಆದೇಶಗಳ ಬಗ್ಗೆ ಯಾವುದೇ ಸಹಮತ ಇಲ್ಲದಿದ್ದಲ್ಲಿ ಉಭಯಪಕ್ಷಗಳು ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸುತ್ತಾರೆ. ಮೇಲ್ಮನವಿ ಪ್ರಾಧಿಕಾರಿಗಳು ಪುನ: ವಿಚಾರಣೆ ನಡೆಸಿ ದೃಢೀಕರಣಾಧಿಕಾರಿಗಳ ಆದೇಶವನ್ನು ಎತ್ತಿ ಹಿಡಿಯುವ ಅಥವಾ ಪರಿಷ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಮೇಲ್ಮನವಿ ಪ್ರಾಧಿಕಾರಿಗಳ ಆದೇಶವು ಒಪ್ಪಿಗೆಯಾಗದಿದ್ದಲ್ಲಿ ಅವರ ಆದೇಶದ ವಿರುದ್ಧ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಿಸಿ ನ್ಯಾಯ ನಿರ್ಣಯ ಪಡೆಯಲು ಅವಕಾಶವಿರುತ್ತದೆ. ಇದರಿಂದಾಗಿ ಖಾಸಗಿ ಕಾರ್ಖಾನೆಗಳಲ್ಲಿನ ಕಾರ್ಮಿಕರ ನಿವೃತ್ತಿ ವಯಸ್ಸನ್ನು ನಿರ್ಧರಿಸುವ ಪ್ರಕ್ರಿಯೆಯು ಅರೆ ನ್ಯಾಯಿಕ ವ್ಯಾಪ್ತಿಗೆ ಒಳಪಡುತ್ತದೆ.

ಇ)	ಮೈಸೂರು ನಗರದಲ್ಲಿರುವ "JK TYRE" ಖಾಸಗಿ ಕಾರ್ಖಾನೆಯಲ್ಲಿ ಈ ವಿಷಯವಾಗಿ ತಾರತಮ್ಯ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ನಿವೃತ್ತಿ ವಯಸ್ಸಿನ ಬಗ್ಗೆ ಇತ್ತೀಚಿಗೆ ಯಾವುದೇ ತಾರತಮ್ಯ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದರೆ 4 ವರ್ಷಗಳ ಹಿಂದೆ ದಿನಾಂಕ: 27.04.2016 ರಲ್ಲಿ "JK TYRE" & Industries Ltd., (Vikranth Tyres) ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುವ **ವಿಕ್ರಾಂತ್ ಟೈರ್ಸ್ ಎಂಪ್ಲಾಯೀಸ್ ಯೂನಿಯನ್** ಇವರು ಕಾರ್ಮಿಕರ ನಿವೃತ್ತಿ ವಯಸ್ಸನ್ನು 58 ರಿಂದ 60 ವರ್ಷಗಳೆಂದು ತಿದ್ದುಪಡಿ ಮಾಡಬೇಕೆಂದು ಉಪ ಕಾರ್ಮಿಕ ಆಯುಕ್ತರು ಹಾಗೂ ಸ್ಥಾಯೀ ಆದೇಶಗಳ ದೃಢೀಕರಣಾಧಿಕಾರಿಗಳು ಇವರಿಗೆ ಮನವಿ ಸಲ್ಲಿಸಿದ್ದು, ದಿನಾಂಕ:18.09.2017 ರಲ್ಲಿ ದೃಢೀಕರಣಾಧಿಕಾರಿಗಳು ದೃಢೀಕೃತ ಸ್ಥಾಯೀ ಆದೇಶಗಳ ಷರತ್ತು 33 ಕ್ಕೆ ತಿದ್ದುಪಡಿ ಮಾಡಿ 60 ವರ್ಷ ತುಂಬಿದ ಕಾರ್ಮಿಕರನ್ನು ನಿವೃತ್ತಿಗೊಳಿಸಬಹುದು ಎಂದು ಆದೇಶ ಮಾಡಿದ್ದರು. ದೃಢೀಕರಣಾಧಿಕಾರಿಗಳ ಆದೇಶದ ವಿರುದ್ಧ "JK TYRE" ಸಂಸ್ಥೆಯ ಆಡಳಿತವರ್ಗದವರು ಅಪರ ಕಾರ್ಮಿಕ ಆಯುಕ್ತರು ಹಾಗೂ ಸ್ಥಾಯೀ ಆದೇಶಗಳ ಕಾಯ್ದೆಯಡಿಯಲ್ಲಿ ಮೇಲ್ಮನವಿ ಪ್ರಾಧಿಕಾರಿ, ಇವರಿಗೆ ದಿನಾಂಕ:11.10.2017 ರಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ದಿನಾಂಕ:28.12.2020 ರಲ್ಲಿ ಅಪರ ಕಾರ್ಮಿಕ ಆಯುಕ್ತರು ಹಾಗೂ ಸ್ಥಾಯೀ ಆದೇಶಗಳ ಕಾಯ್ದೆಯಡಿಯಲ್ಲಿ ಮೇಲ್ಮನವಿ ಪ್ರಾಧಿಕಾರಿ, ಇವರು ದೃಢೀಕರಣಾಧಿಕಾರಿಗಳು ನಿವೃತ್ತಿ ವಯಸ್ಸನ್ನು ನಿರ್ಧರಿಸುವ ಬಗ್ಗೆ ವಿವಿಧ ನ್ಯಾಯಾಲಯಗಳು ನೀಡಿರುವ ತೀರ್ಪನ್ನು ಉಲ್ಲೇಖಿಸಿ ಉಪ ಕಾರ್ಮಿಕ ಆಯುಕ್ತರು ಹಾಗೂ ಸ್ಥಾಯೀ ಆದೇಶಗಳ ದೃಢೀಕರಣಾಧಿಕಾರಿಗಳು ಇವರ ಆದೇಶವನ್ನು ಮಾರ್ಪಡಿಸಿ ನಿವೃತ್ತಿ ವಯಸ್ಸನ್ನು 58 ಕ್ಕೆ ನಿಗದಿಗೊಳಿಸಿರುತ್ತಾರೆ. ಇತ್ತೀಚಿಗೆ ಅಪರ ಕಾರ್ಮಿಕ ಆಯುಕ್ತರು ಹಾಗೂ ಸ್ಥಾಯೀ ಆದೇಶಗಳ ಕಾಯ್ದೆಯಡಿಯಲ್ಲಿ ಮೇಲ್ಮನವಿ ಪ್ರಾಧಿಕಾರಿ, ಇವರ ಆದೇಶದ ವಿರುದ್ಧ ಕಾರ್ಮಿಕ ಸಂಘದವರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 204/2021 ನ್ನು ದಾಖಲು ಮಾಡಿದ್ದು, ಸದರಿ ರಿಟ್ ಅರ್ಜಿಯನ್ನು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:09.02.2021 ರಂದು ವಜಾಗೊಳಿಸಿ, ಮೇಲ್ಮನವಿ ಪ್ರಾಧಿಕಾರದ ದಿನಾಂಕ:28.12.2020ರ ಆದೇಶವನ್ನು ಎತ್ತಿ ಹಿಡಿದಿರುತ್ತಾರೆ.
ಈ)	ಬಂದಿದ್ದಲ್ಲಿ, ಈ ದಿಸೆಯಲ್ಲಿ ಕೈಗೊಂಡಿರುವ ಕ್ರಮಗಳೇನು ;	ಅನ್ವಯಿಸುವುದಿಲ್ಲ.

<table>
<tr><td>ಉ)</td><td>ಈ ಕಾರ್ಖಾನೆಯಲ್ಲಿ ಒಟ್ಟು ಎಷ್ಟು ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದಾರೆ.</td><td>ಈ ಕಾರ್ಖಾನೆಯಲ್ಲಿ ಈ ಕೆಳಕಂಡಂತೆ ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದಾರೆ.
<table><tr><td>ಖಾಯಂ ನೌಕರರು</td><td>1,151</td></tr><tr><td>ಬದಲಿ ಕಾರ್ಮಿಕರು</td><td>980</td></tr><tr><td>ಗುತ್ತಿಗೆ ಕಾರ್ಮಿಕರು</td><td>1,215</td></tr><tr><td>ಒಟ್ಟು</td><td>3,346</td></tr></table></td></tr>
<tr><td>ಊ)</td><td>ಇದರಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ?</td><td>ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರ ಸಂಖ್ಯೆ 1,215</td></tr>
<tr><td>ಋ)</td><td>ಇಂತಹ ಕಾರ್ಮಿಕರಿಗೆ ಕಾರ್ಖಾನೆ ವತಿಯಿಂದ ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ?</td><td>ಸದರಿ ಗುತ್ತಿಗೆ ಕಾರ್ಮಿಕರಿಗೆ ಗುತ್ತಿಗೆ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1970 ಹಾಗೂ ಅದರಡಿಯ ನಿಯಮಗಳನ್ವಯ ಒದಗಿಸಬೇಕಾದ ಕಾನೂನಾತ್ಮಕ ಸೌಲಭ್ಯಗಳಾದ ಕನಿಷ್ಠ ವೇತನ, ಇಎಸ್ಐ, ಪಿಎಫ್, ಕ್ಯಾಂಟೀನ್ ಸೌಲಭ್ಯಗಳನ್ನು ಒಳಗೊಂಡಂತೆ ಅವರು ಅರ್ಹರಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.</td></tr>
</table>

ಕಾಇ 147 ಐಡಿಎಂ 2021

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

ಕರ್ನಾಟಕ ವಿಧಾನ ಸಭೆ

1	ಮಾನ್ಯ ಸದಸ್ಯರ ಹೆಸರು	: ಶ್ರೀ ಮಂಜುನಾಥ್. ಎ (ಮಾಗಡಿ)
2	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 2772
3	ಉತ್ತರಿಸಬೇಕಾದ ದಿನಾಂಕ	: 18-03-2021
4	ಉತ್ತರಿಸಬೇಕಾದವರು	: ಮಾನ್ಯ ಕಾರ್ಮಿಕ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಮಾಗಡಿ ವಿಧಾನ ಸಭಾ ಕ್ಷೇತ್ರದ ಬಿಡದಿ ಹಾಗೂ ಹಾರೋಹಳ್ಳಿಗಳಲ್ಲಿನ ಬೃಹತ್ ಕೈಗಾರಿಕೆಗಳಲ್ಲಿ ಲಕ್ಷಾಂತರ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದರೂ ಸಹಾ ಕಾರ್ಮಿಕರ ಆರೋಗ್ಯದ ಹಿತದೃಷ್ಠಿಯಿಂದ ಇ.ಎಸ್.ಐ. ಆಸ್ಪತ್ರೆ ತೆರೆಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಮಾಗಡಿ ವಿಧಾನ ಸಭಾ ಕ್ಷೇತ್ರದ ಬಿಡದಿಯಲ್ಲಿ ಇ.ಎಸ್.ಐ. ಚಿಕಿತ್ಸಾಲಯ ಕಾರ್ಯ ನಿರ್ವಹಿಸುತ್ತಿದೆ. ಮತ್ತು ಹಾರೋಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ 100 ಹಾಸಿಗೆ ಸಾಮರ್ಥ್ಯದ ಕಾರಾವಿ. ಆಸ್ಪತ್ರೆ ನಿರ್ಮಿಸಲು ಕಾರಾವಿ. ನಿಗಮದ ಸಹಭಾಗಿತ್ವದೊಂದಿಗೆ ಕೆ.ಐ.ಎ.ಡಿ.ಬಿ. ಜಮೀನನ್ನು ಗುರುತಿಸಲು ಕ್ರಮ ಜರುಗಿಸಲಾಗುತ್ತಿದೆ.
(ಆ)	ಹಾಗಿದ್ದಲ್ಲಿ, ಅಲ್ಲಿ ಇ.ಎಸ್.ಐ. ಆಸ್ಪತ್ರೆಯನ್ನು ತೆರೆಯದೇ ಇರುವುದಕ್ಕೆ ಕಾರಣಗಳೇನು;	- ಅನ್ವಯಿಸುವುದಿಲ್ಲ -
(ಇ)	ಸದರಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಹತ್ತಿರದ ಯಾವ ಯಾವ ಇ.ಎಸ್.ಐ. ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಪಡೆಯಲು ಅವಕಾಶವನ್ನು ಕಲ್ಪಿಸಿಕೊಡಲಾಗಿದೆ (ಮಾಹಿತಿ ನೀಡುವುದು)	ಹೆಚ್ಚಿನ ಚಿಕಿತ್ಸೆಗಾಗಿ ವಿಮಾರೋಗಿಗಳನ್ನು ಇ.ಎಸ್.ಐ.ಸಿ ಆಸ್ಪತ್ರೆ, ರಾಜಾಜಿನಗರ ಮತ್ತು ಹೊಂದಾಣಿಕೆ ಮಾಡಿಕೊಳ್ಳಲಾದ, ರಾಜರಾಜೇಶ್ವರಿ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆ, ಕುಂಬಳಗೋಡು ಇಲ್ಲಿಗೆ ಉಲ್ಲೇಖಿಸಲಾಗುತ್ತಿದೆ.

(ಈ)	ಬಿಡದಿ ಹಾಗೂ ಹಾರೋಹಳ್ಳಿ ಬೃಹತ್ ಕೈಗಾರಿಕೆಗಳಿಗೆ ಹೊಂದಿಕೊಂಡಂತೆ ಯಾವ ಸ್ಥಳದಲ್ಲಿ ಇ.ಎಸ್.ಐ. ಆಸ್ಪತ್ರೆಯನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು;	ಹಾರೋಹಳ್ಳಿ ಕೈಗಾರಿಕಾ ಪ್ರದೇಶದ ಸರ್ವೇ ನಂ. 788 ನ್ನು ಸೈಟ್ ಆಯ್ಕೆ ಸಮಿತಿಯು ಗುರುತಿಸಿದ್ದು, ಖರೀದಿ ಹಾಗೂ ಕಟ್ಟಡ ನಿರ್ಮಾಣವು ಕಾ.ರಾ.ವಿ. ನಿಗಮಕ್ಕೆ ಸಂಬಂಧಿಸಿರುತ್ತದೆ.
(ಉ)	ಅದಕ್ಕಾಗಿ ತಗಲಬಹುದಾದ ಅಂದಾಜು ವೆಚ್ಚ ಎಷ್ಟು? (ಸಂಪೂರ್ಣ ಮಾಹಿತಿ ನೀಡುವುದು)	ಕಾ.ರಾ.ವಿ. ನಿಗಮಕ್ಕೆ ಸಂಬಂಧಿಸಿರುತ್ತದೆ.

ಕಡತ ಸಂಖ್ಯೆ: LD-LSI/61/2021

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: **2602**
ಮಾನ್ಯ ಸದಸ್ಯರ ಹೆಸರು	: **ಶ್ರೀ ಮಹದೇವಪ್ಪ ಶಿವಲಿಂಗಪ್ಪ ಯಾದವಾಡ್ (ರಾಮದುರ್ಗ)**
ಉತ್ತರಿಸಬೇಕಾದ ದಿನಾಂಕ	: **18-03-2021**
ಉತ್ತರಿಸುವ ಸಚಿವರು	: **ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು**

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬೆಳಗಾವಿ ಜಿಲ್ಲೆ ರಾಮದುರ್ಗ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಸಾರ್ವಜನಿಕ ಆಸ್ಪತ್ರೆಗಳು ಎಷ್ಟು; (ವಿವರ ಒದಗಿಸುವುದು)</td><td>ಬೆಳಗಾವಿ ಜಿಲ್ಲೆ, ರಾಮದುರ್ಗ ತಾಲ್ಲೂಕಿನಲ್ಲಿ 7 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 1 ಸಾರ್ವಜನಿಕ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿವೆ.
<table>
<tr><th>ಪ್ರಾಥಮಿಕ ಆರೋಗ್ಯ ಕೇಂದ್ರಗಳು</th><th>ಸಾರ್ವಜನಿಕ ಆಸ್ಪತ್ರೆ</th></tr>
<tr><td>ಸೂರೆಬಾನ</td><td>ರಾಮದುರ್ಗ</td></tr>
<tr><td>ಕಟಕೋಳ</td><td></td></tr>
<tr><td>ಬುದನೂರ</td><td></td></tr>
<tr><td>ಹುಲಕುಂದ</td><td></td></tr>
<tr><td>ಮುದಕವಿ</td><td></td></tr>
<tr><td>ಬಟಕುರ್ಕಿ</td><td></td></tr>
<tr><td>ಸಾಲಹಳ್ಳಿ</td><td></td></tr>
</table></td></tr>
<tr><td>ಆ</td><td>ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಾಗೂ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಎಷ್ಟು ಸಿಬ್ಬಂದಿಯವರು ಕಾರ್ಯ ನಿರ್ವಹಿಸುತ್ತಿದ್ದಾರೆ;</td><td rowspan="2">ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಾಗೂ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಕಾರ್ಯನಿರತ ಮತ್ತು ಖಾಲಿ ಇರುವ ಹುದ್ದೆಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.</td></tr>
<tr><td>ಇ</td><td>ಆ ಪೈಕಿ ಖಾಲಿ ಇರುವ ಹುದ್ದೆಗಳೆಷ್ಟು; (ವಿವರ ಒದಗಿಸುವುದು)</td></tr>
<tr><td>ಈ</td><td>ಖಾಲಿಯಿರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು? (ವಿವರ ನೀಡುವುದು)</td><td>ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡ ಕ್ರಮದ ಬಗ್ಗೆ ಅನುಬಂಧ-2ರಲ್ಲಿ ನೀಡಲಾಗಿದೆ.</td></tr>
</table>

ಆಕುಕ 54 ಎಸ್‌ಬಿವಿ 2021.

(ಡಾ॥ ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಪ್ರಶ್ನೆ ಸಂಖ್ಯೆ: 2602

ರಾಮದುರ್ಗ ತಾಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಂಜೂರು ಕಾರ್ಯನಿರತ ಖಾಲಿ ಹುದ್ದೆಗಳ ವಿವರ

ಅನುಬಂಧ-1

ಕ್ರ.ಸಂ	ಹುದ್ದೆ	ಮಂಜೂರು	ಕಾರ್ಯನಿರತ	ಖಾಲಿ	ಷರಾ
	ಗ್ರೂಪ್-ಎ				
1	ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು	7	1	6	
	ಒಟ್ಟು	7	1	6	
	ಗ್ರೂಪ್-ಬಿ				
1	ಸಹಾಯಕ ಆಡಳಿತಾಧಿಕಾರಿಗಳು	0	0	0	
	ಒಟ್ಟು	0	0	0	
	ಗ್ರೂಪ್-ಸಿ				
1	ಪ್ರಥಮ ದರ್ಜೆ ಸಹಾಯಕರು	5	1	4	
2	ಕ್ಲರ್ಕ ಕಂ ಟೈಪಿಸ್ಟ್	1	1	0	
3	ಶುಶ್ರೂಷಣಾಧಿಕಾರಿಗಳು	4	4	0	
4	ಕಿರಿಯ ಫಾರ್ಮಾಸಿ ಅಧಿಕಾರಿಗಳು	6	4	2	
5	ಕಿರಿಯ ಪ್ರಯೋಗಶಾಲಾ ತಂತ್ರಜ್ಞರು	5	4	1	
6	ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು	1	0	1	
7	ಹಿರಿಯ ಪುರುಷ ಆರೋಗ್ಯ ಸಹಾಯಕ	3	3	0	
8	ಕಿರಿಯ ಪುರುಷ ಆರೋಗ್ಯ ಸಹಾಯಕ	27	10	17	
9	ಹಿರಿಯ ಮಹಿಳಾ ಆರೋಗ್ಯ ಸಹಾಯಕಿ	4	4	0	
10	ಕಿರಿಯ ಮಹಿಳಾ ಆರೋಗ್ಯ ಸಹಾಯಕಿ	37	18	19	
11	ನೇತ್ರಾಧಿಕಾರಿಗಳು	1	1	0	
12	ವಾಹನ ಚಾಲಕರು	2	2	0	
	ಒಟ್ಟು	96	52	44	
	ಗ್ರೂಪ್-ಡಿ				
1	ಗ್ರೂಪ್-ಡಿ	10	5	5	
	ಒಟ್ಟು	10	5	5	
	ಸಾರ್ವಜನಿಕ ಆಸ್ಪತ್ರೆ ರಾಮದುರ್ಗ, ಒಟ್ಟು	113	58	55	

ಸಾರ್ವಜನಿಕ ಆಸ್ಪತ್ರೆ ರಾಮದುರ್ಗ ಮಂಜೂರು ಕಾರ್ಯನಿರತ ಖಾಲಿ ಹುದ್ದೆಗಳ ವಿವರ ದಿ:16.03.2021ರಲ್ಲಿ					
ಅನುಬಂಧ-1					
ಕ್ರ.ಸಂ	ಹುದ್ದೆ	ಮಂಜೂರು	ಕಾರ್ಯನಿರತ	ಖಾಲಿ	ಷರಾ
ಗ್ರೂಪ್-ಎ					
1	ಸ್ತ್ರೀ-ರೋಗ ತಂತಜ್ಞರು	1	1	0	
2	ಅರ್ಥೋ	1	1	0	
3	ನೇತ್ರ ತಜ್ಞರು	1	1	0	
4	ಮುಖ್ಯ ವೈದ್ಯಾಧಿಕಾರಿಗಳು	1	1	0	
5	ಅರವಳಿಕೆ ತಜ್ಞರು	1	1	0	
6	ಚಿಕ್ಕ ಮಕ್ಕಳ ತಜ್ಞರು	1	1	0	ಗುತ್ತಿಗೆ
7	ದಂತ ವೈದ್ಯಾಧಿಕಾರಿಗಳು	2	0	2	ಸಮುದಾಯ ಆರೋಗ್ಯ ಕೇಂದ್ರ. ಹೊಸಕೋಟಿಯಿಂದ ನಿಯೋಜನ
8	ಫಿಜಿಶಿಯನ್	1	0	1	
9	ಜನರಲ್ ಮೆಡಿಸಿನ್	1	0	1	
10	ಚರ್ಮ ರೋಗ ತಜ್ಞರು	1	0	1	
11	ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು	2	0	2	
	ಒಟ್ಟು	13	6	7	
ಗ್ರೂಪ್-ಬಿ					
1	ಸಹಾಯಕ ಆಡಳಿತಾಧಿಕಾರಿಗಳು	1	1	0	
	ಒಟ್ಟು	1	1	0	
ಗ್ರೂಪ್-ಸಿ					
1	ಪ್ರಥಮ ದರ್ಜೆ ಸಹಾಯಕರು	2	1	1	
2	ದ್ವಿತೀಯ ದರ್ಜೆ ಸಹಾಯಕರು	1	0	1	
3	ಶುಶ್ರೂಷಣಾಧಿಕಾರಿಗಳು ಗ್ರೇಡ್-2	1	0	1	
4	ಶುಶ್ರೂಷಣಾಧಿಕಾರಿಗಳು	13	13	0	
5	ಹಿರಿಯ ಫಾರ್ಮಾಸಿ ಅಧಿಕಾರಿಗಳು	1	1	0	
6	ಕಿರಿಯ ಫಾರ್ಮಾಸಿ ಅಧಿಕಾರಿಗಳು	1	1	0	
7	ಹಿರಿಯ ಪ್ರಯೋಗಶಾಲಾ ತಂತ್ರಜ್ಞರು	1	1	0	
8	ಕಿರಿಯ ಪ್ರಯೋಗಶಾಲಾ ತಂತ್ರಜ್ಞರು	2	2	0	
9	ಕಿರಿಯ ಮಹಿಳಾ ಆರೋಗ್ಯ ಸಹಾಯಕಿ	3	1	2	
10	ಕ್ಷ-ಕಿರಣ ತಂತ್ರಜ್ಞರು	1	0	1	
11	ವಾಹನ ಚಾಲಕರು	2	2	0	
	ಒಟ್ಟು	28	22	6	
ಗ್ರೂಪ್-ಡಿ					
1	ಗ್ರೂಪ್-ಡಿ	28	16	12	9 ನಿಗದಿಪಡಿಸಿದೆ
	ಒಟ್ಟು	28	16	12	
	ಸಾರ್ವಜನಿಕ ಆಸ್ಪತ್ರೆ ರಾಮದುರ್ಗ, ಒಟ್ಟು	70	45	25	

ಅನುಬಂಧ- 2

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ತಜ್ಞರು/ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ/ದಂತ ಆರೋಗ್ಯಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದ್ದು, ವಿಶೇಷ ನೇಮಕಾತಿ ಸಮಿತಿಯಿಂದ ನೇರ ನೇಮಕಾತಿ ಮುಖಾಂತರ 1460 ತಜ್ಞ ವೈದ್ಯರುಗಳ ಹುದ್ದೆಗಳನ್ನು(636 ಬ್ಯಾಕ್‌ಲಾಗ್ ಒಳಗೊಂಡಂತೆ), 1265 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು(19 ಬ್ಯಾಕ್‌ಲಾಗ್ ಹುದ್ದೆಗಳು ಸೇರಿದಂತೆ) ಹಾಗೂ 90 ದಂತ ಆರೋಗ್ಯಾಧಿಕಾರಿಗಳ ಹುದ್ದೆಗಳನ್ನು (02 ಬ್ಯಾಕ್‌ಲಾಗ್ ಹುದ್ದೆಗಳು ಸೇರಿದಂತೆ) ಭರ್ತಿ ಮಾಡಲು ಈಗಾಗಲೇ ಅಧಿಸೂಚನೆ ಸಂಖ್ಯೆ:ಎಸ್‌ಆರ್‌ಸಿ/68/2019-20, ದಿ:10.09.20 ನ್ನು ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಅಹ್ವಾನಿಸಲಾಗಿದ್ದು, ದಾಖಲೆಗಳ ಪರಿಶೀಲನೆ ಮುಗಿದಿರುತ್ತದೆ. ತಾತ್ಕಾಲಿಕ ಪಟ್ಟಿಯನ್ನು ಪ್ರಚುರಪಡಿಸುವ ಹಂತದಲ್ಲಿದೆ.

ಕಿರಿಯ ಆರೋಗ್ಯ ಸಹಾಯಕರು:

ಆಕುಕ ಇಲಾಖೆಯಲ್ಲಿ ಒಟ್ಟು 9850 ಕಿರಿಯ ಆರೋಗ್ಯ ಸಹಾಯಕ ಹುದ್ದೆಗಳು ಮಂಜೂರಾಗಿದ್ದು, ಖಾಲಿಯಿದ್ದ ಹುದ್ದೆಗಳ ಪೈಕಿ 2124 ಹುದ್ದೆಗಳನ್ನು 2018ನೇ ಸಾಲಿನಲ್ಲಿ ವಿಶೇಷ ನೇಮಕಾತಿ ನಿಯಮಗಳಡಿಯಲ್ಲಿ ಭರ್ತಿ ಮಾಡಲಾಗಿದ್ದು, ಒಟ್ಟಾರೆ 7123 ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರಸ್ತುತ 2727 ಹುದ್ದೆಗಳು ಖಾಲಿಯಿರುತ್ತವೆ.

ಶುಶ್ರೂಷಕರು:

ಆಕುಕ ಇಲಾಖೆಯಲ್ಲಿ ಒಟ್ಟು 8471 ಶುಶ್ರೂಷಕರ ಹುದ್ದೆಗಳು ಮಂಜೂರಾಗಿದ್ದು. ಖಾಲಿಯಿದ್ದ 4551 ಹುದ್ದೆಗಳ ಪೈಕಿ ಮೊದಲನೇ ಹಂತದಲ್ಲಿ 981 ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ. ಜೊತೆಗೆ ಸರ್ಕಾರದ ಅಧಿಸೂಚನೆ ಸಂಖ್ಯೆ ಹೆಚ್‌ಎಫ್‌ಡಬ್ಲ್ಯೂ 550 ಹೆಚ್‌ಎಸ್‌ಹೆಚ್ 2016 ದಿನಾಂಕ 27.05.2017ರಲ್ಲಿ ಶುಶ್ರೂಷಕರು (ಡಿಪ್ಲಮೋ ನರ್ಸಿಂಗ್)- 889 ಹುದ್ದೆಗಳಿಗೆ ರಾಜ್ಯವಲಯದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಶುಶ್ರೂಷಕರುಗಳಿಗೆ ಕೃಪಾಂಕ ಮತ್ತು ವಯೋಮಿತಿ ಸಡಿಲಿಕೆ ಸೌಲಭ್ಯಗಳನ್ನು ನೀಡಿ ಸರ್ಕಾರವು ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಿ ದಿನಾಂಕ:16.07.2020ರಲ್ಲಿ ಅಂತಿಮ ಆಯ್ಕೆಪಟ್ಟಿಯನ್ನು ಪ್ರಚುರ ಪಡಿಸಲಾಗಿದ್ದು, ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಪೈಕಿ ನೈಜತೆ ವರದಿಗಳು ಸ್ವೀಕೃತವಾಗಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಲಾಗಿರುತ್ತದೆ. ಪ್ರಸ್ತುತ 5790 ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, 2681 ಹುದ್ದೆಗಳು ಖಾಲಿಯಿರುತ್ತವೆ. ಇದರ ಜೊತೆಗೆ 5778 ಶುಶ್ರೂಷಕರನ್ನು ಎನ್.ಹೆಚ್.ಎಂ. ಮುಖಾಂತರ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆ.

ಫಾರ್ಮಾಸಿಸ್ಟ್, ಕ್ಷ-ಕಿರಣ ತಂತ್ರಜ್ಞರು ಹಾಗೂ ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ:

ಆಕುಕ ಇಲಾಖೆಯಲ್ಲಿ 2932 ಫಾರ್ಮಾಸಿಸ್ಟ್ ಹುದ್ದೆಗಳು ಮಂಜೂರಾಗಿದ್ದು, 1974 ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಹಾಗೂ 2411 ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರ ಹುದ್ದೆಗಳು ಮಂಜೂರಾಗಿದ್ದು, 1821 ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸರ್ಕಾರದ ಪತ್ರ ಸಂಖ್ಯೆ: ಆಕುಕ 709 ಹೆಚ್‌ಎಸ್‌ಎಂ 2017, ದಿನಾಂಕ:03.08.2019ರಲ್ಲಿ ಇಲಾಖೆಯಲ್ಲಿ ಪ್ರಸ್ತುತ ಖಾಲಿ ಇರುವ ಫಾರ್ಮಾಸಿಸ್ಟ್, ಕ್ಷ-ಕಿರಣ ತಂತ್ರಜ್ಞರು ಹಾಗೂ ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರ ಹುದ್ದೆಗಳನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 843 ವೆಚ್ಚ-5/2018, ದಿನಾಂಕ:26.07.2019ರಲ್ಲಿ ನೀಡಿರುವ ಸಹಮತಿ ಪ್ರಕಾರ ಈ ಕೆಳಕಂಡಂತೆ ಭರ್ತಿ ಮಾಡಲು ಅನುಮೋದನೆಯನ್ನು ನೀಡಿರುತ್ತಾರೆ.

Sl. No	Designation	No. of Posts				
		2019–20		2020–21		Total
		Regular	Outsource	Regular	Outsource	
1.	Jr. Lab Technician	150	150	–	–	300
2.	X-Ray Technici an	08	–	–	–	08
3.	Pharma cist	200	200	20 0	200	800

ಸರ್ಕಾರದ ಆದೇಶದ ಪ್ರಕಾರ ಹೊರ ಗುತ್ತಿಗೆ ಆಧಾರದ ಮೇಲೆ 150 ಕಿರಿಯ ವೈದ್ಯಕೀಯ ಪ್ರಯೋಗಶಾಲಾ ತಂತ್ರಜ್ಞರು ಮತ್ತು 400 ಫಾರ್ಮಾಸಿಸ್ಟ್ ಹುದ್ದೆಗಳನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ಭರ್ತಿ ಮಾಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. ಅಲ್ಲದೇ ಎನ್.ಹೆಚ್.ಎಂ. ಮುಖಾಂತರ 620 ಫಾರ್ಮಾಸಿಸ್ಟ್ ಹುದ್ದೆಗಳನ್ನು ಹಾಗೂ 1621 ಕಿರಿಯ ವೈದ್ಯಕೀಯ ಪ್ರಯೋಗಶಾಲಾ ತಂತ್ರಜ್ಞರನ್ನು ಗುತ್ತಿಗೆ ಆಧಾರದ ಮೇರೆಗೆ ನೇಮಕಾತಿ ಮಾಡಿಕೊಳ್ಳಲಾಗಿದೆ.

ಮುಂದುವರೆದು, ಇಲಾಖೆಯಲ್ಲಿ ಖಾಲಿ ಇರುವ 150 ಕಿರಿಯ ವೈದ್ಯಕೀಯ ಪ್ರಯೋಗ ಶಾಲಾ ತಂತ್ರಜ್ಞರು, 08 ಕ್ಷ–ಕಿರಣ ತಂತ್ರಜ್ಞರು ಹಾಗೂ 400 ಫಾರ್ಮಾಸಿಸ್ಟ್ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಕರ್ನಾಟಕ ಸಿವಿಲ್ ಸೇವೆಗಳ (ಸ್ಪರ್ಧಾತ್ಮಕ ಪರೀಕ್ಷೆಗಳು ಹಾಗೂ ಆಯ್ಕೆ ಮೂಲಕ ನೇಮಕಾತಿ (ಸಾಮಾನ್ಯ) ನಿಯಮಗಳು 2020ನ್ನು ರಚಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಕ್ರಮ ಕೈಗೊಳ್ಳಲಾಗುತ್ತಿದ್ದು, ಸದರಿ ನಿಯಮಗಳು ಜಾರಿಗೆ ಬಂದ ನಂತರ ಆ ನಿಯಮಗಳನ್ವಯ ತುಂಬಲು ಪರಿಶೀಲಿಸಲಾಗುತ್ತಿದೆ.

<u>ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ ಖಾಲಿ ಇರುವ ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.</u>

ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ ಖಾಲಿ ಇರುವ 293 ಅರೆ ವೈದ್ಯಕೀಯ ಹುದ್ದೆಗಳನ್ನು (ಗ್ರೂಪ್ 'ಬಿ' ವೃಂದದ 10 ಹುದ್ದೆಗಳು ಮತ್ತು ಗ್ರೂಪ್ 'ಸಿ' ವೃಂದದ 283 ಹುದ್ದೆಗಳು) ಭರ್ತಿ ಮಾಡುವ ಸಂಬಂಧ ಕರ್ನಾಟಕ ಸಿವಿಲ್ ಸೇವೆಗಳ (ಸ್ಪರ್ಧಾತ್ಮಕ ಪರೀಕ್ಷೆಗಳು ಹಾಗೂ ಆಯ್ಕೆ ಮೂಲಕ ನೇಮಕಾತಿ (ಸಾಮಾನ್ಯ) ನಿಯಮಗಳು 2020ನ್ನು ರಚಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಕ್ರಮ ಕೈಗೊಳ್ಳಲಾಗುತ್ತಿದ್ದು, ಸದರಿ ನಿಯಮಗಳು ಜಾರಿಗೆ ಬಂದ ನಂತರ ಆ ನಿಯಮಗಳನ್ವಯ ತುಂಬಲು ಪರಿಶೀಲಿಸಲಾಗುತ್ತದೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 2767
ಮಾನ್ಯ ಸದಸ್ಯರ ಹೆಸರು	: ಶ್ರೀ ತನ್ವೀರ್ ಸೇಠ್ (ನರಸಿಂಹರಾಜ)
ಉತ್ತರಿಸಬೇಕಾದ ದಿನಾಂಕ	: 18-03-2021
ಉತ್ತರಿಸುವ ಸಚಿವರು	: ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಮೈಸೂರು ನಗರದ ನರಸಿಂಹರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸುಸಜ್ಜಿತ ಆಸ್ಪತ್ರೆಯನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಇಲ್ಲ.
ಆ	ಇದ್ದಲ್ಲಿ, ವಿವರ ನೀಡುವುದು;	ಉದ್ಭವಿಸುವುದಿಲ್ಲ.
ಇ	2021-22ನೇ ಸಾಲಿನ ಅಯವ್ಯಯದಲ್ಲಿ ಅದಕ್ಕಾಗಿ ನಿಗದಿ ಪಡಿಸಲಾಗುವ ಅನುದಾನದ ವಿವರ ನೀಡುವುದು?	2021-22ನೇ ಸಾಲಿನಲ್ಲಿ ಇದಕ್ಕಾಗಿ ಅನುದಾನವನ್ನು ನಿಗದಿಪಡಿಸಿರುವುದಿಲ್ಲ.

ಆಕುಕ 48 ಎಸ್‌ಬಿವಿ 2021.

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 2652
ಮಾನ್ಯ ಸದಸ್ಯರ ಹೆಸರು	: ಶ್ರೀ ಪುಟ್ಟರಂಗಶೆಟ್ಟಿ ಸಿ (ಚಾಮರಾಜನಗರ)
ಉತ್ತರಿಸಬೇಕಾದ ದಿನಾಂಕ	: 18-03-2021
ಉತ್ತರಿಸುವ ಸಚಿವರು	: ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಚಾಮರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ವಿವಿಧ ಬಗೆಯ ಸರ್ಕಾರಿ ಆಸ್ಪತ್ರೆಗಳು ಯಾವುವು; ಸದರಿ ಆಸ್ಪತ್ರೆಗಳು ಯಾವ ಯಾವ ಸೌಲಭ್ಯಗಳನ್ನು ಹೊಂದಿವೆ;	ಚಾಮರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ವಿವಿಧ ಬಗೆಯ ಸರ್ಕಾರಿ ಆಸ್ಪತ್ರೆಗಳು ಈ ಕೆಳಕಂಡಂತಿವೆ: ಪ್ರಾಥಮಿಕ ಆರೋಗ್ಯ ಕೇಂದ್ರಗಳು = 16 ಸಮುದಾಯ ಆರೋಗ್ಯ ಕೇಂದ್ರಗಳು = 1 ಸಂಚಾರಿ ಆರೋಗ್ಯ ಘಟಕಗಳು = 1 ತಾಯಿ ಮತ್ತು ಮಕ್ಕಳ ಆಸ್ಪತ್ರೆ = 1 ಜಿಲ್ಲಾ ಆಸ್ಪತ್ರೆ = 1 ಸದರಿ ಆಸ್ಪತ್ರೆಗಳಲ್ಲಿ ದೊರೆಯುವ ಸೌಲಭ್ಯಗಳ ವಿವರವನ್ನು **ಅನುಬಂಧ -1**ರಲ್ಲಿ ನೀಡಲಾಗಿದೆ.
ಆ	ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಸಿಬ್ಬಂದಿಗಳ ಕೊರತೆ ನೀಗಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)	ಚಾಮರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಕೊರತೆ ಇರುವ ಸಿಬ್ಬಂದಿಗಳ ವಿವರಗಳನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ.
ಇ	ಚಾಮರಾಜನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಶಿಥಿಲಾವಸ್ಥೆಯಲ್ಲಿರುವ ಆಸ್ಪತ್ರೆಗಳು ಯಾವುವು; ಅವುಗಳ ಪುನರುಜ್ಜೀವನಕ್ಕೆ / ದುರಸ್ಥಿಗಾಗಿ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)	ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿರುವ ಶಿಥಿಲಾವಸ್ಥೆಯ ಆಸ್ಪತ್ರೆಗಳು ಯಾವುದು ಇರುವುದಿಲ್ಲ, ಹಾಲಿ ಕಟ್ಟಡ ನಿರ್ವಹಣೆಗಾಗಿ ಜಿಲ್ಲಾ ಪಂಚಾಯತ್‌ನ ಲೆಕ್ಕ ಶೀರ್ಷಿಕೆ:2210-00-101-0-36 ಅಡಿಯಲ್ಲಿ ಆರೋಗ್ಯ ಇಲಾಖೆಯ ಕಟ್ಟಡಗಳ ಹಾಗೂ ಉಪಕೇಂದ್ರಗಳ ದುರಸ್ಥಿಯನ್ನು ಮಾಡಲಾಗುತ್ತದೆ.
ಈ	ಇತ್ತೀಚಿನ ದಿನಗಳಲ್ಲಿ ಯುವ ಜನತೆ ಮಾರಣಾಂತಿಕ ಖಾಯಿಲೆಗಳಾದ ಹೃದಯ ಸಂಬಂಧಿ ಖಾಯಿಲೆ, ಕಿಡ್ನಿ ವೈಫಲ್ಯ, ಲೀವರ್ ಸಂಬಂಧಿ ಖಾಯಿಲೆ ಸಹಿತ ವಿವಿಧ ರೀತಿಯ ಕ್ಯಾನ್ಸರ್ ಖಾಯಿಲೆಗಳಿಗೆ ಬಲಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. ಈ ಎಲ್ಲಾ ಅಸಾಂಕ್ರಾಮಿಕ ರೋಗಗಳನ್ನು ಸಮುದಾಯ ಮಟ್ಟದಲ್ಲಿ ಹೆಚ್ಚವಾಗುತ್ತಿರುವುದನ್ನು ಗಮನಿಸಿ. ರಾಷ್ಟ್ರ ಮಟ್ಟದ ಸಮೀಕ್ಷೆಗಳನ್ನು ಕೈಗೊಂಡು ಎನ್.ಸಿ.ಡಿ ಕಾರ್ಯಕ್ರಮದ ಭಾಗವಾಗಿ ಇವುಗಳನ್ನು ಪರಿಗಣಿಸಿದೆ. ಇತ್ತೀಚಿಗೆ ಲಿವರ್ ಸಂಬಂಧಿ ಕಾಯಿಲೆ (AFLD- Acute Fatty Liver Disease) ಕೂಡ ಎನ್.ಪಿ.ಸಿ.ಡಿ.ಸಿ.ಎಸ್ ಕಾರ್ಯಕ್ರಮದ ಭಾಗವಾಗಿದೆ.

ಉ	ಈ ರೀತಿಯ ಖಾಯಿಲೆಗಳಿಗೆ ಬಲಿಯಾಗುತ್ತಿರುವುದಕ್ಕೆ ಕಾರಣವನ್ನು ತಿಳಿದುಕೊಳ್ಳುವುದಕ್ಕಾಗಿ ತಜ್ಞರ ಸಮಿತಿಗಳನ್ನು ಸರ್ಕಾರವು ರಚಿಸಿದೆಯೇ?	ಈ ಕೆಳಗೆ ಉಲ್ಲೇಖಿಸಿದ ಸಮೀಕ್ಷೆಗಳು ಮತ್ತು ವರದಿಗಳನ್ನು ಆಧರಿಸಿ ರಾಷ್ಟ್ರೀಯ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಮಾಡಲಾಗಿದೆ. 1. ಅಸಾಂಕ್ರಾಮಿಕ ರೋಗಗಳ ಜಾಗತಿಕ ವಸ್ತುಸ್ಥಿತಿ 2010 (Global Status Report on NCD 2010) 2. ವಿಶ್ವ ಆರೋಗ್ಯ ಸಂಸ್ಥೆಯ- ರಾಷ್ಟ್ರೀಯ ವರದಿ 2011. (World Health Organisation NCD 2011) 3. ಭಾರತೀಯ ವೈದ್ಯಕೀಯ ಕೌನ್ಸಿಲ್ ಸಂಶೋಧನಾವರದಿ 2006. (Indian Council of Medical Research 2006) 4. ಜಾಗತಿಕ ಆರೋಗ್ಯ ಮೌಲ್ಯಮಾಪನ ವರದಿ 2016. (Global Health Observatory Data 2016) ಮುಂದುವರೆದು, ರಾಜ್ಯ ಮಟ್ಟದಲ್ಲಿ ತಜ್ಞರ ಸಮಿತಿಯೊಂದನ್ನು ರಚಿಸಿ ಕರ್ನಾಟಕ ರಾಜ್ಯದ ಭೌಗೋಳಿಕ ಅಂಶಗಳು ಮತ್ತು ಜನರ ಜೀವನ ಶೈಲಿ ಮತ್ತು ಹವ್ಯಾಸಗಳ ಅಧ್ಯಯನ ಕೈಗೊಂಡು ಯೋಜಿಸಲು ಈಗಾಗಲೇ ಕ್ರಮವಹಿಸಲಾಗುತ್ತಿದೆ.

ಆಕುಕ 52 ಎಸ್‌ಬಿವಿ 2021.

(ಡಾ॥ ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಪ್ರಶ್ನೆ ಸಂಖ್ಯೆ:-2652 ಅನುಬಂಧ-1

ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹೊರರೋಗಿಗಳ ತಪಾಸಣೆ ಹಾಗೂ ಚಿಕಿತ್ಸೆ, ಸಾಮಾನ್ಯ ರೋಗಗಳಿಗೆ ಒಳರೋಗಿ ಚಿಕಿತ್ಸೆ, ಸಾಮಾನ್ಯ ಹೆರಿಗೆ ಹಾಗೂ ಪ್ರಯೋಗಶಾಲಾ ಪರೀಕ್ಷೆಗಳು, ಆರೋಗ್ಯ ಶಿಕ್ಷಣ/ಸಲಹೆ, ರೆಫರಲ್ ಸೇವೆಗಳು ಮುಂತಾದ ಸೌಲಭ್ಯಗಳು ಲಭ್ಯವಿರುತ್ತದೆ. ಇದಲ್ಲದೆ ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನವಾಗುತ್ತದೆ.

ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮೇಲಿನ ಎಲ್ಲಾ ಸೌಲಭ್ಯಗಳ ಜೊತೆಗೆ ತಜ್ಞ ವೈದ್ಯರ ಸೇವೆಗಳು ಸಹ ಲಭ್ಯವಿರುತ್ತದೆ.

ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಗರ್ಭಿಣಿಯರ ತಪಾಸಣೆ ಹೆರಿಗೆ ಹಾಗೂ ಹೆರಿಗೆ ನಂತರದ ಚಿಕಿತ್ಸಾ ಸೇವೆ, ನವಜಾತ ಶಿಶುಗಳ ಆರೈಕೆ, ಸಿಝೇರಿಯನ್ ಶಸ್ತ್ರಚಿಕಿತ್ಸೆ ಮತ್ತು ಕುಟುಂಬ ಕಲ್ಯಾಣ ಯೋಜನೆಯ ಕಾರ್ಯಕ್ರಮಗಳ ಅನುಷ್ಠಾನ.

ಸಂಚಾರಿ ಆರೋಗ್ಯ ಘಟಕವು ಹಳ್ಳಿಗಳಿಗೆ ಭೇಟಿ ನೀಡಿ ಹೊರರೋಗಿಗಳ ತಪಾಸಣೆ, ಚಿಕಿತ್ಸೆ ಹಾಗೂ ಸಾಮಾನ್ಯ ಪ್ರಯೋಗಶಾಲಾ ಪರೀಕ್ಷಾ ಸೌಲಭ್ಯಗಳನ್ನು ಹೊಂದಿರುತ್ತದೆ.

ತಾಲ್ಲೂಕು ಆಸ್ಪತ್ರೆಯು ಮೊದಲನೇ ಹಂತದ ರೆಫರಲ್ ಘಟಕವಾಗಿ ಕಾರ್ಯನಿರ್ವಹಿಸುತ್ತಿದ್ದು, ಇಲ್ಲಿ ಹೊರರೋಗಿಗಳ ತಪಾಸಣೆ ಹಾಗೂ ಚಿಕಿತ್ಸೆ, ಸಾಮಾನ್ಯ ರೋಗಗಳಿಗೆ ಒಳರೋಗಿ ಚಿಕಿತ್ಸೆ, ಹೆರಿಗೆ ಸೌಲಭ್ಯ, ಶಸ್ತ್ರಚಿಕಿತ್ಸೆಗಳು ಹಾಗೂ ಪ್ರಯೋಗಶಾಲಾ ಪರೀಕ್ಷೆಗಳು, ಆರೋಗ್ಯ ಶಿಕ್ಷಣ/ಸಲಹೆ, ರೆಫರಲ್ ಸೇವೆಗಳು. ಇದಲ್ಲದೆ ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನವಾಗುತ್ತದೆ.

ಜಿಲ್ಲಾ ಆಸ್ಪತ್ರೆಯಲ್ಲಿ ಹೊರರೋಗಿಗಳ ತಪಾಸಣೆ ಹಾಗೂ ಚಿಕಿತ್ಸೆ, ಒಳರೋಗಿ ಚಿಕಿತ್ಸೆ, ಹೆರಿಗೆ ಹಾಗೂ ಪ್ರಯೋಗಶಾಲಾ ಪರೀಕ್ಷೆಗಳು, ಆರೋಗ್ಯ ಶಿಕ್ಷಣ/ಸಲಹೆ, ರೆಫರಲ್ ಸೇವೆಗಳು, ದಂತ ವೈದ್ಯಕೀಯ ಸೌಲಭ್ಯಗಳು, ಪ್ರಯೋಗಾಲಯ ಸೌಲಭ್ಯ, ಎಕ್ಸರೇ, ಇಸಿಜಿ, ಆಂಬುಲೆನ್ಸ್ ಸೌಲಭ್ಯ, ಹಾಗೂ ಎನ್.ಸಿ.ಡಿ. ಕ್ಲಿನಿಕ್ ಮತ್ತು ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಸೌಲಭ್ಯಗಳನ್ನು ಮಾರ್ಗಸೂಚಿಗಳನ್ವಯ ನೀಡಲಾಗುವುದು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ಇಲ್ಲಿನ ಮಂಜೂರು ಕಾರ್ಯನಿರತ ಖಾಲಿ ಹುದ್ದೆಗಳ ಮಾಹಿತಿ

(ಗ್ರೂಪ್ ಎ.ಬಿ.ಸಿ ಮತ್ತು ಡಿ ವೃಂದ)

ಕ್ರ.ಸಂ	ಹುದ್ದೆಯ ಹೆಸರು	ಮಂಜೂರಾದ ಹುದ್ದೆ	ಭರ್ತಿಯಾದ ಹುದ್ದೆ	ಖಾಲಿ ಹುದ್ದೆ	ಷರಾ
1	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು	1	1	0	
2	ಜಿಲ್ಲಾ ಕಾರ್ಯಕ್ರಮ ಅಧಿಕಾರಿಗಳು	6	6	0	
3	ತಾಲ್ಲೋಕು ಆರೋಗ್ಯಾಧಿಕಾರಿ	4	4	0	
4	ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು	64	61	3	
5	ತಜ್ಞ ವೈದ್ಯರು	47	35	12	
6	ದಂತ ಆರೋಗ್ಯಾಧಿಕಾರಿಗಳು	6	4	2	
7	ಸಹಾಯಕ ಆಡಳಿತಾಧಿಕಾರಿ	4	4	0	
8	ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ	1	0	1	
9	ಜಿಲ್ಲಾ ಶುಶ್ರೂಷಣಾ ಅಧಿಕಾರಿ	1	0	1	
10	ಸಹಾಯಕ ಎಂಟಮಾಲಜಿಸ್ಟ್	2	0	2	
11	ಸರ್ವಿಸ್ ಇಂಜಿನಿಯರ್	1	0	1	
12	ಶುಶ್ರೂಷಕ ಅಧೀಕ್ಷಕರು ಗ್ರೇಡ್ –I	1	0	1	
		138	115	23	
1	ಉಪ ಆರೋಗ್ಯ ಶಿಕ್ಷಣಾಧಿಕಾರಿ	1	0	1	
2	ಸಹಾಯಕ ಸಾಂಖ್ಯಿಕ ಅಧಿಕಾರಿ	2	1	1	
3	ಕಛೇರಿ ಅಧೀಕ್ಷಕರು	7	7	0	
4	ಶುಶ್ರೂಷಕರು ಗ್ರೇಡ್ –2	3	0	3	
5	ಹಿರಿಯ ಶುಶ್ರೂಷಕರು	3	2	1	
6	ಶುಶ್ರೂಷಕರು	123	116	7	
7	ಆರೋಗ್ಯ ಮೇಲ್ವಿಚಾರಕರು	2	1	1	
8	ಪ್ರಥಮ ದರ್ಜೆ ಸಹಾಯಕರು	59	12	47	
9	ದ್ವಿತೀಯ ದರ್ಜೆ ಸಹಾಯಕರು	37	17	20	
10	ಸಹಾಯಕ ಹಾಗೂ ಬೆರಳಚ್ಚುಗಾರರು	2	0	2	
11	ಕ್ಷೇತ್ರ ಆರೋಗ್ಯ ಶಿಕ್ಷಕ	18	1	17	
12	ಹಿರಿಯ ಪುರುಷ ಆರೋಗ್ಯ ಸಹಾಯಕ	34	13	21	
13	ಹಿರಿಯ ಮಹಿಳಾ ಆರೋಗ್ಯ ಸಹಾಯಕಿ	33	7	26	
14	ಕಿರಿಯ ಪುರುಷ ಆರೋಗ್ಯ ಸಹಾಯಕ	103	16	87	
15	ಕಿರಿಯ ಮಹಿಳಾ ಆರೋಗ್ಯ ಸಹಾಯಕಿ	262	100	162	
16	ಹಿರಿಯ ಫಾರ್ಮಸಿಸ್ಟ್	6	0	6	
17	ಕಿರಿಯ ಫಾರ್ಮಸಿಸ್ಟ್	70	18	52	
18	ಹಿರಿಯ ಪ್ರಯೋಗ ಶಾಲಾ ತಂತ್ರಜ್ಞರು	8	5	3	
19	ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರು	60	21	39	
20	ಕಿರಿಯ ವೈದ್ಯೇತರ ಕಾರ್ಯಕರ್ತರು	6	0	6	
21	ಫಿಜಿಯೋಥೆರಪಿಸ್ಟ್ (ಸಾಮಾನ್ಯ)	1	1	0	
22	ಲೆಪ್ರೋಸಿ ಫಿಜಿಯೋಥೆರಪಿಸ್ಟ್	1	0	1	
23	ಹಿರಿಯ ವೈದ್ಯೇತರ ಮೇಲ್ವಿಚಾರಕರು	2	0	2	
24	ಬೆರಳಚ್ಚುಗಾರರು	4	1	3	
25	ಶೀಘ್ರಲಿಪಿಗಾರರು	1	0	1	
26	ನೇತ್ರ ಸಹಾಯಕರು	11	9	2	

27	ಕ್ಷ-ಕಿರಣ ತಂತ್ರಜ್ಞ	12	12	0	
28	ವಾಹನ ಚಾಲಕರು	41	14	27	
29	ಸಾಮಾಜಿಕ ಕಾರ್ಯಕರ್ತರು	1	0	1	
30	ಡೆಂಟಲ್ ಮೆಕಾನಿಕ್	1	0	1	
		914	374	540	
31	ಗ್ರೂಪ್.ಡಿ	301	52	249	
		301	52	249	
	ಒಟ್ಟು	1353	541	812	

ಸಹಾಯಕ ಆಡಳಿತಾಧಿಕಾರಿ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣ ಕಛೇರಿ, ಚಾಮರಾಜನಗರ

ಕರ್ನಾಟಕ ವಿಧಾನಸಭೆ		
1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2066
2	ಮಾನ್ಯ ಸದಸ್ಯರ ಹೆಸರು	ಶ್ರೀ ಸಂಜೀವ ಮಠಂದೂರ್ (ಪುತ್ತೂರು)
3	ಉತ್ತರಿಸಬೇಕಾದ ದಿನಾಂಕ	18.03.2021
4	ಉತ್ತರಿಸಬೇಕಾದ ಸಚಿವರು	ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಹೊಸದಾಗಿ 2021-22ರ ಸಾಲಿನಲ್ಲಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆಯೇ;	2021-22ರ ಸಾಲಿನಲ್ಲಿ ಕೆಳಕಂಡ ಹೊಸ ವೈದ್ಯಕೀಯ ಕಾಲೇಜುಗಳಿಗೆ ವಿಶ್ವವಿದ್ಯಾಲಯದಿಂದ Consent of Affiliation ಹಾಗೂ ಸರ್ಕಾರದಿಂದ EC & FC ನ್ನು ನೀಡಲಾಗಿದೆ. **ಖಾಸಗಿ ವೈದ್ಯಕೀಯ ಕಾಲೇಜು** 1. ಜಿ.ಆರ್.ವೈದ್ಯಕೀಯ ಕಾಲೇಜು, ಆಸ್ಪತ್ರೆ ಹಾಗೂ ಸಂಶೋಧನಾ ಸಂಸ್ಥೆ, ಮಂಗಳೂರು (150 ಸೀಟುಗಳಿಗೆ) **ಸರ್ಕಾರಿ ವೈದ್ಯಕೀಯ ಕಾಲೇಜುಗಳು** 1. ಚಿಕ್ಕಬಳ್ಳಾಪುರ ವೈದ್ಯಕೀಯ ಕಾಲೇಜು (150 ಸೀಟುಗಳು) 2. ಚಿಕ್ಕಮಗಳೂರು ವೈದ್ಯಕೀಯ ಕಾಲೇಜು (150 ಸೀಟುಗಳು) 3. ಹಾವೇರಿ ವೈದ್ಯಕೀಯ ಕಾಲೇಜು (150 ಸೀಟುಗಳು) 4. ಯಾದಗಿರಿ ವೈದ್ಯಕೀಯ ಕಾಲೇಜು (150 ಸೀಟುಗಳು)
ಆ)	ಹೊಸ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸುವುದಾದರೆ ಯಾವ ಮಾನ ದಂಡಗಳನ್ನು ಅನುಸರಿಸಲಾಗುವುದು? (ಸಂಪೂರ್ಣ ಮಾಹಿತಿ ಒದಗಿಸುವುದು.	ಹೊಸದಾಗಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ನ್ಯಾಷನಲ್ ಮೆಡಿಕಲ್ ಕಮಿಷನ್(MCI) ವಿಧಿಸಿರುವ ಮಾನದಂಡಗಳನ್ನು ಅನುಸರಿಸಲಾಗುವುದು. (MINIMUM STANDARD REQUIREMENTS FOR THE MEDICAL COLLEGE FOR 150 ADMISSIONS ANNUALLY REGULATIONS, 1999)ನ್ನು ಈ ಕೆಳಗಿನ ಲಿಂಕ್ ಮೂಲಕ ಪಡೆಯಬಹುದಾಗಿದೆ. https://www.nmc.org.in/wp-content/uploads/2017/10/Minimum-Standard-Requirements-for-150-Admissions.pdf

(ಎಂಇಡಿ 54 ಆರ್‌ಐ 2021)

(ಡಾ.ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕಲ್ಪಿಸಲಾಗಿದೆ? (ಸಂಪೂರ್ಣ ವಿವರ ನೀಡುವುದು)

ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 290 ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ಒದಗಿಸಲಾಗಿರುತ್ತದೆ.

ಡೇ–ನಲ್ಮ್:

ಕಳೆದ 3 ವರ್ಷಗಳಲ್ಲಿ ನಿರುದ್ಯೋಗಿಗಳಿಗೆ ವೈಯಕ್ತಿಕ ಮತ್ತು ಗುಂಪು ಕಿರುಉದ್ದಿಮೆಯನ್ನು ಪ್ರಾರಂಭಿಸಲು ಈ ಕೆಳಕಂಡಂತೆ ಅವಕಾಶವನ್ನು ಕಲ್ಪಿಸಲಾಗಿದೆ.

ಕ್ರ ಸಂ	ನಗರ ಸ್ಥಳೀಯ ಸಂಸ್ಥೆಯ ಹೆಸರು	ವೈಯಕ್ತಿಕ ಕಿರು ಉದ್ದಿಮೆ	ಗುಂಪು ಕಿರು ಉದ್ದಿಮೆ
1	ಚಾಮರಾಜನಗರ	43	4
2	ಕೊಳ್ಳೇಗಾಲ	13	0
3	ಗುಂಡ್ಲುಪೇಟೆ	13	1
4	ಯಳಂದೂರು	12	0
5	ಹನೂರು	2	0

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM):

1. ಡಿಡಿಯುಜಿಕೆವೈ ಯೋಜನೆಯಡಿ ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಯಲ್ಲಿ 446 ಅಭ್ಯರ್ಥಿಗಳಿಗೆ ತರಬೇತಿ ನೀಡಿದ್ದು, ಒಟ್ಟು 68 ಅಭ್ಯರ್ಥಿಗಳಿಗೆ ವೇತನಾಧಾರಿತ ಉದ್ಯೋಗ ಕಲ್ಪಿಸಲಾಗಿದೆ.
2. ಆರ್‌ಸೆಟಿ ಯೋಜನೆಯಡಿ 2091 ಅಭ್ಯರ್ಥಿಗಳಿಗೆ ಸ್ವಉದ್ಯೋಗ ತರಬೇತಿ ನೀಡಲಾಗಿದೆ.

ಸಿಡಾಕ್:

ಈ ಯೋಜನೆಯಡಿ ಚಾಮರಾಜನಗರ ಜಿಲ್ಲೆಯಲ್ಲಿ ತರಬೇತಿ ಪಡೆದ ಹಾಗೂ ಸ್ವಯಂ ಉದ್ಯೋಗ ಕೈಗೊಂಡವರ ವಿವರಗಳು ಈ ಕೆಳಗಿನಂತಿವೆ.

ವರ್ಷ	ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ	ಸ್ವಂತ ಉದ್ಯೋಗ ಕೈಗೊಂಡ ಅಭ್ಯರ್ಥಿಗಳ ಸಂಖ್ಯೆ
2017–18	400	240
2018–19	1075	640
2019–20	220	136

ಸಂಖ್ಯೆ: ಕೌಉಜೀಇ 10 ಉಜೀಪ್ರ 2021

(ಡಾ॥ ಸಿ.ಎನ್. ಅಶ್ವಥ್‌ನಾರಾಯಣ)
ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ, ಐಟಿ/ಬಿಟಿ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.

	ಪಾಂಡವಪುರ	ಮೇಲುಕೋಟೆ. ತೊಣ್ಣೂರು ಕೆರೆ. ಕುಂತಿಬೆಟ್ಟ. ಆರತಿ ಉಕ್ಕಡ	4
	ಮದ್ದೂರು	ಕೊಕ್ಕರೆ ಬೆಳ್ಳೂರು. ಶಿವಪುರ ಸತ್ಯಾಗ್ರಹ ಸೌಧ. ಅರತಿಪ್ಪುರದ ಜೈನ ಸ್ಮಾರಕಗಳು ಹನುಮಂತನಗರದ ಪರಿಸರ ಉದ್ಯಾನವನ.	4
	ಶ್ರೀರಂಗ ಪಟ್ಟಣ	ಕೃಷ್ಣರಾಜಸಾಗರ ಅಣೆಕಟ್ಟು. ಬೃಂದಾವನ ಗಾರ್ಡನ್. ರಂಗನತಿಟ್ಟು. ಹುಲಿಕೆರೆ. ಶ್ರೀರಂಗಪಟ್ಟಣ. ಬಲಮುರಿ ಮತ್ತು ಎಡಮುರಿ. ಸಂಗಮ. ಗೋಸಾಯಿ ಘಾಟ್. ಕರಿಘಟ್ಟ. ಮಹದೇವಪುರ.	10
	ಮಳವಳ್ಳಿ	ಶಿವನ ಸಮುದ್ರ. ಅಂತರವಳ್ಳಿ. ಮುತ್ತತ್ತಿ. ಚಿಕ್ಕಮುತ್ತತ್ತಿ.	4
	ನಾಗಮಂಗಲ	ಆದಿಚುಂಚನಗಿರಿ. ಹಾಲತಿಬೆಟ್ಟ. ಕಂಬದಹಳ್ಳಿ. ಕೋಟೆಬೆಟ್ಟ	4
ಚಾಮರಾಜ ನಗರ	ಚಾಮರಾಜ ನಗರ	ಕನಕಗಿರಿ. ಚಿಕ್ಕಹೊಳೆ ಜಲಾಶಯ. ಕರಿವರದರಾಜ ಬೆಟ್ಟ. ಸುವರ್ಣವತಿ ಜಲಾಶಯ. ಬೂದಿಪಡಗ. ಕ್ಯಾತದೇವರಗುಡಿ (ಕೆ.ಗುಡಿ). ನರಸಮಂಗಲ.	7
	ಗುಂಡ್ಲುಪೇಟೆ	ಬಂಡೀಪುರ. ಹಿಮವದ್ ಗೋಪಾಲಸ್ವಾಮಿ ಬೆಟ್ಟ. ತೆರಕಣಾಂಬಿ. ಹುಲುಗನಮರಡಿ. ಕಂದೇಗಾಲ ಪಾರ್ವತಿ ಬೆಟ್ಟ. ತ್ರಿಯಂಬಕಪುರ.	6
	ಯಳಂದೂರು	ಬಿಳಿಗಿರಿ ರಂಗನ ಬೆಟ್ಟ. ಬಳೆಮಂಟಪ	2
	ಕೊಳ್ಳೇಗಾಲ	ಕೊಳ್ಳೇಗಾಲ. ಹೊಗೆನಕಲ್ ಫಾಲ್ಸ್. ಭರಚುಕ್ಕಿ, ಜಲಪಾತ. ವೆಸ್ಲೀ ಸೇತುವೆ	4

...3.

	ಶಿರಾ	ಶಿರಾ ಕಸ್ತೂರಿ ರಂಗಪ್ಪನಾಯಕ ಕೋಟೆ.	1
	ಕುಣಿಗಲ್	ಯಡಿಯೂರು. ಮಾರ್ಕೋನಹಳ್ಳಿ, ಹುತ್ರಿದುರ್ಗ ಬೆಟ್ಟ. ಹುಲಿಯೂರು ದುರ್ಗ ಬೆಟ್ಟ. ಕುಣಿಗಲ್ ಕೆರೆ.	
	ಪಾವಗಡ	ಪಾವಗಡ	
	ಮಧುಗಿರಿ	ನಿಡಗಲ್ [illegible] ಬೆಟ್ಟ. [illegible] ಬೆಟ್ಟ.	
	ತಿಪಟೂರು	ಅರಳಗುಪ್ಪ	1
	ಗುಬ್ಬಿ	ಗುಬ್ಬಿ	1
	ತುರುವೆಕೆರೆ	ತುರುವೆಕೆರೆ	
	ಚಿಕ್ಕನಾಯಕನಹಳ್ಳಿ	ಹಂದನಕೆರೆ. ಬೋರನಕಣಿವೆ ಜಲಾಶಯ.	2
		ಒಟ್ಟು	[illegible]

ವಿ. ಸ. ಪ್ರಶ್ನೆ ಸಂಖ್ಯೆ: ೩೦೦೮ ಕ್ಕೆ

ಅನುಬಂಧ-2

ಮೈಸೂರು ವಿಭಾಗದಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ 2020-25 ರ ಕರ್ನಾಟಕ ಪ್ರವಾಸೋದ್ಯಮ ನೀತಿಯಡಿ ಗುರುತಿಸಿರುವ ಪ್ರವಾಸಿ ತಾಣಗಳ ವಿವರ

ಕ್ರ.ಸಂ.	ಜಿಲ್ಲೆ	ತಾಲ್ಲೂಕು	2020-25 ಪ್ರವಾಸೋದ್ಯಮ ನೀತಿಯನ್ವಯ ಗುರುತಿಸಿರುವ ಪ್ರವಾಸಿ ತಾಣಗಳು	ಪ್ರವಾಸಿ ತಾಣಗಳ ಸಂಖ್ಯೆ
1	ಮೈಸೂರು	ಮೈಸೂರು	ಮೈಸೂರು ಅರಮನೆ ಮತ್ತು ಆರ್ಟ್ ಗ್ಯಾಲರಿ. ಶ್ರೀ ಚಾಮರಾಜೇಂದ್ರ ಪ್ರಾಣಿಸಂಗ್ರಹಾಲಯ ಉದ್ಯಾನವನ. ಚಾಮುಂಡಿ ಬೆಟ್ಟ. ವರುಣಕೆರೆ. ಲಿಂಗಾಂಬುದಿಕೆರೆ. ಕಾವೇರಿ ನದಿ ಬಹುಮಾಧ್ಯಮ ಗ್ಯಾಲರಿ.	8
		ಟಿ. ನರಸೀಪುರ	ತಲಕಾಡು. ಸೋಮನಾಥಪುರ. ಗರ್ಗೇಶ್ವರಿ. ಕಾವೇರಿ ನದಿ ಪಾತ್ರ	4
		ನಂಜನ ಗೂಡು	ನಂಜನಗೂಡು. ತಗಡೂರು ದೇವಾಲಯಗಳ ಸಮೂಹ. ಬದನವಾಳು ಗಾಂಧೀಜಿ ಆಶ್ರಮ	3
		ಹೆಚ್.ಡಿ. ಕೋಟೆ	[illegible]ಪುರ, ಕಬಿನಿ ಜಲಾಶಯ/ಹಿನ್ನೀರು	2
		ಹುಣಸೂರು	ಗೊಮ್ಮಟಗಿರಿ. ನಾಗರಹೊಳೆ ರಾಷ್ಟ್ರೀಯ ಉದ್ಯಾನವನ. ಚಿಕ್ಕ ಹುಣಸೂರು ಕೆರೆ.	3
		ಪಿರಿಯಾ ಪಟ್ಟಣ	ಬೈಲುಕುಪ್ಪೆ ಗೋಲ್ಡನ್ ಟೆಂಪಲ್	1
		ಕೆ.ಆರ್. ನಗರ	ಚುಂಚನಕಟ್ಟೆ ಜಲಪಾತ	1
		ಸಾಲಿಗ್ರಾಮ	ಸಾಲಿಗ್ರಾಮ ದೊಡ್ಡಕೆರೆ	1
		ಸರಗೂರು	ಚಿಕ್ಕದೇವಮ್ಮನ ಬೆಟ್ಟ. ಕಬಿನಿ ಜಲಾಶಯ. ತಾರಕ ಜಲಾಶಯ. ನುಗು ಜಲಾಶಯ	4
2	ಮಂಡ್ಯ	ಮಂಡ್ಯ	[illegible]ದಾಳು. ಹೊಸಬೂದನೂರು. ಗುತ್ತಲು ಕೆರೆ. ಕೊನನಹಳ್ಳಿ ಕೆರೆ	4
		ಕೆ.ಆರ್. ಪೇಟೆ	ಧರಿಯಾ ದೌಲತ್. ಹೊಸಹೊಳಲು. ಕಿಕ್ಕೇರಿ. ಹೇಮಗಿರಿ ಜಲಪಾತ	4

..2..

		ಪಾಂಡವಪುರ	ಮೇಲುಕೋಟೆ. ತೊಣ್ಣೂರು ಕೆರೆ. ಕುಂತಿಬೆಟ್ಟ. ಆರತಿ ಉಕ್ಕಡ	4
		ಮದ್ದೂರು	ಕೊಕ್ಕರೆ ಬೆಳ್ಳೂರು, ಶಿವಪುರ ಸತ್ಯಾಗ್ರಹ ಸೌಧ. ಅರೆತಿಪ್ಪೂರದ ಜೈನ ಸ್ಮಾರಕಗಳು. ಹನುಮಂತನಗರದ ಪರಿಸರ ಉದ್ಯಾನವನ.	4
		ಶ್ರೀರಂಗ ಪಟ್ಟಣ	ಕೃಷ್ಣರಾಜಸಾಗರ ಅಣೆಕಟ್ಟು. ಬೃಂದಾವನ ಗಾರ್ಡನ್. ರಂಗನತಿಟ್ಟು. ಕುಲಿಕೆರೆ. ಶ್ರೀರಂಗಪಟ್ಟಣ. ಬಲಮುರಿ ಮತ್ತು ಎಡಮುರಿ. ಸಂಗಮ. ಗೋಸಾಯಿ ಘಾಟ್. ಕರಿಘಟ್ಟ. ಮಹದೇವಪುರ.	10
		ಮಳವಳ್ಳಿ	ಶಿವನ ಸಮುದ್ರ, ಅಂತರವಳ್ಳಿ. ಮುತ್ತತ್ತಿ. ಚಿಕ್ಕಮುತ್ತತ್ತಿ.	4
		ನಾಗಮಂಗಲ	ಆದಿಚುಂಚನಗಿರಿ, ಹಾಲತಿಬೆಟ್ಟ. ಕಂಬದಹಳ್ಳಿ. ಕೋಟೆಬೆಟ್ಟ	4
3	ಚಾಮರಾಜ ನಗರ	ಚಾಮರಾಜ ನಗರ	ಕನಕಗಿರಿ. ಚಿಕ್ಕಹೊಳೆ ಜಲಾಶಯ. ಕರಿವರದರಾಜ ಬೆಟ್ಟ ಸುವರ್ಣಾವತಿ ಜಲಾಶಯ. ಬೂದಿಪಡಗ. ಕ್ಯಾತದೇವರಗುಡಿ (ಕೆ.ಗುಡಿ), ನರಸಮಂಗಲ.	7
		ಗುಂಡ್ಲುಪೇಟೆ	ಬಂಡೀಪುರ. ಹಿಮವದ್ ಗೋಪಾಲಸ್ವಾಮಿ ಬೆಟ್ಟ. ತೆರಕಣಾಂಬಿ, ಹುಲುಗನಮರಡಿ. ಕಂದೇಗಾಲ ಪಾರ್ವತಿ ಬೆಟ್ಟ. ತ್ರಯಂಬಕಪುರ.	6
		ಯಳಂದೂರು	ಬಿಳಿಗಿರಿ ರಂಗನ ಬೆಟ್ಟ. ಬಳೆಮಂಟಪ.	2
		ಕೊಳ್ಳೇಗಾಲ	ಕೊಳ್ಳೇಗಾಲ. ಹೊಗೆನಕಲ್ ಫಾಲ್ಸ್. ಭರಚುಕ್ಕಿ ಜಲಪಾತ. ವೆಸ್ಲೀ ಸೇತುವೆ	4

...3..

		ಹನೂರು	ಮಲೇಮಹದೇಶ್ವರ ಬೆಟ್ಟ. ಹೊಗೆನಕಲ್ ಫಾಲ್ಸ್-ಗೋಪಿನಾಥಂ. ಪಾಲಾರಗಡಿ. ಒಡೆಯರಪಾಳ್ಯ. ಹೊನ್ನಮೇಟಿ ಅತ್ತೀಖಾನೆ.	5
4	ಚಿಕ್ಕ ಮಗಳೂರು	ಚಿಕ್ಕಮಗಳೂರು	ಮುಳ್ಳಯ್ಯನಗಿರಿ. ಬಾಬಾಬುಡನ್‌ಗಿರಿ. ಹಿರೇಮಗಳೂರು. ಮುತ್ತೋಡಿ ಗೇಮ್ ಸ್ಯಾಂಚುರಿ. ಬೆಳವಾಡಿ ರತ್ನಗಿರಿ ಭೋರ ಉದ್ಯಾನವನ. ಮಾಣಿಕ್ಯಧಾರ ಫಾಲ್ಸ್. ಖಾಂಡ್ಯ. ದೇವಿರಮ್ಮನ ಬೆಟ್ಟ. ಗಾಳಿಗೆರ ಭೀಮಗಧಾ ತೀರ್ಥ. ಬಸವನಹಳ್ಳಿ ಕೆರೆ (ದಂಡರಮಕ್ಕಿ). ಕೋಟೆಕೆರೆ.	12
		ತರೀಕೆರೆ	ಕೆಮ್ಮಣ್ಣುಗುಂಡಿ. ಅಮೃತಪುರ ಭದ್ರ ಪ್ರಾಜೆಕ್ಟ್. ಕಲ್ಹತ್ತಿ/ಕಾಳಹಸ್ತಿ ಫಾಲ್ಸ್.	3
		ಮೂಡಿಗೆರೆ	ಕಳಸ. ಹೊರನಾಡು. ಕುದುರೆಮುಖ. ಅಂಗಡಿ. ಬಲ್ಲಾಳರಾಯನದುರ್ಗ	5
		ಶೃಂಗೇರಿ	ಶೃಂಗೇರಿ. ಕಿಗ್ಗಾ. ಸಿರಿಮನೆ ಫಾಲ್ಸ್	3
		ಕಡೂರು	ಅಯ್ಯನಕೆರೆ, ಹೇಮಗಿರಿ. ಸಖರಾಯಪಟ್ಟಣ.	3
		ಕೊಪ್ಪ	ಹಿರೇಕೊಡಿಗೆ.	1
		ನರಸಿಂಹರಾಜಪುರ	ಸಿಂಹನಗದ್ದೆ	1
5	ಕೊಡಗು	ಮಡಿಕೇರಿ	ಮಡಿಕೇರಿ. ಅಬ್ಬಿಫಾಲ್ಸ್. ತಲಕಾವೇರಿ. ನಾಲ್ಕುನಾಡು ಅರಮನೆ. ಭಾಗಮಂಡಲ, ಮಾಂದಲಪಟ್ಟಿ. ರಾಜರಗದ್ದುಗೆ. ಮಡಿಕೇರಿ ಕೋಟೆ. ರಾಜಾಸೀಟ್. ನಿಶಾನೆಮೊಟ್ಟೆ. ಚೆಲಾವರ ಫಾಲ್ಸ್.	10
		ಸೋಮವಾರಪೇಟೆ	ಕಾವೇರಿ ನಿಸರ್ಗ ಧಾಮ. ಹಾರಂಗಿ ಜಲಾಶಯ. ಚೆಟ್ಟಳ್ಳಿ ಫಾರ್ಮ್. ದುಬಾರೆ. ಹೊನ್ನಮ್ಮಕೆರೆ. ಮಕ್ಕಳಗುಡಿ ಬೆಟ್ಟ. ಮಲ್ಲಳ್ಳಿ ಫಾಲ್ಸ್. ಚಿಕ್ಲಿಹೊಳೆ.	8
		ವೀರಾಜಪೇಟೆ	ನಾಗರಹೊಳೆ ರಾಷ್ಟ್ರೀಯ ಉದ್ಯಾನವನ. ಇರ್ಪು. ಕುಂದಾಡಬೆಟ್ಟ. ಭರ್ಪೊಳೆ ರಿವರ ರಾಫ್ಟಿಂಗ್.	4

..4..

6	ದಕ್ಷಿಣ ಕನ್ನಡ	ಮಂಗಳೂರು	ಸೂರತ್‌ಕಲ್. ಪಣಂಭೂರು. ಉಲ್ಲಾಳ. ಸೋಮೇಶ್ವರ. ಕಟೀಲು. ಮೂಡಬಿದರೆ. ತಣ್ಣೀರುಭಾವಿ. ಪಿಲಿಕುಳ ನಿಸರ್ಗಧಾಮ. ಸಸಿಹಿತ್ಲು ಬೀಚ್. ತಲಪಾಡಿ ಬೀಚ್. ನಲ್ಲಿತೀರ್ಥ ಗುಹಾಲಯ. ಗುರುಪುರ ನದಿ. ನೇತ್ರಾವತಿ ನದಿ. ಶ್ರೀಮಂತಿಬಾಯಿ ಸರ್ಕಾರಿ ಸಂಗ್ರಹಾಲಯ. ಸುಲ್ತಾನ್ ಭತೇರಿ ವಾಚ್ ಟವರ್. ಅಂಚೆಚೀಟಿಗಳ ಸಂಗ್ರಹ ಕೇಂದ್ರ-ಪಾಂಡೇಶ್ವರ	16
		ಬೆಳ್ತಂಗಡಿ	ಧರ್ಮಸ್ಥಳ. ವೇಣೂರು. ಜಮಲಾಬಾದ್ ಕೋಟೆ (ನರಸಿಂಹಗಡ). ಎರ್ಮಾಯಿ ಜಲಪಾತ. ದಿಡುಪೆ ಜಲಪಾತ. ಕಡಮಗುಂಡಿ ಜಲಪಾತ. ಪಶ್ಚಿಮ ಘಟ್ಟ	7
		ಸುಳ್ಯ	ತೋಡಿಕಾನ ಜಲಪಾತ-ಮತ್ಸ್ಯಧಾಮ. ಎಣ್ಮೂರು-ಬಂಟಮಲೆ ಮತ್ತು ಪೂಮಲೆ.	3
		ಪುತ್ತೂರು	ಬೇಂದ್ರೆ ತೀರ್ಥ. ಉಪ್ಪಿನಂಗಡಿ. ಶಿರಾಡಿ. ಬಿರುಮಲೆ ಬೆಟ್ಟ. ಪಡುಮಲೆ ಬೆಟ್ಟ. ಶಿವರಾಂ ಕಾರಂತ ಬಾಲವನ	6
		ಬಂಟ್ವಾಳ	ಅನಂತವಾಡಿಯ ಪಾಂಡವರ ಗುಹೆ	1
		ಮೂಡ ಬಿದರೆ	ಕೊಡಿಯಡ್ಕ. ಸಮ್ಮಿಲನ ಬಟರಫ್ಲೈ ಪಾರ್ಕ್-ಬೆಳುವಾಯಿ.	2
7	ಹಾಸನ	ಹಾಸನ	ಮೊಸಳೆ-ಹೊಸಹಳ್ಳಿ. ಶಾಂತಿಗ್ರಾಮ. ಕೊರವಂಗಲ. ದೊಡ್ಡಗದ್ದವಳ್ಳಿ. ಶೆಟ್ಟಿಹಳ್ಳಿ ಚರ್ಚ್. ಗೆಂಡೆಕಟ್ಟೆ ಪ್ರಕೃತಿವನ-ಬೂವನಹಳ್ಳಿ	6
		ಬೇಲೂರು	ಬೇಲೂರು. ಹಳೇಬೀಡು ಯಗಚಿ ಜಲಾಶಯ. ಹುಲಿಕೆರೆ ಪುಷ್ಕರಣಿ. ವಿಷ್ಣುಸಮುದ್ರಕೆರೆ. ಭದ್ರಕಾಳಿಬನ.	6

..5..

		ಅರಸೀಕೆರೆ	ಹಾರನಹಳ್ಳಿ, ಗಾಂಧೀಜಿ ಚಿತಾಭಸ್ಮ-ಅರಸಿಕೇರೆ. ನಾಗಪುರಿಕೋಟೆ (ಹೃದರಾಲಿ ನಿರ್ಮಿತ)	3
		ಸಕಲೇಶಪುರ	ಮರಗುಂದ, ಮುಂಜ್ರಾಬಾದ್ ಕೋಟೆ. ಮೂಕನಮನೆ ಜಲಪಾತ. ಅಬ್ಬಿ ಜಲಪಾತ. ಬಿಸ್ಲೆಘಾಟ್-ಬಿಸಿಲೆ. ಪಾಂಡವರಬೆಟ್ಟ. ಮೂರ್ಕಣ್ ಬೆಟ್ಟ. ಜೇನುಕಲ್ಲಬೆಟ್ಟ. ಗುಡ್ಡೆ ಬಸವಣ್ಣ. ಪಾಟ್ಲಬೆಟ್ಟ.	10
		ಚನ್ನರಾಯ ಪಟ್ಟಣ	ಶ್ರವಣಬೆಳಗೊಳ, ಬೆಲಸಿಂದ ಪ್ರಕೃತಿವನ	2
		ಅರಕಲ ಗೂಡು	ರಾಮನಾಥಪುರ, ಗೊರೂರು ಅಣೆಕಟ್ಟೆ, ತೂಗುಸೇತುವೆ-ಕೊಣನೂರು	3
		ಹೊಳೆ ನರಸೀಪುರ	ಶ್ರೀ ರಾಮದೇವರ ಬೆಟ್ಟ	1
		ಬೇಲೂರು	ಪಾರ್ವತಮ್ಮಬೆಟ್ಟ. ಮಗನತಿಂದ ಮಹಾರಾಯಣಬೆಟ್ಟ (ಮಹಾರಾಜನದುರ್ಗ)	2
8	ಉಡುಪಿ	ಉಡುಪಿ	ಉಡುಪಿ. ಮಲ್ಪೆ. ಸೇಂಟ್ ಮೇರಿಸ್ ಐಲ್ಯಾಂಡ್. ಕಾಪು. ಕೂಡ್ಲು ತೀರ್ಥ. ಹಸ್ತಶಿಲ್ಪ ಮತ್ತು ಮಣ್ಣಪಳ್ಳ ಕೆರೆ. ಹೌಸ್‌ಬೋಟ್ ಕೋಡಿಬೆಂಗ್ರೆ. ಪಡುಕೆರೆ ಬೀಚ್. ಮಲ್ಪೆ ಸೀವಾಕ ವೇ & ಮಲ್ಪೆ ಬಂದರು. ನಾಣ್ಯ ಮ್ಯೂಸಿಯಂ. ಸಾಲುಮರದ ತಿಮ್ಮಕ್ಕ ಟ್ರೀ ಪಾರ್ಕ್. ಅರ್ಬಿ ಫಾಲ್ಸ್-ಮಣಿಪಾಲ.	12
		ಕಾರ್ಕಳ	ಸೋಮೇಶ್ವರ ಬೀಚ್. ಗೋಮಟೇಶ್ವರ ಬೆಟ್ಟ. ಕೋಟಿ ಚೆನ್ನಯ್ಯ ಥೀಮ್ ಪಾರ್ಕ್. ಚತುರ್ಮುಖ ಬಸದಿ. ಆನೆಕೆರೆ	5

..6..

		ಕುಂದಾಪುರ	ಮರವಂತೆ. ಕೊಲ್ಲೂರು. ಆನೆಜರಿ ಕೋಡಿ ಬೀಚ್. ಬಬ್ಬುಕುದ್ರು (ಪಂಚಗಂಗೊಳ್ಳಿ). ಮಲ್ಯಾಡಿ ಪಕ್ಷಿಧಾಮ. ಉಪ್ಪಿನಕುದ್ರು ದ್ವೀಪ. ಗಂಗೊಳ್ಳಿ ಬೀಚ್. ಹೌಸ್ ಬೋಟ್ ಸೌಪರ್ಣಿಕಾ ನದಿ.	9
		ಬ್ರಹ್ಮಾವರ	ಬಾರ್ಕೂರು ಕೋಟೆ. ಕತ್ತಲ ಬಸದಿ. ಡಿವೈನ್ ಪಾರ್ಕ್. ಸೂರಾಲು ಅರಮನೆ. ಬಾಳಕುದ್ರು (ಉಪ್ಪಿನಕೋಟೆ) ದ್ವೀಪ. ಕೋಟಾ ಶಿವರಾಮ ಕಾರಂತ್ ಥೀಮ್ ಪಾರ್ಕ್.	6
		ಕಾಪು	ಕಾಪು ಬೀಚ್-ಲೈಟ್ ಹೌಸ್/ಸ್ಕೂಬಾ ಡೈವಿಂಗ್. ಪಡುಬಿದ್ರಿ ಬೀಚ್ ಮತ್ತು ಪಡುಬಿದ್ರಿ ಎಂಡ್ ಪಾಯಿಂಟ್(ಬಿ.ಎಫ್.ಸಿ ಬೀಚ್)	2
		ಬೈಂದೂರು	ಮರವಂತೆ ಬೀಚ್. ಒತ್ತಿನಾಣೆ-ಪಡುವರಿ ಸೋಮೇಶ್ವರ ಬೀಚ್. ಮೂಕಾಂಬಿಕಾ ವನ್ಯಜೀವಿ ಅಭಯಾರಣ್ಯ. ಕೊಡಚಾದ್ರಿ ಬೆಟ್ಟ. ಕೂಸಳ್ಳಿ ಫಾಲ್ಸ್. ಕಿರು ಮಂಜೇಶ್ವರ ಬೀಚ್. ಮೂಡಗಲ್ಲು. ಪಾದ. ಶಿರೂರ ಬೀಚ್. ಬೆಳಕಲ ತೀರ್ಥ ಫಾಲ್ಸ್.	9
		ಹೆಬ್ರೀ	ಕೂಡ್ಲು ತೀರ್ಥ. ಜೋಮ್ಲು ತೀರ್ಥ. ಸೀತಾನದಿ ಪ್ರಕೃತಿ ಕೇಂದ್ರ. ಬಕ್ರೆಮಠ-ಮುದ್ರಾಡಿ. ಮುದ್ರಾಡಿ ಗರಡಿ.	5
			ಒಟ್ಟು	251

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2964

ಮಾನ್ಯ ಸದಸ್ಯರ ಹೆಸರು : ಶ್ರೀ ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ)

ಉತ್ತರಿಸಬೇಕಾದ ದಿನಾಂಕ : 18.03.2021

ಉತ್ತರಿಸುವ ಸಚಿವರು : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	2021–22ನೇ ವರ್ಷಕ್ಕೆ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	2021–22ನೇ ವರ್ಷಕ್ಕೆ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸಧ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ.
ಆ)	ಜಮಖಂಡಿ ಮತಕ್ಷೇತ್ರದ ಆಲಗೂರ ಹಾಗೂ ಮೈಗೂರ ಗ್ರಾಮಗಳಲ್ಲಿ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಇದೆಯೇ;	ಜಮಖಂಡಿ ಮತಕ್ಷೇತ್ರದ ಆಲಗೂರ ಹಾಗೂ ಮೈಗೂರ ಗ್ರಾಮಗಳಲ್ಲಿ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಇರುವುದಿಲ್ಲ.
ಇ)	ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು?	ಉದ್ಭವಿಸುವುದಿಲ್ಲ.

ಆಕುಕ 46 ಎಸ್‌ಬಿವಿ 2021.

(ಡಾ॥ ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ	:	3007
2.	ಸದಸ್ಯರ ಹೆಸರು	:	ಶ್ರೀ ಹೆಚ್.ಡಿ ರೇವಣ್ಣ (ಹೊಳೇನರಸೀಪುರ)
3.	ಉತ್ತರಿಸಬೇಕಾದ ದಿನಾಂಕ	:	18.03.2021
4.	ಉತ್ತರಿಸಬೇಕಾದ ಸಚಿವರು	:	ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಅ)	ಹಾಸನ ನಗರದ ಹಾಸನ ವೈದ್ಯಕೀಯ ವಿದ್ಯಾ ಸಂಸ್ಥೆ ಎಂ.ಸಿ.ಐ.ನ ಆದೇಶ ಸಂಖ್ಯೆ:ಎಂ.ಸಿ.ಐ-18(1)/2018-ಎಂ.ಇ.ಡಿ/100818/ದಿ:05.04.2018 ರಂತೆ 2021-22ನೇ ಸಾಲಿನ ಒಳಗೆ ಕಟ್ಟಡ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸದಿದ್ದಲ್ಲಿ ಕಾಲೇಜಿನ ಮಾನ್ಯತೆಯನ್ನು ರದ್ದುಪಡಿಸಲಾಗುವುದೆಂದು ತಿಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಭಾರತೀಯ ವೈದ್ಯಕೀಯ ಪರಿಷತ್ತು, ನವದೆಹಲಿ ಇವರ ಗೆಜೆಟೆಡ್ ಅಧಿಸೂಚನೆ ಸಂಖ್ಯೆ:MCI-18(1)/2018-MED/100818, ದಿನಾಂಕ:05.04.2018 ರ ಅನ್ವಯ ಯಾವುದೇ ಸಂಸ್ಥೆಯು ಭಾರತೀಯ ವೈದ್ಯಕೀಯ ಪರಿಷತ್ತಿನಿಂದ ಮಾನ್ಯತೆಯನ್ನು ಪಡೆದ 03 ವರ್ಷಗಳಾಗಿ ಪಿ.ಜಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಅರ್ಜಿಯನ್ನು ಸಲ್ಲಿಸದ್ದಿದ್ದಲ್ಲಿ ಸಂಸ್ಥೆಯ ಮಾನ್ಯತೆಯನ್ನು ರದ್ದು ಪಡಿಸಲಾಗುವುದೆಂದು ಉಲ್ಲೇಖಿಸಲ್ಪಟ್ಟಿರುತ್ತದೆ, ಸಂಸ್ಥೆಯಲ್ಲಿ ಈಗಾಗಲೇ 14 ವಿಭಾಗಗಳಲ್ಲಿ ವೈದ್ಯಕೀಯ ಪಿ.ಜಿ.ಕೋರ್ಸ್‌ಗಳನ್ನು ಪ್ರಾರಂಭಿಸಲು ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೆ (National Medical Commission) ಅರ್ಜಿ ಸಲ್ಲಿಸಲಾಗಿದೆ.
ಆ)	ಹಿಂದಿನ ಸರ್ಕಾರದ ಅವಧಿಯಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:08.05.2006, 02.06.2018 ಹಾಗೂ ದಿನಾಂಕ:28.06.2019 ರಂದು ನಡೆದ ಸಭೆಗಳಲ್ಲಿ ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ಅವಶ್ಯವಿರುವ ಕಟ್ಟಡ ಹಾಗೂ ವಿವಿಧ ಮೂಲಭೂತ ಸೌಕರ್ಯಗಳನ್ನು ಹಾಸನ ಮೆಡಿಕಲ್ ಕಾಲೇಜಿನಲ್ಲಿ ಕಲ್ಪಿಸಲು ಸರ್ಕಾರದ ಆರ್ಥಿಕ ಇಲಾಖೆಯ ಹಾಗೂ ವೈದ್ಯಕೀಯ ಹಿರಿಯ ಅಧಿಕಾರಿಗಳು ಹಾಗೂ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಸಭೆ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.

ಇ)	ಹಾಗಿದ್ದಲ್ಲಿ, ಸದರಿ ಸಭೆಯಲ್ಲಿ ಪಿಜಿ ಹಾಸ್ಟೆಲ್ ಕಟ್ಟಡ ನಿರ್ಮಾಣ ಎ-ಬ್ಲಾಕ್ ರೂ.9.50 ಕೋಟಿ ಅಂದಾಜು ಮೊತ್ತದಲ್ಲಿ, ಪಿಜಿ ಹಾಸ್ಟೆಲ್ ಕಟ್ಟಡ ನಿರ್ಮಾಣ ಬಿ-ಬ್ಲಾಕ್ ರೂ.9.50 ಕೋಟಿ ಅಂದಾಜು ಮೊತ್ತದಲ್ಲಿ, ಎ ಮತ್ತು ಬಿ ಬ್ಲಾಕ್ ಹಾಸ್ಟೆಲ್ ಗಳನ್ನು ಸಿ ಮತ್ತು ಡಿ ಬ್ಲಾಕ್ ಹಾಸ್ಟೆಲ್ ಗಳನ್ನು 4ನೇ ಮಹಡಿಯಿಂದ 6ನೇ ಮಹಡಿಗೆ ಮೇಲ್ದರ್ಜೆಗೇರಿಸುವುದು ರೂ.9.00 ಕೋಟಿ ಅಂದಾಜು ಮೊತ್ತದಲ್ಲಿ ಸಿ ಮತ್ತು ಡಿ ಬ್ಲಾಕ್‌ಗಳನ್ನು 4ನೇ ಮಹಡಿಯಿಂದ 6ನೇ ಮಹಡಿಗೆ ಫುಡ್ ಕೋರ್ಟ್ ಹಾಗೂ ಅಥಿತಿಗೃಹಗಳ ಸಂಯೋಜಿತ ಕಟ್ಟಡ ನಿರ್ಮಾಣ ರೂ.5.25 ಕೋಟಿ ಅಂದಾಜು ಮೊತ್ತದಲ್ಲಿ, ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರ ಕಟ್ಟಡ ನಿರ್ಮಾಣ ಕಾಮಗಾರಿ ರೂ.9.75 ಕೋಟಿ ಹಾಗೂ ಮಾಹಿತಿ ಕೇಂದ್ರ ಕಟ್ಟಡ ನಿರ್ಮಾಣ ಕಾಮಗಾರಿ ರೂ.9.75 ಕೋಟಿ ಮೊತ್ತದಲ್ಲಿ ಶಂಕರಮಠ ರಸ್ತೆ ಕ್ರಾಸ್‌ನಿಂದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಹೊಸ ಬೋಧಕ ಆಸ್ಪತ್ರೆಯವರೆಗೆ ರಸ್ತೆ ನಿರ್ಮಾಣ ಹಾಗೂ ಪಾರ್ಕಿಂಗ್ ಶೆಡ್‌ಗಳ ಕಾಮಗಾರಿ ರೂ.3.00 ಕೋಟಿ ಅಂದಾಜು ಮೊತ್ತದಲ್ಲಿ ಪಾರ್ಕಿಂಗ್ ಶೆಡ್‌ಗಳು, ಎಸ್.ಟಿ.ಪಿ.ಯ ಹತ್ತಿರ ಕಾಂಪೌಡ್ ಗೋಡೆ, ಕಾಲುದಾರಿ, ಹೈಮಾಸ್ಕ್, ಲೈಟ್ ಅಳವಡಿಕೆ ಮತ್ತು ಸಂಬಂಧಿತ ಇತರೆ ಕಾಮಗಾರಿಗಳು ರೂ.3.00 ಕೋಟಿ ಒಟ್ಟು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ಹೆಚ್ಚುವರಿಯಾಗಿ ಕೈಗೊಳ್ಳಬೇಕಾಗಿರುವ ಕಾಮಗಾರಿಗಳ ಒಟ್ಟು ಮೊತ್ತ ರೂ. 58.00 ಕೋಟಿಗಳ ಪ್ರಸ್ತಾವನೆಯನ್ನು ಸರ್ಕಾರದ ಆರ್ಥಿಕ ಇಲಾಖೆಗೆ ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಸಲ್ಲಿಸಿರುವುದು ನಿಜವೇ;	ಹೌದು
ಈ)	ಹಾಗಿದ್ದಲ್ಲಿ, ಈ ಸಭೆಯ ನಡವಳಿಗಳ ಮೇಲೆ ಹಾಗೂ ಪ್ರಾಂಶುಪಾಲರು ಹಾಸನ ವೈದ್ಯಕೀಯ ಕಾಲೇಜು, ರವರು ಕಳುಹಿಸಿರುವ ಪ್ರಸ್ತಾವನೆಗೆ ಅನುಮೋದನೆ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಆರ್ಥಿಕ ಇಲಾಖೆಯು ಪ್ರಸ್ತಾವನೆಯ ಕುರಿತು ನೀಡಿರುವ ಸಹಮತಿಯನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಎಂಇಡಿ 79 ಕೆಯುಎಂ 2021

(ಡಾ: ಕೆ. ಸುಧಾಕರ್)
ವೈದ್ಯಕೀಯ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	3016
2.	ಮಾನ್ಯ ಸದಸ್ಯರ ಹೆಸರು	ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)
3.	ಉತ್ತರಿಸಬೇಕಾದ ದಿನಾಂಕ	18/03/2021
4.	ಉತ್ತರಿಸುವವರು	ಮಾನ್ಯ ಕಾರ್ಮಿಕ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ವಲಸೆ ಕಾರ್ಮಿಕರು ಮತ್ತು ಅವರ ಸ್ಥಿತಿಗತಿಗಳ ಸುಧಾರಣೆಗಾಗಿ ಸರ್ಕಾರದ ಸರಳ ಮತ್ತು ಸುಧಾರಿತ ಯೋಜನಾನುಷ್ಠಾನಗಳಾವುವು; [ವಿವರ ನೀಡುವುದು]	ವಲಸೆ ಕಾರ್ಮಿಕರು ಮತ್ತು ಅವರ ಸ್ಥಿತಿಗತಿ ಸುಧಾರಣೆಗಾಗಿ ಕಾರ್ಮಿಕ ಇಲಾಖೆಯಿಂದ ಯಾವುದೇ ಸುಧಾರಿತ ಯೋಜನೆಗಳನ್ನು ರೂಪಿಸಿರುವುದಿಲ್ಲ. ಆದರೆ ವಲಸೆ ಕಾರ್ಮಿಕರು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದು, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೊಂದಾಯಿತರಾಗಿದ್ದಲ್ಲಿ, ಅವರಿಗೆ ಮತ್ತು ಅವರ ಅವಲಂಬಿತರಿಗಾಗಿ 19 ರೀತಿಯ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಸೌಲಭ್ಯಗಳ ವಿವರವನ್ನು <u>ಅನುಬಂಧದಲ್ಲಿ</u> ಲಗತ್ತಿಸಿದೆ.
ಆ)	ವಲಸೆ ಕಾರ್ಮಿಕರು ತಮ್ಮೂರನ್ನು ಬಿಡುವ ಮೊದಲು ಗ್ರಾಮ ಪಂಚಾಯತ್ / ಸ್ಥಳೀಯ ಸಂಸ್ಥೆಗಳಲ್ಲಿ ತಮ್ಮ ವಿವರ ಮತ್ತು ಹೋಗುವ ಸ್ಥಳ ಹಾಗೂ ಎಷ್ಟು ಜನರು ಕುಟುಂಬದಿಂದ ವಲಸೆ ಹೋಗುತ್ತಿದ್ದಾರೆ ಎಂಬಿತ್ಯಾದಿ ವಿವರಗಳನ್ನು ಪಡೆದು ದಾಖಲಿಸುವ ಮತ್ತು ಹಿಂದಿರುಗಿ ಬಂದ ನಂತರವೂ ದಾಖಲೆಗೊಳಪಡಿಸುವ ನಿಯಮವನ್ನು ರೂಪಿಸಲು ಸರ್ಕಾರವು ಕ್ರಮಕೈಗೊಳ್ಳುವುದೇ;	ಈ ಬಗ್ಗೆ ಪ್ರಸ್ತುತ ಯಾವುದೇ ನಿಯಮವನ್ನು ರೂಪಿಸಿರುವುದಿಲ್ಲ.
ಇ)	ಕಾರ್ಮಿಕರು ವಲಸೆ ಹೋಗುವ, ಹಿಂದಿರುಗುವ ಹಾಗೂ ಅವರೊಂದಿಗಿನ ಮಹಿಳೆಯರು ಮತ್ತು ಮಕ್ಕಳ ಕುರಿತಾದ ದಾಖಲೆಗಳನ್ನು ಪಡೆಯುವ ಮೂಲಕ ಅವರ ಸುರಕ್ಷತೆ ಮತ್ತು ಯೋಗಕ್ಷೇಮವನ್ನು ಸರ್ಕಾರ ಗಮನಿಸುವ ಮೂಲಕ ಕಾರ್ಮಿಕರಿಗೆ ಸುಭದ್ರತೆಯನ್ನು ಒದಗಿಸಿಕೊಡುವ ಕುರಿತಾದ ಸರ್ಕಾರದ ಕ್ರಮಗಳೇನು;	ಈ ಬಗ್ಗೆ ಪ್ರಸ್ತುತ ಯಾವುದೇ ನಿಯಮವನ್ನು ರೂಪಿಸಿರುವುದಿಲ್ಲ.
ಈ)	ಊರು ಬಿಡುವ ಮುನ್ನ ವಿವರಗಳ ದಾಖಲೆಗಳನ್ನು ಪಡೆಯುವ ಹಾಗೂ ವಲಸೆ ಕಾರ್ಮಿಕರುಗಳಿಗೆ ಯೋಜನಾ ಸೌಲಭ್ಯಗಳನ್ನು ಒದಗಿಸಿಕೊಡುವ ಮತ್ತು ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸುವ ಕುರಿತಾದ ಸರ್ಕಾರದ ಕ್ರಮಗಳೇನು?	ಅನ್ವಯಿಸುವುದಿಲ್ಲ.

ಕಾಇ 118 ಎಲ್ಇಟಿ 2021

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

ಅನುಬಂಧ

(ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 3016)

ಕನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿವತಿಯಿಂದ ಫಲಾನುಭವಿಗಳಿಗೆ ಸಿಗುವ ಸೌಲಭ್ಯಗಳು

1. **ಪಿಂಚಣಿ ಸೌಲಭ್ಯ:** ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆ ಮಾಸಿಕ ರೂ.2,000/-
2. **ಕುಟುಂಬ ಪಿಂಚಣಿ ಸೌಲಭ್ಯ:** ಮೃತ ಪಿಂಚಣಿದಾರರ ಪತಿ / ಪತ್ನಿ ಮಾಸಿಕ ರೂ.1000/-
3. **ದುರ್ಬಲತೆ ಪಿಂಚಣಿ:** ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃ ಅಂಗವಿಕಲತೆ ಹೊಂದಿದ್ದರೆ ಮಾಸಿಕ ರೂ.2,000/- ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ ರೂ.2,00,000/- ದವರೆಗೆ ಅನುಗ್ರಹ ರಾಶಿ ಸಹಾಯಧನ.
4. **ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ**ಮರುಪಾವತಿ ಸೌಲಭ್ಯ.
5. **ಟ್ರೈನಿಂಗ್-ಕಮ್-ಟೂಲ್‌ಕಿಟ್‌ಸೌಲಭ್ಯ (ಶ್ರಮ ಸಾಮರ್ಥ್ಯ) :** ರೂ.30,000/- ವರೆಗೆ
6. **ಶ್ರಮ ಸಂಸಾರ ಸಾಮರ್ಥ್ಯ ತರಬೇತಿ ಸೌಲಭ್ಯ:** ನೋಂದಾಯಿತ ಫಲಾನುಭವಿಯ ಅವಲಂಬಿತರಿಗೆ
7. **ವಸತಿ ಸೌಲಭ್ಯ (ಕಾರ್ಮಿಕ ಗೃಹ ಭಾಗ್ಯ):** ರೂ.2,00,000/- ದವರೆಗೆ ಮುಂಗಡ ಸೌಲಭ್ಯ
8. **ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್):** ಮಹಿಳಾ ಫಲಾನುಭವಿಯ ಮೊದಲ ಎರಡು ಮಕ್ಕಳಿಗೆ ಹೆಣ್ಣು ಮಗುವಿನ ಜನನಕ್ಕೆ ರೂ. 30,000/- ಮತ್ತು ಗಂಡು ಮಗುವಿನ ಜನನಕ್ಕೆ ರೂ.20,000/-
9. **ಶಿಶು ಪಾಲನಾ ಸೌಲಭ್ಯ:**
10. **ಅಂತ್ಯಕ್ರಿಯೆ ವೆಚ್ಚ :** ರೂ.4,000/- ಹಾಗೂ ಅನುಗ್ರಹ ರಾಶಿ ರೂ.50,000/-ಸಹಾಯಧನ
11. **ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ):** ಫಲಾನುಭವಿಯ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:

ಕ್ರ.ಸಂ	ತರಗತಿ (ಉತ್ತೀರ್ಣಕ್ಕೆ)	ವಾರ್ಷಿಕ ಸಹಾಯ ಧನ	
		ಗಂಡು	ಹೆಣ್ಣು
I.	ನರ್ಸರಿ	3,000	4,000
II.	1 ರಿಂದ 4ನೇ ತರಗತಿ	3,000	4,000
III.	5 ರಿಂದ 8ನೇ ತರಗತಿ	5,000	6,000
IV.	9 ಹಾಗೂ 10ನೇ ತರಗತಿ	10,000	11,000
V.	ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ	10,000	14,000
VI.	ಐಟಿಐ	12,000	15,000
VII.	ಪದವಿ ಪ್ರತಿ ವರ್ಷಕ್ಕೆ	15,000	20,000
VIII.	ಸ್ನಾತಕೋತ್ತರ ಪದವಿ ಸೇರ್ಪಡೆಗೆ	20,000	20,000
	ಮತ್ತು ಪ್ರತಿ ವರ್ಷಕ್ಕೆ	20,000	25,000
IX.	ಇಂಜಿನಿಯರಿಂಗ್ ಕೋರ್ಸ್ ಬಿಇ/ ಬಿ.ಟೆಕ್ ಸೇರ್ಪಡೆಗೆ	25,000	25,000
	ಮತ್ತು ಪ್ರತಿ ವರ್ಷಕ್ಕೆ	25,000	30,000
X.	ವೈದ್ಯಕೀಯ ಕೋರ್ಸ್‌ಗೆ ಸೇರ್ಪಡೆಗೆ	30,000	30,000
	ಮತ್ತು ಪ್ರತಿ ವರ್ಷಕ್ಕೆ	40,000	50,000
XI.	ಡಿಪ್ಲೋಮಾ	15,000	20,000
XII.	ಎಂ.ಟೆಕ್ / ಎಂ.ಇ	30,000	35,000
XIII.	ಎಂ.ಡಿ (ವೈದ್ಯಕೀಯ)	45,000	55,000
XIV.	ಪಿಹೆಚ್‌ಡಿ (ಪ್ರತಿ ವರ್ಷಕ್ಕೆ) ಗರಿಷ್ಠ 03 ವರ್ಷ	25,000	30,000

12. **ವೈದ್ಯಕೀಯ ಸಹಾಯಧನ (ಕಾರ್ಮಿಕ ಆರೋಗ್ಯ ಭಾಗ್ಯ):** ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಬಿತರಿಗೆ ರೂ.300/- ರಿಂದ ರೂ.10,000/-ವರೆಗೆ

13. **ಅಪಘಾತ ಪರಿಹಾರ:** ಮರಣ ಹೊಂದಿದ್ದಲ್ಲಿ ರೂ.5,00,000/-, ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ ರೂ.2,00,000/- ಮತ್ತು ಭಾಗಶಃ ಶಾಶ್ವತ ದುರ್ಬಲತೆಯಾದಲ್ಲಿ ರೂ.1,00,000/-

14. **ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ):** ಹೃದ್ರೋಗ, ಕಿಡ್ನಿ ಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತ ಚಿಕಿತ್ಸೆ, ಮೂತ್ರ ಪಿಂಡದಲ್ಲಿನ ಕಲ್ಲು ತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್ ಚಿಕಿತ್ಸೆ, ಇತರೆ ಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ ರೂ.2,00,000/-ವರೆಗೆ

15. **ಮದುವೆ ಸಹಾಯಧನ (ಗೃಹ ಲಕ್ಷ್ಮೀ ಬಾಂಡ್):** ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ ತಲಾ ರೂ.50,000/-

16. **LPG ಸಂಪರ್ಕ ಸೌಲಭ್ಯ (ಕಾರ್ಮಿಕ ಅನಿಲ ಭಾಗ್ಯ):** ಅನಿಲ ಸಂಪರ್ಕದೊಂದಿಗೆಎರಡು ಬರ್ನರ್ ಸ್ಟೌವ್

17. **ಬಿಎಂಟಿಸಿ ಬಸ್ ಪಾಸ್ ಸೌಲಭ್ಯ:** ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತಹ / ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ

18. **ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ:** ರಾಜ್ಯದಾದ್ಯಂತ ವಿದ್ಯಾಭ್ಯಾಸದಲ್ಲಿ ತೊಡಗಿರುವ ನೋಂದಾಯಿತ ಕಾರ್ಮಿಕರ ಇಬ್ಬರು ಮಕ್ಕಳಿಗೆ (ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ)

19. **ತಾಯಿ ಮಗು ಸಹಾಯ ಹಸ್ತ:** ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕ ರೂ.6,000/- ಗಳ ಸಹಾಯಧನ.

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2982
2.	ಮಾನ್ಯ ಸದಸ್ಯರ ಹೆಸರು	ಶ್ರೀ ಉಮಾನಾಥ್ ಎ. ಕೋಟ್ಯಾನ್ (ಮೂಡಬಿದ್ರೆ)
3.	ಉತ್ತರಿಸಬೇಕಾದ ದಿನಾಂಕ	18/03/2021
4.	ಉತ್ತರಿಸುವವರು	ಮಾನ್ಯ ಕಾರ್ಮಿಕ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ವಲಸೆ ಕಾರ್ಮಿಕರುಗಳು ಪ್ರಸ್ತುತ ಎದುರಿಸುತ್ತಿರುವ ಸೌಲಭ್ಯಗಳು ಪಡೆಯುವಲ್ಲಿನ ಅತಂತ್ರತೆಗೆ ಸರ್ಕಾರದ ಸುರಕ್ಷತೆ ಕ್ರಮಗಳು ಯಾವುವು;	ವಲಸೆ ಕಾರ್ಮಿಕರು ಸೌಲಭ್ಯಗಳನ್ನು ಪಡೆಯಲು ಎದುರಿಸುತ್ತಿದ್ದ ಸಮಸ್ಯೆಗಳನ್ನು ಪರಿಹರಿಸಲು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ಈ ಕೆಳಕಂಡ ಸುರಕ್ಷತಾ ಕ್ರಮಗಳನ್ನು ಮತ್ತು ಸೌಲಭ್ಯಗಳನ್ನು ಕೈಗೊಂಡಿರುತ್ತದೆ. ➢ ಮಂಡಳಿಯಿಂದ ಒದಗಿಸಲಾಗುವ ಎಲ್ಲಾ ಸೌಲಭ್ಯಗಳನ್ನು ಕಡ್ಡಾಯವಾಗಿ ಆನ್‌ಲೈನ್ ಮೂಲಕ ಸಲ್ಲಿಸಲು ವ್ಯವಸ್ಥೆ ಕಲ್ಪಿಸಲಾಗಿರುತ್ತದೆ. ಇದರಿಂದಾಗಿ ವಲಸೆ ಕಾರ್ಮಿಕರು ಕಛೇರಿಗಳ ಬಳಿ ಹೋಗುವುದನ್ನು ತಪ್ಪಿಸಲಾಗಿರುತ್ತದೆ. ➢ ಮಂಡಳಿಯಿಂದ ವಿವಿಧ ಸೌಲಭ್ಯಗಳಡಿ ಮಂಜೂರಾಗುವ ಸೌಲಭ್ಯದ ಮೊತ್ತವನ್ನು ನೇರವಾಗಿ ಫಲಾನುಭವಿ/ ಅವಲಂಬಿತರ ಬ್ಯಾಂಕ್ ಖಾತೆಗೆ ಎನ್‌ಇಎಫ್‌ಟಿ/ ಆರ್‌ಟಿಜಿಎಸ್ ಮೂಲಕ ಜಮೆ ಮಾಡಲಾಗುವುದು. ➢ ವಲಸೆ ಕಾರ್ಮಿಕರು ಸೌಲಭ್ಯಗಳನ್ನು ಪಡೆಯಲು ನಿಯಮಗಳಲ್ಲಿದ್ದ ತೊಡಕುಗಳನ್ನು ನಿಯಮಾವಳಿಗಳಿಗೆ ತಿದ್ದುಪಡಿ ತರುವ ಮೂಲಕ ನಿವಾರಿಸಲಾಗಿರುತ್ತದೆ. ➢ ಮಂಡಳಿಯ ಸೌಲಭ್ಯಗಳ ಬಗ್ಗೆ ವಲಸೆ ಕಾರ್ಮಿಕರಿಗೂ ಅರಿವು ಮೂಡಿಸಲು ವಿವಿಧ ಭಾಷೆಯಲ್ಲಿ ಕರಪತ್ರಗಳನ್ನು ಮುದ್ರಿಸಿ ಜಾಗೃತಿ ಮೂಡಿಸಲಾಗುತ್ತಿದೆ. ವಲಸೆ ಕಾರ್ಮಿಕರು ಮಂಡಳಿಯ ಸೌಲಭ್ಯದಿಂದ ವಂಚಿತರಾಗುವುದನ್ನು ತಪ್ಪಿಸಲು ಕಡ್ಡಾಯವಾಗಿ ನೋಂದಣಿ ಮಾಡಿಸಲು ಸಂಬಂಧಪಟ್ಟ ಸಂಸ್ಥೆಗಳಿಗೆ ಸೂಕ್ತ ನಿರ್ದೇಶನವನ್ನು ನೀಡಲಾಗುತ್ತಿರುತ್ತದೆ. **ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:-** ವಲಸೆ ಕಾರ್ಮಿಕರು ಕಾರ್ಮಿಕ ಕಲ್ಯಾಣ ಮಂಡಳಿಯ ವ್ಯಾಪ್ತಿಗೆ ಒಳಪಡುವುದಿಲ್ಲ. ಆದರೆ ಮಂಡಳಿಗೆ ವಂತಿಗೆ ಪಾವತಿ ಮಾಡುವ ವಿವಿಧ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರಲ್ಲಿ ವಲಸೆ ಕಾರ್ಮಿಕರು ಸಹ ಸೇರಲು ಅವಕಾಶವಿರುತ್ತದೆ. ಈ ಕಾರ್ಮಿಕರಿಗೆ ಮಂಡಳಿಯಲ್ಲಿ ಜಾರಿಯಲ್ಲಿರುವ ವಿವಿಧ ಕಲ್ಯಾಣ ಯೋಜನೆಗಳ ಸೌಲಭ್ಯ ದೊರೆಯಲು ಅವರು ಕೆಲಸ ಮಾಡುವ ಸ್ಥಳದಲ್ಲಿ ಅರಿವು ಮೂಡಿಸುವುದು ಹಾಗೂ ಸರಳ ರೀತಿಯಲ್ಲಿ ಸೌಲಭ್ಯ ಪಡೆಯಲು ಎಲ್ಲಾ ವಿವರಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಅನುಕೂಲ ಮಾಡಿಕೊಡಲಾಗಿದೆ.
ಆ)	ಸಾಮಾಜಿಕ ಭದ್ರತೆ, ಕೌಟುಂಬಿಕ ಅವ್ಯವಸ್ಥೆ, ಆರ್ಥಿಕ ದುರ್ಗತಿ, ದೂರದ ನಗರಗಳಲ್ಲಿನ ದುಡಿಮೆಯ ಅನಿವಾರ್ಯತೆ ಮುಂತಾದ ಅತಂತ್ರ ಸ್ಥಿತಿಯಲ್ಲಿರುವ ಕಾರ್ಮಿಕರಿಗೆ ಸರ್ಕಾರದ ಯೋಜನೆ ಸೌಲಭ್ಯಗಳನ್ನು ಸರಳ ಮತ್ತು ಸುಲಭ ರಿತ್ಯಾ ಒದಗಿಸಿ ಕೊಡುವಲ್ಲಿನ ಸರ್ಕಾರದ ಕ್ರಮಗಳೇನು;	

ಇ)	ಕಾರ್ಮಿಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಸೇರಿದಂತೆ ಕಾರ್ಮಿಕ ಸುರಕ್ಷತೆಗಾಗಿ ಇರುವ ಸುಮಾರು 11 ಇಲಾಖೆಗಳು ಜಂಟಿಯಾಗಿ ಕಾರ್ಮಿಕರ ಹಿತರಕ್ಷಣೆಗಾಗಿ ಕ್ರಿಯಾ ಯೋಜನೆಯನ್ನು ರೂಪಿಸಿ ಯೋಜನಾ ಸೌಲಭ್ಯಗಳನ್ನು ಸರಳವಾಗಿ ಪಡೆದುಕೊಳ್ಳುವ ರೀತಿಯಲ್ಲಿ ಕ್ರಮ ವಹಿಸಲು ಸರ್ಕಾರವು ಚಿಂತಿಸಿದೆಯೇ?	ಸರ್ಕಾರದ ವಿವಿಧ ಯೋಜನೆಗಳನ್ನು ಸರಳವಾಗಿ ಪಡೆದುಕೊಳ್ಳಲು ಸರ್ಕಾರ ಜಾರಿಗೊಳಿಸಿರುವ ಮಾಹಿತಿ ಕಣಜ ತಂತ್ರಾಂಶದಲ್ಲಿ ಎಲ್ಲಾ ವಿವರಗಳನ್ನು ಅಳವಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಕಾಇ 117 ಎಲ್‌ಇಟಿ 2021

(ಅರಬೈಲ್ ಶಿವರಾಮ್ ಹೆಬ್ಬಾರ್)
ಕಾರ್ಮಿಕ ಸಚಿವರು

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	3015
2.	ಮಾನ್ಯ ಸದಸ್ಯರ ಹೆಸರು	ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)
3.	ಉತ್ತರಿಸಬೇಕಾದ ದಿನಾಂಕ	18/03/2021
4.	ಉತ್ತರಿಸುವವರು	ಮಾನ್ಯ ಕಾರ್ಮಿಕ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯಾದ್ಯಂತ ಹಾಗೂ ಹೊರರಾಜ್ಯಗಳಿಂದಲೂ ಜೀವನೋಪಾಯಕ್ಕಾಗಿ ಉದ್ಯೋಗವನ್ನರಸಿ ಬರುವ ವಲಸೆ ಕಾರ್ಮಿಕರಿಗೆ ಒದಗಿಸಲಾಗುವ ಸರ್ಕಾರದ ಸೌಲಭ್ಯ / ಸೌಕರ್ಯಗಳೇನು;	ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ಮಾಡುವ ವಲಸೆ ಕಟ್ಟಡ ಕಾರ್ಮಿಕರನ್ನು ಒಳಗೊಂಡಂತೆ ಎಲ್ಲಾ ಕಾರ್ಮಿಕರನ್ನು ಕಟ್ಟಡ ಮತ್ತು ಇತರೆ ನಿರ್ಮಾಣ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕರ್ನಾಟಕ ನಿಯಮಗಳು 2006 ರಡಿಯಲ್ಲಿ ನೋಂದಾಯಿಸಿಕೊಂಡು ಅವರಿಗೆ ಮತ್ತು ಅವರ ಅವಲಂಬಿತರಿಗಾಗಿ 19 ರೀತಿಯ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಿ ಮಂಡಳಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಸೌಲಭ್ಯಗಳ ವಿವರವನ್ನು **ಅನುಬಂಧ-1** ರಲ್ಲಿ ಸಲ್ಲಿಸಿದೆ.
ಆ)	ಉದ್ಯೋಗ ಖಾತರಿ ಸರ್ಕಾರಿ ಪಡಿತರ ವ್ಯವಸ್ಥೆಯೂ ಸೇರಿದಂತೆ ಕಾರ್ಮಿಕ ಕಲ್ಯಾಣ ಇಲಾಖೆಯ ಸಾಕಷ್ಟು ಯೋಜನೆಗಳು ವಿವಿಧ ಕಾರಣಗಳಿಂದಾಗಿ ಫಲಾನುಭವಿಗಳಿಗೆ ತಲುಪುತ್ತಿಲ್ಲವೆಂಬುದನ್ನು ಸರ್ಕಾರ ಗಮನಿಸಿದೆಯೇ;	ಅನ್ವಯಿಸುವುದಿಲ್ಲ.
ಇ)	ಗಮನಿಸಿದ್ದಲ್ಲಿ ಬೃಹತ್ತ ಮೊತ್ತದ ಅನುದಾನವು ಅರ್ಹ ಕಾರ್ಮಿಕರನ್ನು ತಲುಪದಿರಲು ಕಾರಣಗಳೇನು?	ಉದ್ಭವಿಸುವುದಿಲ್ಲ.
ಈ)	ವಲಸೆ ಕಾರ್ಮಿಕರಿಗೆ ಮೂಲಭೂತ ಸೌಲಭ್ಯ / ಸೌಕರ್ಯಗಳನ್ನು ಕನಿಷ್ಠ ಪ್ರಮಾಣದಲ್ಲಾದರೂ ಒದಗಿಸಿಕೊಡುವಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?	ವಲಸೆ ಕಾರ್ಮಿಕರು ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿಯೂ ಕೆಲಸ ನಿರ್ವಹಿಸುತ್ತಿದ್ದಲ್ಲಿ, ಕಟ್ಟಡ ಮತ್ತು ಇತರೆ ನಿರ್ಮಾಣ ಮಂಡಳಿಯ ಫಲಾನುಭವಿಗಳಾಗಿ ನೋಂದಾಯಿಸಿಕೊಳ್ಳಬಹುದಾಗಿದೆ. ನೋಂದಾಯಿತ ವಲಸೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಮಂಡಳಿಯಿಂದ ದೊರೆಯಬಹುದಾದ ಎಲ್ಲಾ ಸೌಲಭ್ಯಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಅವುಗಳೆಂದರೆ; • ಶೈಕ್ಷಣಿಕ ಸಹಾಯಧನ, • ಅಪಘಾತ ಪರಿಹಾರ ಸಹಾಯಧನ, • ಅಂತ್ಯಕ್ರಿಯೆ ವೆಚ್ಚ ಮತ್ತು ಅನುಗ್ರಹ ರಾಶಿ ಸಹಾಯಧನ, • ಪಿಂಚಣಿ, • ಪ್ರಮುಖ ವೈದ್ಯಕೀಯ ಸಹಾಯಧನ,

		• ಹೆರಿಗೆ ಸಹಾಯಧನ, • ವೈದ್ಯಕೀಯ ವೆಚ್ಚ. ಮೇಲ್ಕಂಡ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.
ಉ)	ಆ ನಿಟ್ಟಿನಲ್ಲಿ ಸಾಧಿಸಿದ ಪ್ರಗತಿಯೇನು?	ವಲಸೆ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳ ವೆಚ್ಚವನ್ನು ಒಳಗೊಂಡಂತೆ ರಾಜ್ಯದ ನೋಂದಾಯಿತ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಸೌಲಭ್ಯಗಳಿಗಾಗಿ ತಗುಲಿದ ಒಟ್ಟಾರೆ ವೆಚ್ಚದ ಮೊತ್ತವನ್ನು <u>ಅನುಬಂಧ-2</u>ರಲ್ಲಿ ಲಗತ್ತಿಸಿದೆ. ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳಡಿ ಇದೂವರೆಗೂ 1,67,236 ಫಲಾನುಭವಿಗಳಿಗೆ ಒಟ್ಟು ರೂ. 174.69 ಕೋಟಿಯಷ್ಟು ಮೊತ್ತವನ್ನು ವಿತರಿಸಲಾಗಿರುತ್ತದೆ.

ಕಾಇ 119 ಎಲ್‌ಇಟಿ 2021

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

ಅನುಬಂಧ-1

(ಚುಕ್ಕೆ ಗುರುತಿಲ್ಲದಪ್ರಶ್ನೆ ಸಂಖ್ಯೆ 3015)

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ಫಲಾನುಭವಿಗಳಿಗೆ ಸಿಗುವ ಸೌಲಭ್ಯಗಳು

1. **ಪಿಂಚಣಿ ಸೌಲಭ್ಯ:** ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆಮಾಸಿಕ ರೂ.2,000/-
2. **ಕುಟುಂಬ ಪಿಂಚಣಿ ಸೌಲಭ್ಯ:** ಮೃತ ಪಿಂಚಣಿದಾರರ ಪತಿ / ಪತ್ನಿ ಮಾಸಿಕ ರೂ.1000/-
3. **ದುರ್ಬಲತೆ ಪಿಂಚಣಿ:** ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃಅಂಗವಿಕಲತೆ ಹೊಂದಿದ್ದರೆ ಮಾಸಿಕ **ರೂ.2,000/-** ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ ರೂ.2,00,000/- ದವರೆಗೆಅನುಗ್ರಹ ರಾಶಿ ಸಹಾಯಧನ.
4. **ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ**ಮರುಪಾವತಿ ಸೌಲಭ್ಯ.
5. **ಟ್ರೈನಿಂಗ್-ಕಮ್-ಟೂಲ್‌ಕಿಟ್‌ಸೌಲಭ್ಯ (ಶ್ರಮ ಸಾಮರ್ಥ್ಯ) : ರೂ.30,000/- ವರೆಗೆ**
6. **ಶ್ರಮ ಸಂಸಾರ ಸಾಮರ್ಥ್ಯತರಬೇತಿ ಸೌಲಭ್ಯ:** ನೋಂದಾಯಿತ ಫಲಾನುಭವಿಯಅವಲಂಬಿತರಿಗೆ
7. **ವಸತಿ ಸೌಲಭ್ಯ (ಕಾರ್ಮಿಕ ಗೃಹ ಭಾಗ್ಯ):** ರೂ.2,00,000/- ದವರೆಗೆ ಮುಂಗಡ ಸೌಲಭ್ಯ
8. **ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್):** ಮಹಿಳಾ ಫಲಾನುಭವಿಯ ಮೊದಲ ಎರಡು ಮಕ್ಕಳಿಗೆ ಹೆಣ್ಣು ಮಗುವಿನ ಜನನಕ್ಕೆರೂ. 30,000/- ಮತ್ತುಗಂಡು ಮಗುವಿನ ಜನನಕ್ಕೆರೂ.20,000/-
9. **ಶಿಶು ಪಾಲನಾ ಸೌಲಭ್ಯ:**
10. **ಅಂತ್ಯಕ್ರಿಯೆ ವೆಚ್ಚ :** ರೂ.4,000/- ಹಾಗೂ ಅನುಗ್ರಹ ರಾಶಿ ರೂ.50,000/-ಸಹಾಯಧನ
11. **ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ):** ಫಲಾನುಭವಿಯಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:

ಕ್ರ.ಸಂ	ತರಗತಿ (ಉತ್ತೀರ್ಣಕ್ಕೆ)	ವಾರ್ಷಿಕ ಸಹಾಯಧನ	
		ಗಂಡು	ಹೆಣ್ಣು
I.	ನರ್ಸರಿ	3,000	4,000
II.	1 ರಿಂದ 4ನೇ ತರಗತಿ	3,000	4,000
III.	5 ರಿಂದ 8ನೇ ತರಗತಿ	5,000	6,000
IV.	9 ಹಾಗೂ 10ನೇ ತರಗತಿ	10,000	11,000
V.	ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ	10,000	14,000
VI.	ಐಟಿಐ	12,000	15,000
VII.	ಪದವಿ ಪ್ರತಿ ವರ್ಷಕ್ಕೆ	15,000	20,000
VIII.	ಸ್ನಾತಕೋತ್ತರ ಪದವಿ ಸೇರ್ಪಡೆಗೆ	20,000	20,000
	ಮತ್ತುಪ್ರತಿ ವರ್ಷಕ್ಕೆ	20,000	25,000
IX.	ಇಂಜಿನಿಯರಿಂಗ್‌ಕೋರ್ಸ್ ಬಿಇ/ ಬಿ.ಟೆಕ್ ಸೇರ್ಪಡೆಗೆ	25,000	25,000
	ಮತ್ತುಪ್ರತಿ ವರ್ಷಕ್ಕೆ	25,000	30,000
X.	ವೈದ್ಯಕೀಯಕೋರ್ಸ್‌ಗೆ ಸೇರ್ಪಡೆಗೆ	30,000	30,000
	ಮತ್ತುಪ್ರತಿ ವರ್ಷಕ್ಕೆ	40,000	50,000
XI.	ಡಿಪ್ಲೋಮಾ	15,000	20,000
XII.	ಎಂ.ಟೆಕ್ / ಎಂ.ಇ	30,000	35,000
XIII.	ಎಂ.ಡಿ (ವೈದ್ಯಕೀಯ)	45,000	55,000
XIV.	ಪಿಹೆಚ್‌ಡಿ (ಪ್ರತಿ ವರ್ಷಕ್ಕೆ) ಗರಿಷ್ಠ 03 ವರ್ಷ	25,000	30,000

12. ವೈದ್ಯಕೀಯ ಸಹಾಯಧನ (ಕಾರ್ಮಿಕಆರೋಗ್ಯ ಭಾಗ್ಯ): ನೋಂದಾಯಿತ ಫಲಾನುಭವಿ ಹಾಗೂ ಅವರಅವಲಂಭಿತರಿಗೆರೂ.300/- ರಿಂದರೂ.10,000/-ವರೆಗೆ

13. ಅಪಘಾತ ಪರಿಹಾರ: ಮರಣ ಹೊಂದಿದ್ದಲ್ಲಿರೂ.5,00,000/-, ಸಂಪೂರ್ಣ ಶಾಶ್ವತದುರ್ಬಲತೆಯಾದಲ್ಲಿ ರೂ.2,00,000/- ಮತ್ತುಭಾಗಶಃ ಶಾಶ್ವತದುರ್ಬಲತೆಯಾದಲ್ಲಿ ರೂ.1,00,000/-

14. ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕಚಿಕಿತ್ಸಾ ಭಾಗ್ಯ): ಹೃದ್ರೋಗ, ಕಿಡ್ನಿಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದತೊಂದರೆಗೆ ಸಂಬಂಧಿತಚಿಕಿತ್ಸೆ, ಮೂತ್ರ ಪಿಂಡದಲ್ಲಿನಕಲ್ಲುತೆಗೆಯುವಚಿಕಿತ್ಸೆ, ಮೆದುಳಿನ ರಕ್ತಸ್ರಾವದಚಿಕಿತ್ಸೆ, ಅಲ್ಸರ್‌ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್‌ಚಿಕಿತ್ಸೆ, ಇತರೆಔಧ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ ರೂ.2,00,000/-ವರೆಗೆ

15. ಮದುವೆ ಸಹಾಯಧನ (ಗೃಹ ಲಕ್ಷ್ಮೀ ಬಾಂಡ್): ಫಲಾನುಭವಿ ಅಥವಾಅವರಇಬ್ಬರು ಮಕ್ಕಳ ಮದುವೆಗೆತಲಾ ರೂ.50,000/-

16. LPG ಸಂಪರ್ಕ ಸೌಲಭ್ಯ (ಕಾರ್ಮಿಕ ಅನಿಲ ಭಾಗ್ಯ): ಅನಿಲ ಸಂಪರ್ಕದೊಂದಿಗೆಎರಡು ಬರ್ನರ್ ಸ್ಟೌವ್

17. ಬಿಎಂಟಿಸಿ ಬಸ್ ಪಾಸ್ ಸೌಲಭ್ಯ: ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತಹ / ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತಕಟ್ಟಡಕಾರ್ಮಿಕರಿಗೆ

18. ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ: ರಾಜ್ಯದಾದ್ಯಂತ ವಿದ್ಯಾಭ್ಯಾಸದಲ್ಲಿತೊಡಗಿರುವ ನೋಂದಾಯಿತಕಾರ್ಮಿಕರಇಬ್ಬರು ಮಕ್ಕಳಿಗೆ (ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ)

19. ತಾಯಿ ಮಗು ಸಹಾಯ ಹಸ್ತ: ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕರೂ.6,000/- ಗಳ ಸಹಾಯಧನ.

ಅನುಬಂಧ-02

(ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 3015)

2007 ರಿಂದ ಫೆಬ್ರವರಿ-2021 ರವರೆಗೆಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳಡಿಯಲ್ಲಿ ವಿತರಿಸಲಾದ ವರ್ಷವಾರು ಸಾಧನೆಯ ವಿವರ

ಸೌಲಭ್ಯಗಳ ವಿವರ	2007-08 ರಿಂದ 2012-13 ರವರೆಗೆ		2013-14 ರಿಂದ 2017-18 ರವರೆಗೆ		2018-19		2019-20		2020-21		ಒಟ್ಟು	
	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
ಶೈಕ್ಷಣಿಕಧನಸಹಾಯ	10,896	27,679,600	227,489	1,038,126,292	95,637	533,279,365	125,403	724,788,917	100,168	735,327,640	559,593	3,059,201,814
ಮದುವೆಧನಸಹಾಯ	2,126	15,160,000	23,514	1,161,415,000	11,380	475,875,000	10,966	453,596,000	14,784	379,665,000	62,770	2,485,711,000
ಅಂತ್ಯ ಸಂಸ್ಕಾರಕ್ಕೆ ವೆಚ್ಚ	1,376	20,921,000	6,368	328,454,619	2,208	117,282,000	3,674	198,641,000	2,788	150,790,000	16,414	816,088,619
ಪ್ರಮುಖ ವೈದ್ಯಕೀಯ	233	8,104,269	2,272	63,982,540	530	12,829,473	778	22,668,307	1,125	41,473,646	4,938	149,058,235
ಅಪಘಾತ ಪರಿಹಾರ	195	14,777,740	185	25,574,260	58	13,781,000	116	31,957,000	123	20,559,000	677	106,649,000
ಹೆರಿಗೆಧನಸಹಾಯ	365	2,192,000	1,677	24,721,500	552	9,160,000	572	11,930,174	55	1,100,000	3,221	49,103,674
ವೈದ್ಯಕೀಯ ವೆಚ್ಚ	779	742,750	268	565,048	192	5,592,698	95	2,019,557	206	2,512,933	1,540	11,432,986
ಉಪಕರಣ ಖರೀದಿಗೆ ಸಾಲ	3	14,890	17	85,000	0	0	0	0	0	0	20	99,890
ಪಿಂಚಣಿ ಸೌಲಭ್ಯ	0	0	759	9,131,000	520	12,052,000	627	23,026,000	2,410	23,478,000	4,316	67,687,000
ದುರ್ಬಲತೆ ಪಿಂಚಣಿ	0	0	11	1,608,000	7	1,214,000	18	2,999,000	40	1,270,000	76	7,091,000
ಕುಟುಂಬ ಪಿಂಚಣಿ	0	0	0	0	0	0	0	0	11	17,000	11	17,000
ಅನಿಲ ಭಾಗ್ಯ	0	0	0	20,000,000	4,055	0	0	0	0	0	4,055	20,000,000
ಶ್ರಮಸಾಮರ್ಥ್ಯ	0	0	1,854	83,995,481	3,157	56,972,953	623	90,170,239	0	0	5,634	231,138,673
ಬಿಎಂಟಿಸಿ ಬಸ್ ಪಾಸ್	0	0	0	52,479,000	1,602	0	2,996	594,300	45,281	384,878,550	49,879	437,951,850
ವಸತಿ ಸೌಲಭ್ಯ	0	0	0	0	0	0	5,129	760,000,000	0	0	5,129	760,000,000
ಶಿಶು ಪಾಲನಾ ಕೇಂದ್ರಗಳ ಸ್ಥಾಪನೆ	0	0	0	0	0	0	501	3,000,000	218	5,763,296	719	8,763,296
ತಾಯಿ ಮಗು ಸಹಾಯ ಹಸ್ತ	0	0	0	0	0	0	0	0	27	162,000	27	162,000
ಒಟ್ಟು	**15,973**	**89,592,249**	**264,414**	**2,810,137,740**	**119,898**	**1,238,038,489**	**151,498**	**2,325,390,494**	**167,236**	**1,746,997,065**	**719,019**	**8,210,156,037**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	3029
ಸದಸ್ಯರ ಹೆಸರು	ಶ್ರೀ ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ)
ಉತ್ತರಿಸಬೇಕಾದ ದಿನಾಂಕ	18.03.2021
ಉತ್ತರಿಸಬೇಕಾದ ಸಚಿವರು	ಮಾನ್ಯ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಪ್ರಶ್ನೆ	ಉತ್ತರ
ಅ) ಬೆಳಗಾವಿ ನಗರದಲ್ಲಿ ಐಟಿ ಪಾರ್ಕ್ ಸ್ಥಾಪಿಸುವ ಕುರಿತು ಸಲ್ಲಿಕೆಯಾಗಿರುವ ಪ್ರಸ್ತಾವನೆಗಳ ವಿವರ ನೀಡುವುದು; ಆ) ಉದ್ದೇಶಿತ ಯೋಜನೆಯನ್ನು ಎಷ್ಟು ಎಕರೆ ಪ್ರದೇಶದಲ್ಲಿ ಕೈಗೊಳ್ಳಲಾಗುವುದು; ಸದರಿ ಪ್ರದೇಶವು ಯಾರ ಒಡೆತನದಲ್ಲಿದೆ; ಇ)ಜಮೀನು ಹಸ್ತಾಂತರಿಸಿಕೊಳ್ಳುವ ಪ್ರಕ್ರಿಯೆಯ ವಿವರಗಳನ್ನು ನೀಡುವುದು; ಈ) ಐಟಿ ಪಾರ್ಕ್ ಸ್ಥಾಪನೆಗೆ ಪ್ರಾಥಮಿಕ ರೂಪುರೇಷೆಗಳನ್ನು ರೂಪಿಸಲಾಗಿದೆಯೇ; ಇಲ್ಲವಾದಲ್ಲಿ ಯಾವಾಗ ರೂಪಿಸಲಾಗುವುದು;	ಬೆಳಗಾವಿಯಲ್ಲಿ ಐಟಿ ಪಾರ್ಕ್ ಸ್ಥಾಪಿಸಲು ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲ್ಲೂಕಿನ ವಾಘೇವಾಡ ಗ್ರಾಮದ ರಿ.ಸ.ನಂ: 152, ಪ್ಲಾಟ್ ನಂ:1ರಲ್ಲಿ 169 ಎಕರೆ 32 ಗುಂಟೆ ಜಮೀನನ್ನು ಕೆ.ಐ.ಎ.ಡಿ.ಬಿ ಮೂಲಕ ಮಾಹಿತಿ ತಂತ್ರಜ್ಞಾನ ಪಾರ್ಕ್ ಸ್ಥಾಪಿಸಲು ಬೆಳಗಾವಿ ಜಿಲ್ಲಾಧಿಕಾರಿಯವರಿಂದ ದಿನಾಂಕ: 18.01.2007ರ ಆದೇಶದಲ್ಲಿ ಮಂಜೂರಾತಿ ನೀಡಲಾಗಿತ್ತು. ಜಮೀನಿನ ಬಗ್ಗೆ ನ್ಯಾಯಾಲಯ ಪ್ರಕರಣವಿದ್ದು, 2017ರಲ್ಲಿ ಪ್ರಕರಣವು ಇತ್ಯರ್ಥವಾಗಿದೆ. ಈ ಉದ್ದೇಶಕ್ಕೆ ಮಂಜೂರಾಗಿದ್ದ ಜಮೀನನ್ನು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯಕ್ಕೆ ಹಸ್ತಾಂತರ ಮಾಡುವಂತೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ರವರಿಗೆ ದಿನಾಂಕ: 02.07.2018 ಹಾಗೂ ದಿನಾಂಕ: 07.01.2019 ರಂದು ಪತ್ರ ಬರೆದು ಜಮೀನು ಹಸ್ತಾಂತರ ಮಾಡಲು ಕೋರಲಾಗಿದ್ದು, ಇದುವರೆಗೆ ಜಮೀನು ಹಸ್ತಾಂತರವಾಗಿರುವುದಿಲ್ಲ. ಮುಂದುವರೆದು, ಬೆಳಗಾವಿ ಜಿಲ್ಲೆಯ ಬೆಳಗಾವಿ ಗ್ರಾಮದ ರಿ.ಸ.ನಂ. 1304 ರಿಂದ 1397ರ ಹುಲ್ಲುಗಾವಲು (ಕುರಣ) ಜಮೀನುಗಳನ್ನು ಸ್ವಾತಂತ್ರ್ಯ ಪೂರ್ವದಲ್ಲಿ ಭಾರತೀಯ ಸೇನೆಯ ಉಪಯೋಗಕ್ಕಾಗಿ ನೀಡಲಾಗಿತ್ತು. ಈ ಜಮೀನುಗಳು ಬೆಳಗಾವಿಯಲ್ಲಿ ನಿರ್ಮಿಸಲಾಗಿರುವ ಸುವರ್ಣಸೌಧದ ಸಮೀಪದಲ್ಲಿ ಇರುತ್ತವೆ. ಈ ಹಿಂದೆ ರಕ್ಷಣಾ ಇಲಾಖೆಯ ಉಪಯೋಗಕ್ಕಾಗಿ ಕಾಯ್ದಿರಿಸಲಾದ ಈ ಜಮೀನನ್ನು ಸರ್ಕಾರದ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಹಾಗೂ ಕೇಂದ್ರ ಸರ್ಕಾರ ಪ್ರಾಯೋಜಿತ "ಸ್ಮಾರ್ಟ್ ಸಿಟಿ" ಯೋಜನೆಗೆ ಅವಶ್ಯಕತೆಯಿರುತ್ತದೆ ಎಂದು ಸದರಿ ಜಮೀನನ್ನು ಕರ್ನಾಟಕ ಸರ್ಕಾರದ ವಶಕ್ಕೆ ಪಡೆಯಲು ಬೆಳಗಾವಿ ಜಿಲ್ಲಾಧಿಕಾರಿಗಳು

ಉ) ಈ ಕುರಿತು ಕೈಗೊಂಡಿರುವ ಹಾಗೂ ಕೈಗೊಳ್ಳುವ ಕ್ರಮಗಳ ವಿವರಗಳೇನು?	ಕಂದಾಯ ಇಲಾಖೆಗೆ ದಿನಾಂಕ: 03.01.2018ರಂದು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಸದರಿ ಪ್ರಸ್ತಾವನೆಯು ಕಂದಾಯ ಇಲಾಖೆಯ ಪರಿಶೀಲನೆಯಲ್ಲಿದೆ. ಮಾನ್ಯ ಉಪ ಮುಖ್ಯಮಂತ್ರಿಯವರು ಹಾಗೂ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಭಾರತ ಸರ್ಕಾರದ ಮಾನ್ಯ ರಕ್ಷಣಾ ಸಚಿವರಿಗೆ ದಿನಾಂಕ: 08.01.2021ರಂದು ಪತ್ರ ಬರೆದು, ಬೆಳಗಾವಿ ಗ್ರಾಮದ ರಿ.ಸ.ನಂ. 1304 ರಿಂದ 1397 ರಲ್ಲಿರುವ 750ಕ್ಕಿಂತ ಹೆಚ್ಚಿನ ಎಕರೆ ಜಮೀನು ರಾಷ್ಟ್ರೀಯ ಹೆದ್ದಾರಿಗೆ ಸಮೀಪದಲ್ಲಿದ್ದು, ಐ.ಟಿ ಪಾರ್ಕ್ ಸ್ಥಾಪಿಸಲು ಸೂಕ್ತವಾಗಿರುತ್ತದೆ. ಮುಂದುವರೆದು, ಸ್ವಾತಂತ್ರ್ಯ ಪೂರ್ವದಲ್ಲಿ ಭಾರತೀಯ ಸೇನೆಯ ಉಪಯೋಗಕ್ಕೆ ನೀಡಲಾಗಿದ್ದ ಸದರಿ ಜಮೀನನ್ನು ಐಟಿ ಪಾರ್ಕ್ ಸ್ಥಾಪಿಸುವ ಸಂಬಂಧವಾಗಿ ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸುವಂತೆ ಆದೇಶಿಸಲಾಗಿದ್ದು, ಆದರೆ, ರಕ್ಷಣಾ ಇಲಾಖೆಯು ಇದುವರೆಗೂ ಸದರಿ ಜಮೀನನ್ನು ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸಲು ಕ್ರಮ ಕೈಗೊಂಡಿರುವುದಿಲ್ಲ ಎಂದು ತಿಳಿಸುತ್ತಾ, ಸದರಿ ಜಮೀನನ್ನು ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸುವ ಬಗ್ಗೆ ಚರ್ಚಿಸಲು ಸೂಕ್ತ ದಿನಾಂಕ ಮತ್ತು ಸಮಯ ನಿಗದಿಪಡಿಸುವಂತೆ ಭಾರತ ಸರ್ಕಾರದ ರಕ್ಷಣಾ ಸಚಿವರನ್ನು ಕೋರಿರುತ್ತಾರೆ. ಈ ಮೇಲೆ ಹೇಳಿರುವ ಜಮೀನುಗಳು ಇನ್ನೂ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯಕ್ಕೆ ಹಸ್ತಾಂತರಗೊಂಡಿರುವುದಿಲ್ಲ. ಸದರಿ ಜಮೀನು ಇಲಾಖೆಯ ಸುಪರ್ದಿ ಹಸ್ತಾಂತರವಾದ ನಂತರ ಸದರಿ ಜಾಗದಲ್ಲಿ ಮಾದರಿ ಬಹುತಾಂತ್ರಿಕ ಐಟಿ ಪಾರ್ಕ್ ಅನ್ನು ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುವುದು.

(ಐಟಿಬಿಟಿ 20 ಎಲ್‌ಸಿಎಂ 2021)

(ಡಾ|| ಅಶ್ವಥ್ ನಾರಾಯಣ ಸಿ.ಎನ್)
ಉಪ ಮುಖ್ಯಮಂತ್ರಿಗಳು ಹಾಗೂ
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಹಾಗೂ ವಿಜ್ಞಾನ
ಮತ್ತು ತಂತ್ರಜ್ಞಾನ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2655
ಅ	ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಪ್ರೌಢಶಾಲೆಗಳನ್ನಾಗಿ ಉನ್ನತೀಕರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಉನ್ನತೀಕರಿಸಲು ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಎಂ.ಹೆಚ್.ಆರ್.ಡಿ ಯ ಈ ಕೆಳಕಂಡ ಮಾರ್ಗದರ್ಶನಗಳನ್ವಯ ಕ್ರಮವಹಿಸಿ ಪ್ರೌಢಶಾಲೆಗಳನ್ನಾಗಿ ಉನ್ನತೀಕರಿಸಲು ಕ್ರಮವಹಿಸಲಾಗಿದೆ. 1. 8ನೇ ತರಗತಿಯಲ್ಲಿ ವಿದ್ಯಾರ್ಥಿಗಳ ದಾಖಲಾತಿ 70 ಇರಬೇಕು. ಗುಡ್ಡಗಾಡು ಪ್ರದೇಶವಾದಲ್ಲಿ ಈ ದಾಖಲಾತಿಯು 25-30 ಇರಬೇಕು. 2. 5 ಕಿ.ಮೀ ವ್ಯಾಪ್ತಿಯಲ್ಲಿ ಸರ್ಕಾರಿ ಅನುದಾನಿತ ಅನುದಾನರಹಿತ ಶಾಲೆಗಳಿರಬಾರದು. 3. ಜಿ.ಐ.ಎಸ್. ಮ್ಯಾಪಿಂಗ್ ಇರಬೇಕು.
ಆ	ಲಿಂಗಸುಗೂರು ತಾಲ್ಲೂಕಿನ ಸರ್ಕಾರಿ ಪ್ರೌಢಶಾಲೆಗಳನ್ನು ಸರ್ಕಾರಿ ಪದವಿ-ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ಬೈಯಾಪುರ, ಅನ್ವರಿ, ಚಿತ್ತಾಪುರ, ಗೌಡೂರು, ಸರ್ಕಾರಿ ಪ್ರೌಢಶಾಲೆಗಳನ್ನು ಉನ್ನತೀಕರಿಸಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸಲು ಪ್ರಸ್ತಾವನೆ ಇದ್ದು, ಸದರಿ ಶಾಲೆಗಳನ್ನು ಉನ್ನತೀಕರಿಸಲು ಕೆಳಕಂಡ ಮಾಹಿತಿಗಳನ್ನು ಕ್ರೋಢೀಕರಿಸಲಾಗುತ್ತಿದೆ. 1. ಉನ್ನತೀಕರಿಸಿರುವಂತಹ ಪ್ರದೇಶಗಳಲ್ಲಿ ಎಸ್.ಎಸ್.ಎಲ್.ಸಿ ಇಂದ ಪದವಿ ಪೂರ್ವ ಶಿಕ್ಷಣಕ್ಕೆ ಬರುವ ವಿದ್ಯಾರ್ಥಿಗಳ ಪ್ರತಿಶತ (average) ವಿವರಗಳು . 2. ಕೆ.ಪಿ.ಶಾಲೆಗಳಲ್ಲಿ ಈ ಕಾಲೇಜುಗಳನ್ನು ಉನ್ನತೀಕರಿಸಲು ಇರುವ ಅವಕಾಶದ ಬಗ್ಗೆ ಮಾಹಿತಿ. 3. ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಗರಿಷ್ಠ/ಕನಿಷ್ಠ ಸಂಖ್ಯೆಯ ವಿವರ. 4. ಉಪನ್ಯಾಸಕರ ವಿವರಗಳ ಬಗ್ಗೆ ಸ್ಪಷ್ಟ ಸಂಖ್ಯೆಯ/ಮೊತ್ತದ ಮಾಹಿತಿ. ಲಿಂಗಸೂಗೂರು ತಾಲ್ಲೂಕಿನ ಮಾವಿನಭಾವಿ ಸರ್ಕಾರಿ ಪ್ರೌಢಶಾಲೆಯನ್ನು ಸರ್ಕಾರಿ ಪದವಿ ಪೂರ್ವ ಕಾಲೇಜನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆಯು ನಿರ್ದೇಶಕರು, ಪದವಿ ಪೂರ್ವ ಇವರ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.
ಇ	ಈ ಜಿಲ್ಲೆಯ ಲಿಂಗಸುಗೂರು ವಿಧಾನಸಭಾ ಕ್ಷೇತ್ರದಲ್ಲಿ ಬರುವ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆ, ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಮೂಲಭೂತ ಸೌಲಭ್ಯ ಒದಗಿಸಲು ಸರ್ಕಾರ ತೆಗೆದುಕೊಂಡ	ಲಿಂಗಸುಗೂರು ವಿಧಾನಸಭಾ ಕ್ಷೇತ್ರದಲ್ಲಿ ಬರುವ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆ, ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಎಸ್.ಡಿ.ಪಿ/ಕೆ.ಕೆ.ಆರ್.ಡಿ.ಬಿ/ಆರ್.ಐ.ಡಿ.ಎಫ್ ಮತ್ತು ಸಮಗ್ರ ಶಿಕ್ಷಣ ಕರ್ನಾಟಕ ಈ ಯೋಜನೆಗಳ ಅಡಿಯಲ್ಲಿ ಮೂಲಭೂತ ಸೌಲಭ್ಯಗಳನ್ನು

	ಕ್ರಮಗಳೇನು;	ಒದಗಿಸಲಾಗುತ್ತಿದೆ.
ಈ	2020-21ನೇ ಸಾಲಿನಲ್ಲಿ ಮಂಜೂರಾಗಿರುವ ಅನುದಾನವೆಷ್ಟು;	ರಾಜ್ಯದ ಮುಂದುವರೆದ ಯೋಜನೆ ಅಡಿಯಲ್ಲಿ ಪ್ರಾಥಮಿಕ: 15.90 ಲಕ್ಷ (3 ಕೋಣೆಗಳಿಗೆ) ಪ್ರೌಢ: 47.25 ಲಕ್ಷ (6 ಕೊಣೆಗಳಿಗೆ) ಒಟ್ಟು: 63.15 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ.
ಉ	ರಾಜ್ಯದಲ್ಲಿ ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ವೇತನ ಹೆಚ್ಚಳ ಸೇರಿದಂತೆ ಇತರೆ ಸೌಲಭ್ಯಗಳನ್ನು ಒದಗಿಸಲು ಸರ್ಕಾರವು ತಗೆದುಕೊಂಡ ಕ್ರಮಗಳೇನು?	ಮಧ್ಯಾಹ್ನ ಉಪಹಾರ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಮುಖ್ಯ ಅಡುಗೆಯವರ ಮಾಸಿಕ ಸಂಭಾವನೆಯನ್ನು ರೂ 6000/-ಕ್ಕೆ ಮತ್ತು ಸಹಾಯಕ ಅಡುಗೆಯವರ ಮಾಸಿಕ ಸಂಭಾವನೆಯನ್ನು ರೂ 5000/-ಕ್ಕೆ ಪರಿಷ್ಕರಿಸಲು ಆರ್ಥಿಕ ಇಲಾಖೆಯ ಸಹಮತಿ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಆದರೆ ಈಗಾಗಲೇ ರಾಜ್ಯ ಸರ್ಕಾರವು ತನ್ನ ಪಾಲಿಗಿಂತ ಹೆಚ್ಚುವರಿಯಾಗಿ ಮುಖ್ಯ ಅಡುಗೆಯವರಿಗೆ ರೂ 2100/- ಮತ್ತು ಸಹಾಯಕ ಅಡುಗೆಯವರಿಗೆ ರೂ.2000/-ಗಳನ್ನು ಪಾವತಿಸಲಾಗುತ್ತಿರುವುದರಿಂದ ಮತ್ತು ಕೇಂದ್ರ ಸರ್ಕಾರವು ತನ್ನ ಪಾಲಿನ ಸಂಭಾವನೆಯನ್ನು ಹೆಚ್ಚಿಳ ಮಾಡದ ಹೊರತು ರಾಜ್ಯ ಸರ್ಕಾರವು ಮತ್ತೊಮ್ಮೆ ಹೆಚ್ಚಳ ಮಾಡಲು ಸಾಧ್ಯವಿರುವುದಿಲ್ಲವೆಂದು ಹಾಗೂ ಪ್ರಸ್ತುತ ಕೋವಿಡ್-19 ಮಾಹಾಮಾರಿಯಿಂದಾಗಿ ರಾಜ್ಯ ಆರ್ಥಿಕ ಪರಿಸ್ಥಿತಿ ಆಶಾದಾಯಕವಾಗಿರದ ಕಾರಣ ಈ ಸಂದರ್ಭದಲ್ಲಿ ಅಡುಗೆ ಸಿಬ್ಬಂದಿಗಳ ಸಂಭಾವನೆಯನ್ನು ಪರಿಷ್ಕರಿಸುವ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಾಗುವುದಿಲ್ಲವೆಂದು ಆರ್ಥಿಕ ಇಲಾಖೆಯು ತಿಳಿಸಿರುತ್ತದೆ. ಮುಖ್ಯ ಅಡುಗೆಯವರ ಮಾಸಿಕ ಸಂಭಾವನೆಯನ್ನ ರೂ 6000/-ಕ್ಕೆ ಹಾಗೂ ಸಹಾಯಕ ಅಡುಗೆಯವರ ಮಾಸಿಕ ಸಂಭಾವನೆಯನ್ನು ರೂ.5000/-ಕ್ಕೆ ಪರಿಷ್ಕರಿಸಿ ಅದಕ್ಕೆ ಅನುಗುಣವಾಗಿ ಕೇಂದ್ರ ಸರ್ಕಾರದ ಪಾಲಿನ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಕೇಂದ್ರ ಸರ್ಕಾರದ ಶಿಕ್ಷಣ ಮಂತ್ರಾಲಯದ ಸಚಿವರಿಗೆ ಪತ್ರ ಬರೆಯಲಾಗಿದೆ. 18 ರಿಂದ 40 ವರ್ಷದೊಳಗಿನ ಎಲ್ಲಾ ಅಡುಗೆ ಸಿಬ್ಬಂದಿಗಳಿಗೆ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಶ್ರಮ್ ಯೋಗಿ ಮಾನ್-ಧನ್ ಪಿಂಚಣಿ ಯೋಜನೆಯಡಿಯಲ್ಲಿ ನೋಂದಾಯಿಸಿಕೊಂಡ ಅಡುಗೆ ಸಿಬ್ಬಂದಿಗೆ 60 ವರ್ಷ ಪೂರ್ಣಗೊಂಡ ನಂತರ ಮಾಸಿಕ ರೂ 3000/-ಗಳ ಪಿಂಚಣಿ ಸೌಲಭ್ಯವನ್ನು ಪಡೆಯಲು ಅವಕಾಶವಿದ್ದು, ಈ

		ಶ್ರಮ್ ಯೋಗಿ ಮಾನ್-ಧನ್ ಪಿಂಚಣಿ ಯೋಜನೆಯಡಿಯಲ್ಲಿ ನೋಂದಾಯಿಸಿಕೊಂಡ ಅಡುಗೆ ಸಿಬ್ಬಂದಿಗೆ 60 ವರ್ಷ ಪೂರ್ಣಗೊಂಡ ನಂತರ ಮಾಸಿಕ ರೂ 3000/-ಗಳ ಪಿಂಚಣಿ ಸೌಲಭ್ಯವನ್ನು ಪಡೆಯಲು ಅವಕಾಶವಿದ್ದು, ಈ ಯೋಜನೆಯಡಿ ಅಡುಗೆ ಸಿಬ್ಬಂದಿಗಳನ್ನು ನೋಂದಾಯಿಸಲು ಕ್ರಮವಹಿಸಲಾಗಿದೆ. ಅಡುಗೆ ಸಿಬ್ಬಂದಿಗಳಿಗೆ ಕರ್ತವ್ಯದ ಅವಧಿಯಲ್ಲಿ ಅಪಘಾತ/ಅವಘಡ ಸಂಭವಿಸಿದ್ದಲ್ಲಿ ಈ ಕೆಳಕಂಡಂತೆ ಪರಿಹಾರ ಒದಗಿಸಲಾಗುತ್ತದೆ. • ಸರ್ಕಾರದ ಆದೇಶ ಸಂಖ್ಯೆ : ಇಡಿ 92 ಎಂ.ಎಂ.ಎಸ್ 2009, ದಿನಾಂಕ : 22.02.2010 (ಇಡಿ ಸ್ಕೀಮರ(ಯುನಿಕ್) 2010, ದಿನಾಂಕ : 22.02.2009) ರನ್ವಯ ಅಡುಗೆ ಸಿಬ್ಬಂದಿಯವರು ಅಡುಗೆ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಸುಟ್ಟಗಾಯಗಳಾಗಿದಲ್ಲಿ ರೂ.30,000/-, ಶಾಶ್ವತ ಅಂಗವಿಕಲತೆ ಉಂಟಾದಲ್ಲಿ ಗರಿಷ್ಟ ರೂ.75,000/- ಮತ್ತು ಸುಟ್ಟಗಾಯಗಳಾಗಿ ಮರಣ ಹೊಂದಿದ ಸಂದರ್ಭದಲ್ಲಿ ರೂ.1,00,000/-ಗಳ ಪರಿಹಾರವನ್ನು ನೀಡಲಾಗುತ್ತಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಅನುಷ್ಠಾನಗೊಂಡಿರುವ "ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ" ಯೋಜನೆಯಡಿ ಅಡುಗೆಯವರು ನೋಂದಾಯಿಸಿಕೊಂಡು ಹೆಲ್ತ್‌ಕಾರ್ಡ್ ಪಡೆದು ಉಚಿತ ಆರೋಗ್ಯ ಸೇವೆಗಳನ್ನು ಪಡೆಯಲು ಕ್ರಮವಹಿಸಲಾಗಿದೆ.

ಇಪಿ 129 ಎಸ್‌ಇಎಸ್ 2021

(ಎಸ್ ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **3049**
ಸದಸ್ಯರ ಹೆಸರು : ಶ್ರೀ ದೇವಾನಂದ್ ಫುಲಸಿಂಗ್ ಚವಾಣ್ (ನಾಗಠಾಣ)
ಉತ್ತರಿಸಬೇಕಾದ ದಿನಾಂಕ : 18.03.2021
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ನಾಗಠಾಣ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಹೊಸದಾಗಿ ಪ್ರೌಢಶಾಲೆಗಳು ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ಕೋರಿ ಸಲ್ಲಿಕೆಯಾದ ಪ್ರಸ್ತಾವನೆಗಳು ಎಷ್ಟು;</td><td>ಕಳೆದ ಮೂರು ವರ್ಷಗಳಲ್ಲಿ ನಾಗಠಾಣ ವಿಧಾನ ಸಭಾ ವ್ಯಾಪ್ತಿಯಲ್ಲಿ ಹೊಸದಾಗಿ ಪ್ರೌಢಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ಕೋರಿ ಸಲ್ಲಿಕೆಯಾದ ಪ್ರಸ್ತಾವನೆಗಳ ವಿವರ
<table><tr><th>ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಸಲ್ಲಿಕೆಯಾದ ಪ್ರಸ್ತಾವನೆಗಳ ಸಂಖ್ಯೆ</th><th>ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಸಲ್ಲಿಸಕೆಯಾದ ಪ್ರಸ್ತಾವನೆಗಳ ಸಂಖ್ಯೆ:</th></tr><tr><td>2</td><td>6</td></tr></table></td></tr>
<tr><td>ಆ)</td><td>ಅಂತಹ ಪ್ರಸ್ತಾವನೆಗಳು ಈಗ ಯಾವ ಹಂತದಲ್ಲಿವೆ; (ವಿವರವಾದ ಮಾಹಿತಿ ನೀಡುವುದು)</td><td>ಪ್ರೌಢ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ, ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಕ್ರಿಯಾಯೋಜನೆ ಸಿದ್ದಪಡಿಸಿದ್ದು, ರಾಜ್ಯ ಯೋಜನಾ ನಿರ್ದೇಶಕರಿಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.
ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ,
6 ಪ್ರೌಢಶಾಲೆಗಳನ್ನು ಮೇಲ್ದರ್ಜೆಗೆ ಏರಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಪರಿಶೀಲನೆಯಲ್ಲಿರುತ್ತದೆ.</td></tr>
<tr><td>ಇ)</td><td>ನಾಗಠಾಣ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ, ಹೆಚ್ಚಾಗಿ ಕೊಠಡಿಗಳ ಸಮಸ್ಯೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.</td></tr>
<tr><td>ಈ)</td><td>ಬಂದಿದ್ದಲ್ಲಿ, ಕೊಠಡಿಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲು ಸರ್ಕಾರ ಕ್ರಮಗಳೇನು; (ವಿವರವಾದ ಮಾಹಿತಿ ನೀಡುವುದು)</td><td rowspan="2">ಕೊಠಡಿಗಳ ನಿರ್ಮಾಣಕ್ಕೆ 2017 ರಿಂದ 2019-20ರವರೆಗೆ ಅನುದಾನ ಬಿಡುಗಡೆ ಮಾಡಿರುವ ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ.
ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಮಾಹಿತಿಯು ಈ ಕೆಳಕಂಡಂತಿದೆ.
<table><tr><th>ಕ್ರ.ಸಂ</th><th>ಸರ್ಕಾರಿ ಪದವಿ ಪೂರ್ವ ಕಾಲೇಜಿನ ಹೆಸರು</th><th>ಬಿಡುಗಡೆಯಾದ ಅನುದಾನ</th></tr><tr><td>1</td><td>ಸಕಾರಿ ಪದವಿ ಪೂರ್ವ ಕಾಲೇಜು, ಕನ್ನೂರ 6 ಕೊಠಡಿ 2 ಶೌಚಾಲಯ</td><td>ರೂ. 96.00 ಲಕ್ಷ</td></tr><tr><td>2</td><td>ಸರ್ಕಾರಿ ಪದವಿ ಪೂರ್ವ ಕಾಲೇಜು, ಹೊನ್ನುಟಗಿ 2 ಕೊಠಡಿ 2 ಶೌಚಾಲಯ</td><td>ರೂ. 55.00 ಲಕ್ಷ</td></tr></table></td></tr>
<tr><td>ಉ)</td><td>ಕಳೆದ ಮೂರು ವರ್ಷಗಳಲ್ಲಿ ನಾಗಠಾಣ ವಿಧಾನ ಸಭಾ ಕ್ಷೇತ್ರಕ್ಕೆ ಬಿಡುಗಡೆಯಾದ ಅನುದಾನವೆಷ್ಟು; ಅದರಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು; (ವಿವರವಾದ ಮಾಹಿತಿ ನೀಡುವುದು)</td></tr>
</table>

		3	ಸರ್ಕಾರಿ ಪದವಿ ಪೂರ್ವ ಕಾಲೇಜು, ಬರಡೋಲ 10 ಕೊಠಡಿ 6 ಶೌಚಾಲಯ 2 ಪ್ರಯೋಗಾಲಯ	ರೂ. 194.00 ಲಕ್ಷ
ಊ)	ನಾಗಠಾಣ ವಿಧಾನಸಭಾ ಕ್ಷೇತ್ರವು ಕರ್ನಾಟಕ–ಮಹಾರಾಷ್ಟ್ರ ಗಡಿಭಾಗದಲ್ಲಿದ್ದು ಅತಿ ಹೆಚ್ಚು ಶಾಲಾ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.		
ಋ)	ಬಂದಿದ್ದಲ್ಲಿ, ಗಡಿ ಭಾಗದಲ್ಲಿ ಶೈಕ್ಷಣಿಕ ಚಟುವಟಿಕೆಗಳ ಉತ್ತೇಜನಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?	ಗಡಿ ಭಾಗದಲ್ಲಿ ಶೈಕ್ಷಣಿಕ ಚಟುವಟಿಕೆಗಳ ಉತ್ತೇಜನಕ್ಕಾಗಿ ಸರ್ಕಾರವು ಪ್ರಾಥಮಿಕ ಶಾಲೆಗಳಿಗೆ ರೂ. 1598.00 ಲಕ್ಷಗಳ ಮತ್ತು ಪ್ರೌಢಶಾಲೆಗಳಿಗಾಗಿ ರೂ.339.56 ಲಕ್ಷಗಳ ಕ್ರಿಯಾಯೋಜನೆ ಸಲ್ಲಿಸಲಾಗಿದ್ದು, ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ.		

ಸಂಖ್ಯೆ: ಇಪಿ 24 ಎಲ್‌ಬಿಪಿ 2021

(ಎಸ್. ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು

ಮೈದನಹಳ್ಳಿ		

RIDF-25 ಯೋಜನೆಯಡಿ ಮರುನಿರ್ಮಾಣಕ್ಕಾಗಿ 07 ಕೊಠಡಿಗಳು ಮಂಜೂರಾಗಿರುತ್ತದೆ

ಶಾಲೆಯ ಹೆಸರು	ಕೊಠಡಿಗಳ ಸಂಖ್ಯೆ	ಬಿಡುಗಡೆಯಾದ ಮೊತ್ತ (ರೂ.ಲಕ್ಷಗಳಲ್ಲಿ)
ಸ.ಕಿ.ಪ್ರಾ.ಶಾಲೆ ಶೀಬಿನಯ್ಯನ ಪಾಳ್ಯ	01	11.00
ಸ.ಕಿ.ಪ್ರಾ.ಶಾಲೆ ಹೆಚ್ ಗೊಲ್ಲರಹಟ್ಟಿ	01	11.00
ಸ.ಹಿ.ಪ್ರಾ.ಶಾಲೆ ದಂಡಿನದಿಬ್ಬ	01	11.00
ಸ.ಹಿ.ಪ್ರಾ.ಶಾಲೆ ತಿಪ್ಪಾಪುರ	01	11.00
ಸ.ಕಿ.ಪ್ರಾ.ಶಾಲೆ ಅಣ್ಣೇನಹಳ್ಳಿ	01	11.00
ಸ.ಕಿ.ಪ್ರಾ.ಶಾಲೆ ವೀರಾಪುರ	01	11.00
ಸ.ಹಿ.ಪ್ರಾ.ಶಾಲೆ ಮಸರಪಡಿ	01	11.00
ಒಟ್ಟು	07	77.00

ಇಪಿ: 64 ಯೋಸಕ 2021

S. S.

(ಎಸ್.ಸುರೇಶ್ ಕುಮಾರ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2787
ಮಾನ್ಯ ಸದಸ್ಯರ ಹೆಸರು	ಶ್ರೀ ಶಿವಾನಂದ ಎಸ್. ಪಾಟೀಲ್
ಉತ್ತರಿಸಬೇಕಾದ ದಿನಾಂಕ	18.03.2021
ಉತ್ತರಿಸುವ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ರಾಜ್ಯದಲ್ಲಿ ಸರ್ಕಾರದಿಂದ ಹೊಸ ಸರ್ಕಾರಿ ಮೆಡಿಕಲ್ ಕಾಲೇಜುಗಳನ್ನು ಸ್ಥಾಪಿಸಲಾಗುವುದೇ;	ಹೌದು
ಆ)	ರಾಜ್ಯದಲ್ಲಿನ ಸರ್ಕಾರಿ ಮೆಡಿಕಲ್ ಕಾಲೇಜುಗಳನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುತ್ತಿದೆಯೇ;	ಸರ್ಕಾರಿ ಮೆಡಿಕಲ್ ಕಾಲೇಜುಗಳನ್ನು ಮೇಲ್ದರ್ಜೆಗೇರಿಸುವ ಯಾವುದೇ ಪ್ರಸ್ತಾವನೆಗಳು ಪ್ರಸ್ತುತದಲ್ಲಿ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.
ಇ)	ಹಾಗಿದ್ದಲ್ಲಿ, ಯಾವ ಯಾವ ಸರ್ಕಾರಿ ಮೆಡಿಕಲ್ ಕಾಲೇಜುಗಳನ್ನು ಯಾವ ಮಾದರಿಯಲ್ಲಿ ಮೇಲ್ದರ್ಜೆಗೇರಿಸಲಾಗುವುದು;	ಮೇಲಿನಂತೆ ಉದ್ಭವಿಸುವುದಿಲ್ಲ.
ಈ)	ವಿಜಯಪುರದಲ್ಲಿ ಹೊಸ ಸರ್ಕಾರಿ ಮೆಡಿಕಲ್ ಕಾಲೇಜನ್ನು ಸ್ಥಾಪಿಸುವುದಕ್ಕೆ ಸರ್ಕಾರವು ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)	ರಾಜ್ಯ ಸರ್ಕಾರದ ವತಿಯಿಂದ ಹೊಸ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು ಅಂದಾಜು ರೂ.610.00 ಕೋಟಿಗಳ ಅನಾವರ್ತಕ ವೆಚ್ಚ ಹಾಗೂ ವಾರ್ಷಿಕ ರೂ.60.00 ಕೋಟಿಗಳ ಆವರ್ತಕ ವೆಚ್ಚದ ಅವಶ್ಯಕತೆ ಇರುತ್ತದೆ. ಪ್ರಸ್ತುತ ವಿಜಯಪುರದಲ್ಲಿ ಹೊಸ ವೈದ್ಯಕೀಯ ಕಾಲೇಜನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಸಂಖ್ಯೆ: ಎಂಇಡಿ 174 ಎಂಎಂಸಿ 2020

(ಡಾ|| ಕೆ. ಸುಧಾಕರ್)
ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2782
ಸದಸ್ಯರ ಹೆಸರು	:	ಡಾ॥ ಅವಿನಾಶ್ ಜಾಧವ್ (ಚಿಂಚೋಳಿ)
ಉತ್ತರಿಸಬೇಕಾದ ದಿನಾಂಕ	:	18.03.2021
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರಸ	ಪ್ರಶ್ನೆ	ಉತ್ತರ
ಅ)	ಕಲಬುರಗಿ ಜಿಲ್ಲೆಯ ಚಿಂಚೋಳಿ ಮತಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿವೆ: ಇವುಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಾಲೇಜು ಕಟ್ಟಡಗಳ ಸಂಖ್ಯೆ ಎಷ್ಟು;	ಕಲಬುರಗಿ ಜಿಲ್ಲೆಯ ಚಿಂಚೋಳಿ ಮತಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 05 ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಶಿಥಿಲಾವಸ್ಥೆಯಲ್ಲಿರುವ ಕಾಲೇಜು ಕಟ್ಟಡಗಳ ಸಂಖ್ಯೆ-01 (ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಚಿಂಚೋಳಿ).
ಆ)	ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ಮರು ನಿರ್ಮಾಣ/ರಿಪೇರಿ ಮಾಡಲು ಇಲ್ಲಿಯವರೆಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;	ಸದರಿ ಶಿಥಿಲಾವಸ್ಥೆಯಲ್ಲಿರುವ ಕಾಲೇಜು ಕಟ್ಟಡಕ್ಕೆ ಕಟ್ಟಡ ದುರಸ್ತಿ/ನವೀಕರಣ ಕೈಗೊಳ್ಳಲು ರೂ 5.00 ಲಕ್ಷಗಳನ್ನು ಮಂಜೂರು ಮಾಡಲಾಗಿದ್ದು, ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಕಳೆದ ವರ್ಷಗಳಲ್ಲಿ ಚಿಂಚೋಳಿ ಮತಕ್ಷೇತ್ರದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ವಿವಿಧ ಯೋಜನೆಗಳಡಿ ಮಂಜೂರು ಮಾಡಲಾದ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ
ಇ)	ಅವುಗಳಿಗಾಗಿ ಈವರೆಗೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು? (ಸಂಪೂರ್ಣ ಮಾಹಿತಿ ಒದಗಿಸುವುದು)	ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಿರುವ ಶಾಲಾವಾರು ವಿವರವನ್ನು ಅನುಬಂಧದಲ್ಲಿ ಒದಗಿಸಿದೆ

ಇಪಿ: 70 ಯೋಸಕ 2021

(ಎಸ್.ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅನುಬಂಧ.

ಚಿಂಚೋಳಿ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಮಂಜೂರಾಗಿರುವ ಕಾಮಗಾರಿ ವಿವರಗಳ ಅನುಬಂಧ

ಕ್ರ. ಸಂ	ಸ.ಪ.ಪೂ.ಕಾಲೇಜು ಹೆಸರು	ಕಾಮಗಾರಿ ವಿವರ	ಯೋಜನೆ	ಬಿಡುಗಡೆ ಮಾಡಲಾದ ಅನುದಾನ (ರೂ ಲಕ್ಷಗಳಲ್ಲಿ)	ಭೌತಿಕ ಹಂತ
1	(ಬಾಲಕಿಯರ) ಚಿಂಚೋಳಿ	ಶೌಚಾಲಯ ಮತ್ತು ಕುಡಿಯುವ ನೀರು	ಮೀಸಲು ಕ್ಷೇತ್ರ	17.90	ಕಾಮಗಾರಿ ಪೂರ್ಣಗೊಂಡಿದೆ.
2	(ಬಾಲಕಿಯರ) ಚಿಂಚೋಳಿ	ಕಟ್ಟಡ ನವೀಕರಣ /ದುರಸ್ಥಿ	ರಾಜ್ಯ ಬಂಡವಾಳ ವೆಚ್ಚ	5.00	ಕಾಮಗಾರಿ ಪೂರ್ಣಗೊಂಡಿದೆ
3	(ಬಾಲಕರ) ಚಿಂಚೋಳಿ	ಕಟ್ಟಡ ನವೀಕರಣ /ದುರಸ್ಥಿ	ರಾಜ್ಯ ಬಂಡವಾಳ ವೆಚ್ಚ	5.00	ಕಾಮಗಾರಿ ಪೂರ್ಣಗೊಂಡಿದೆ
4	ಸೂಲಿಪೇಟೆ	02 ತರಗತಿ ಕೊಠಡಿ 04 ಶೌಚಾಲಯ	ಆರ್‌ಐಡಿಎಫ್-20	54.42	ಕಾಮಗಾರಿ ಪೂರ್ಣಗೊಂಡಿದೆ
5	ಸೂಲಿಪೇಟೆ	02 ತರಗತಿ ಕೊಠಡಿ 02 ಶೌಚಾಲಯ	ರಾಜ್ಯ ಬಂಡವಾಳ ವೆಚ್ಚ	55.00	ಕಾಮಗಾರಿ ಪೂರ್ಣಗೊಂಡಿದೆ

ಜಂಟಿ ನಿರ್ದೇಶಕರು
(ಮೂಲಭೂತ ಸೌಲಭ್ಯ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಕರ್ನಾಟಕ ವಿಧಾನ ಸಭೆ

1.	ವಿಧಾನ ಸಭೆಯ ಸದಸ್ಯರ ಹೆಸರು	:	ಶ್ರೀಮತಿ ರೂಪಾಲಿ ಸಂತೋಷ್ ನಾಯ್ಕ್ (ಕಾರವಾರ)
2.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2046
2.	ಉತ್ತರಿಸಬೇಕಾದ ದಿನಾಂಕ	:	18.03.2021
3.	ಉತ್ತರಿಸಬೇಕಾದ ಸಚಿವರು	:	ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಅ)	ಉತ್ತರ ಕನ್ನಡ ಜಿಲ್ಲೆಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಇಲ್ಲದೇ, ಇರುವುದರಿಂದ ಇತ್ತೀಚಿಗೆ ಕೇಂದ್ರ ಸಚಿವರ ಪತ್ನಿಗೆ ಸೂಕ್ತ ಚಿಕಿತ್ಸೆ ಸಿಗದೇ ಮರಣ ಹೊಂದಿದ್ದು, ಕೇಂದ್ರ ಸಚಿವರಿಗೂ ಚಿಕಿತ್ಸೆ ಸಿಗದೇ ಹೋಗಿದ್ದು ಹಾಗೂ ಈ ಭಾಗದ ನೂರಾರು ಜನರಿಗೆ ತುರ್ತು ಚಿಕಿತ್ಸೆ ಸಿಗದೇ ಮರಣ ಹೊಂದುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಉತ್ತರ ಕನ್ನಡ ಜಿಲ್ಲೆಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಇರುವುದಿಲ್ಲ. ಆದರೂ ಸಹ ಕಾರವಾರ ವೈದ್ಯಕೀಯ ವಿಜ್ಞಾನಗಳ ಬೋಧಕ ಆಸ್ಪತ್ರೆಯಲ್ಲಿ ಮಾನ್ಯ ಸಚಿವರಿಗೆ ಚಿಕಿತ್ಸೆ ನೀಡಲು ಎಲ್ಲಾ ರೀತಿಯ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿತ್ತು. ಮಾನ್ಯ ಮಂತ್ರಿಗಳ ವಾಹನ ಚಾಲಕರು ಹಾಗೂ ಗನ್ ಮ್ಯಾನ್ ರವರನ್ನು ಕಿಮ್ಸ್, ಕಾರವಾರ ಆಸ್ಪತ್ರೆಗೆ ಚಿಕಿತ್ಸೆ ಸಲುವಾಗಿ ಕರೆ ತಂದಿದ್ದು, ಇವರಿಗೆ ಸಿ.ಟಿ. ಸ್ಕ್ಯಾನ್ ಹಾಗೂ ಇತರೆ ಚಿಕಿತ್ಸೆ ನೀಡಲಾಗಿ, ಯಾವುದೇ ಗಂಭೀರ ಗಾಯಗಳಿಲ್ಲದ ಕಾರಣ ಮತ್ತು ಇವರುಗಳ ಮನವಿಯಂತೆ ಗೋವಾದ ಮೆಡಿಕಲ್ ಕಾಲೇಜ್ ಆಸ್ಪತ್ರೆಗೆ ಕಿಮ್ಸ್, ಕಾರವಾರ ಸಂಸ್ಥೆಯ ಸುಸಜ್ಜಿತ ಆಂಬ್ಯುಲೆನ್ಸ್ ನಲ್ಲಿ ಕಳುಹಿಸಿಕೊಡಲಾಯಿತು.
ಆ)	ಬಂದಿದ್ದಲ್ಲಿ ಕಾರವಾರದಲ್ಲಿ ಹೊಸದಾಗಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಮಂಜೂರಾತಿಯಲ್ಲಿನ ವಿಳಂಬಕ್ಕೆ ಕಾರಣವೇನು; ಯಾವಾಗ ಆಸ್ಪತ್ರೆ ಮಂಜೂರು ಮಾಡಲಾಗುವುದು? (ಸಂಪೂರ್ಣ ವಿವರ ನೀಡುವುದು)	ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದಲ್ಲಿ ಸ್ವೀಕೃತವಾಗಿರುತ್ತದೆ. ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಸಂಖ್ಯೆ: ಎಂಇಡಿ 192 ಎಂಪಿಎಸ್ 2021

(ಡಾ: ಕೆ. ಸುಧಾಕರ್)
ವೈದ್ಯಕೀಯ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2037
ಮಾನ್ಯ ಸದಸ್ಯರ ಹೆಸರು	:	ಶ್ರೀ ರಘುಮೂರ್ತಿ ಟಿ. (ಚಳ್ಳಕೆರೆ)
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು
ಉತ್ತರಿಸುವ ದಿನಾಂಕ	:	18.03.2021

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಚಿತ್ರದುರ್ಗ ಜಿಲ್ಲೆಯಲ್ಲಿ ಸರ್ಕಾರವು ಗುರುತಿಸಿರುವ ಪ್ರವಾಸೋದ್ಯಮ ಸ್ಥಳಗಳಾವುವು; (ತಾಲ್ಲೂಕುವಾರು ವಿವರ ನೀಡುವುದು)</td><td>ಪ್ರವಾಸೋದ್ಯಮ ನೀತಿ 2020-25ರನ್ವಯ ಚಿತ್ರದುರ್ಗ ಜಿಲ್ಲೆಯಲ್ಲಿ ಕೆಳಕಂಡ ಪ್ರವಾಸಿ ತಾಣಗಳನ್ನು ಗುರುತಿಸಲಾಗಿದೆ:-
<table>
<tr><th>ತಾಲ್ಲೂಕು</th><th>ಗುರುತಿಸಿರುವ ಪ್ರವಾಸಿ ತಾಣಗಳು</th></tr>
<tr><td>ಚಿತ್ರದುರ್ಗ</td><td>ಚಿತ್ರದುರ್ಗ, ಚಿತ್ರದುರ್ಗ ಕೋಟೆ, ಚಂದ್ರವಳ್ಳಿ ಜೋಗಿಮಟ್ಟಿ, ಆಡುಮಲ್ಲೇಶ್ವರ, ಶ್ರೀ ನಿಜಲಿಂಗಪ್ಪ ಸ್ಮಾರಕ ಕೇಂದ್ರ-ಸೀಬಾರ ಪಂಡರಹಳ್ಳಿ</td></tr>
<tr><td>ಹೊಸದುರ್ಗ</td><td>ಜಾನಕಲ್, ಬೇಗೂರು, ಹೆಗ್ಗೆರೆ</td></tr>
<tr><td>ಚಳ್ಳಕೆರೆ</td><td>ದೊಡ್ಡಗುಡ್ಡ, ಗೌರಸಮುದ್ರ</td></tr>
<tr><td>ಹಿರಿಯೂರು</td><td>ವಾಣಿವಿಲಾಸ್ ಸಾಗರ, ಮಾರಿಕಣಿವೆ, ಗಾಯತ್ರಿ ಜಲಾಶಯ</td></tr>
<tr><td>ಮೊಳಕಾಲ್ಮೂರು</td><td>ನುಂಕಿಮಲೆ, ಬ್ರಹ್ಮಗಿರಿ, ಅಶೋಕ-ಸಿದ್ದಾಪುರ, ಜಟಿಂಗ ರಾಮೇಶ್ವರ, ಬಿಳಿನೀರು-ಚಿಲುಮೆ-ಕೊಂಡ್ಲಹಳ್ಳಿ</td></tr>
<tr><td>ಹೊಳಲ್ಕೆರೆ</td><td>ರಾಮಗಿರಿ, ದೊಡ್ಡಹೊಟ್ಟೆ ರಂಗಪ್ಪ ಬೆಟ್ಟ</td></tr>
</table></td></tr>
<tr><td>ಆ)</td><td>ಕಳೆದ 3 ವರ್ಷಗಳಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ (ಮೂಲಭೂತ ಸೌಕರ್ಯ) ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳಾವುವು; (ವಿವರ ನೀಡುವುದು)</td><td>ಚಿತ್ರದುರ್ಗ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ವಿವರವನ್ನು ಅನುಬಂಧ-1ರಲ್ಲಿ ಒದಗಿಸಿದೆ.</td></tr>
<tr><td>ಇ)</td><td>ಕಳೆದ ಮೂರು ವರ್ಷಗಳಲ್ಲಿ ಚಳ್ಳಕೆರೆ ತಾಲ್ಲೂಕಿನಲ್ಲಿ ಪ್ರವಾಸೋದ್ಯಮ ಇಲಾಖೆ ವತಿಯಿಂದ ವಿವಿಧ ಯೋಜನೆಗಳಡಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳಾವುವು? (ಸಂಪೂರ್ಣ ವಿವರ ನೀಡುವುದು)</td><td>ಚಳ್ಳಕೆರೆ ತಾಲ್ಲೂಕಿನಲ್ಲಿ ಕೈಗೆತ್ತಿಕೊಂಡಿರುವ ಅಭಿವೃದ್ಧಿ ಕಾಮಗಾರಿಗಳ ವಿವರವನ್ನು ಅನುಬಂಧ-2ರಲ್ಲಿ ಒದಗಿಸಿದೆ.</td></tr>
</table>

ಕಡತ ಸಂಖ್ಯೆ : ಟಿಓಆರ್ 62 ಟಿಡಿವಿ 2021

(ಸಿ. ಪಿ. ಯೋಗೇಶ್ವರ)
ಪ್ರವಾಸೋದ್ಯಮ, ಪರಿಸರ ಮತ್ತು
ಜೀವಿಶಾಸ್ತ್ರ ಸಚಿವರು

(8)

ವಿ.ಸ.ಪ್ರಶ್ನೆ ಸಂಖ್ಯೆ: 2037ಕ್ಕೆ
ಅನುಬಂಧ-1

ಚಿತ್ರದುರ್ಗ ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ (ಮೂಲಭೂತ ಸೌಕರ್ಯ) ಕೈಗೆತ್ತಿಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ವಿವರ.

(ರೂ.ಲಕ್ಷಗಳಲ್ಲಿ)

ಕ್ರ.ಸಂ	ತಾಲ್ಲೂಕು	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ	ಬಿಡುಗಡೆ ಮಾಡಿರುವ ಅನುದಾನ
	2017-18ನೇ ಸಾಲಿನಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ (ಮೂಲಭೂತ ಸೌಕರ್ಯ) ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು			
1	ಚಳ್ಳಕೆರೆ	ಚಳ್ಳಕೆರೆ ತಾಲ್ಲೂಕಿನ ಕಾವಲುಚೌಡಮ್ಮ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ.	75.00	60.00
2		ಚಳ್ಳಕೆರೆ ತಾಲ್ಲೂಕು, ಕುದಾಪುರ ಗ್ರಾಮದಲ್ಲಿ ಶ್ರೀ ಚಿಂತ್ರಗುಟ್ಟಲ ಭೈರವ ಲಿಂಗೇಶ್ವರ (ಬೋರೇದೇವರು) ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ.	50.00	35.00
3		ಚಳ್ಳಕೆರೆ ತಾಲ್ಲೂಕಿನ ಕಡಬನಕಟ್ಟೆ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ಯಾತ್ರಿನಿವಾಸ ನಿರ್ಮಾಣ (ಹೆಚ್ಚುವರಿ)	70.00	30.00
4	ಹೊಳಲ್ಕೆರೆ	ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಹನುಮನಕಟ್ಟೆ ಕೆಂಚಾಂಬ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ.	25.00	10.00
5		ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ದುಮ್ಮಿಗೊಲ್ಲರಹಟ್ಟಿ ಜುಂಜಪ್ಪನ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ.	25.00	10.00
6		ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಸಾಸಲು ಭೂತಪ್ಪನ ದೇವಸ್ಥಾನದ ಹತ್ತಿರ ಯಾತ್ರಿನಿವಾಸ ನಿರ್ಮಾಣ.	25.00	10.00

7	ಹಿರಿಯೂರು	ಹಿರಿಯೂರು ತಾಲ್ಲೂಕು ದರ್ಮಪುರ ಹೋಬಳಿ ದೇವರಕೊಟ್ಟ ಗ್ರಾಮದಲ್ಲಿರುವ ಶ್ರೀ ದ್ಯಾಮಲಾಂಬ ದೇವಸ್ಥಾನದ ಆವರಣದಲ್ಲಿ ಯಾತ್ರಿನಿವಾಸ ನಿರ್ಮಾಣ.	25.00	10.00
8		ಹಿರಿಯೂರು ತಾಲ್ಲೂಕು ಅಬ್ಬಿನಹೊಳೆ ಶ್ರೀ ರಂಗನಾಥ ಸ್ವಾಮಿ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ.	25.00	18.75
9		ಹಿರಿಯೂರು ತಾಲ್ಲೂಕು ಹರ್ತಿಕೋಟೆ ಶ್ರೀ ಕೆಂಚಲಿಂಗೇಶ್ವರ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ.	25.00	18.75
10		ಹಿರಿಯೂರು ತಾಲ್ಲೂಕಿನ ಹೊಸಯಳನಡು ಗ್ರಾಮದ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ.	25.00	18.75
11		ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕು ಟಿ.ಗೊಲ್ಲಹಳ್ಳಿಯ ಶ್ರೀ ಟಿ.ಗೊಲ್ಲಾಳಮ್ಮನ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ ಹಾಗೂ ಮೂಲಭೂತ ಸೌಕರ್ಯ ಕಾಮಗಾರಿ	25.00	10.00
12		ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕು ಟಿ.ಗೊಲ್ಲಹಳ್ಳಿಯ ಶ್ರೀ ಟಿ.ಗೊಲ್ಲಾಳಮ್ಮನ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ ಹಾಗೂ ಮೂಲಭೂತ ಸೌಕರ್ಯ ಕಾಮಗಾರಿ (ಹೆಚ್ಚುವರಿ)	25.00	0.00
13	ಮೊಳಕಾಲ್ಮೂರು	ಮೊಳಕಾಲ್ಮೂರು ತಾಲ್ಲೂಕಿನ ಜಟಂಗರಾಮೇಶ್ವರ ಬೆಟ್ಟದಲ್ಲಿ ಯಾತ್ರಿನಿವಾಸ ಹಾಗೂ ಮೂಲಭೂತ ಸೌಕರ್ಯ ಅಭಿವೃದ್ಧಿ	25.00	10.00
14		ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕು ಹಾನಗಲ್ ಗ್ರಾಮದ ಶ್ರೀ ನುಂಕಿ ಮಲೆ ಸಿದ್ದೇಶ್ವರ ದೇವಸ್ಥಾನದ ಹತ್ತಿರ ಪ್ರವಾಸಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿ.	25.00	10.00
	ಚಿತ್ರದುರ್ಗ	2017–18ನೇ ಸಾಲಿನಲ್ಲಿ ಯಾವುದೇ ಕಾಮಗಾರಿ ಮಂಜೂರಾಗಿರುವುದಿಲ್ಲ		
	ಹೊಸದುರ್ಗ			

2018–19ನೇ ಸಾಲಿನಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ (ಮೂಲಭೂತ ಸೌಕರ್ಯ) ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು				
15	ಚಳ್ಳಕೆರೆ	ಚಳ್ಳಕೆರೆ ತಾಲ್ಲೂಕು, ನಾಯಕನಹಟ್ಟಿ ಶ್ರೀ ತಿಪ್ಪೇರುದ್ರಸ್ವಾಮಿ ದೇವಾಲಯ ಪ್ರದೇಶದಲ್ಲಿ ಹೈಟೆಕ್ ಶೌಚಾಲಯ ಹಾಗೂ ಇತರೆ ಮೂಲಸೌಲಭ್ಯಗಳ ಅಭಿವೃದ್ಧಿ.	50.00	25.00
16		ಬಂಡವಾಳ ವೆಚ್ಚಗಳ ಯೋಜನೆಯಡಿ / ಚಿತ್ರದುರ್ಗ ತಾಲ್ಲೂಕಿನ ಕಡಬನಕಟ್ಟೆ ಗ್ರಾಮದ ಈಶ್ವರ ದೇವಸ್ಥಾನದ ಹತ್ತಿರ ಮೂಲಭೂತ ಸೌಕರ್ಯ ಕಲ್ಪಿಸುವ ಕಾಮಗಾರಿ (ಚಿತ್ರದುರ್ಗ ತಾಲ್ಲೂಕು, ಚಳ್ಳಕೆರೆ ವಿಧಾನಸಭಾ ಕ್ಷೇತ್ರ)	50.00	15.00
17	ಹೊಳಲ್ಕೆರೆ	ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು ಲೋಕದೊಳಲು ಬಳಿ ದೊಡ್ಡಹೊಟ್ಟೆ ಶ್ರೀ ರಂಗನಾಥಸ್ವಾಮಿ ದೇವಸ್ಥಾನದ ಬಳಿ ಮೂಲಭೂತ ಸೌಕರ್ಯ ನಿರ್ಮಾಣ.	100.00	50.00
	ಹಿರಿಯೂರು	2018–19ನೇ ಸಾಲಿನಲ್ಲಿ ಯಾವುದೇ ಕಾಮಗಾರಿ ಮಂಜೂರಾಗಿರುವುದಿಲ್ಲ.		
	ಮೊಳಕಾಲ್ಮೂರು			
18	ಚಿತ್ರದುರ್ಗ	ಚಿತ್ರದುರ್ಗ ಜಿಲ್ಲೆಯಲ್ಲಿರುವ ಮಾರಘಟ್ಟ ಗ್ರಾಮದ ಸರ್ವೇ ನಂ ನಲ್ಲಿರುವ ಇಲಾಖಾ ಜಮೀನಿಗೆ ರಕ್ಷಣಾ ಗೋಡೆ ನಿರ್ಮಾಣ	40.00	40.00
19		ಚಿತ್ರದುರ್ಗದಲ್ಲಿ ಕೋಟೆಯ ಮುಂಭಾಗದಲ್ಲಿರುವ ಇಲಾಖಾ ಜಮೀನಿನಲ್ಲಿ ಪ್ರವಾಸಿ ಮಾಹಿತಿ ಕೇಂದ್ರ, ಪಾರ್ಕಿಂಗ್ ಸೌಲಭ್ಯ, ಲಗೇಜ್ ಕೊಠಡಿ, ಕುಡಿಯುವ ನೀರಿನ ಸೌಲಭ್ಯ, ಪ್ರವಾಸಿಗರಿಗೆ ವಿಶ್ರಾಂತಿ ಸೌಲಭ್ಯಗಳ ನಿರ್ಮಾಣ	200.00	100.00
20		ಚಿತ್ರದುರ್ಗದಲ್ಲಿರುವ ಸಹಾಯಕ ನಿರ್ದೇಶಕರ ಕಛೇರಿ ಹಾಗೂ ಹೋಟೆಲ್ ಮಯೂರ ಕೆ.ಎಸ್.ಟಿ.ಡಿ.ಸಿ ಗೆ ಕೂಡು ರಸ್ತೆ ಅಭಿವೃದ್ಧಿ	100.00	100.00
21		ಚಿತ್ರದುರ್ಗ ನಗರದ ಚಂದವಳ್ಳಿಯ ತೋಟ ಪ್ರದೇಶದಲ್ಲಿ ಮಕ್ಕಳ ಉದ್ಯಾನವನ, ಪಾರ್ಕಿಂಗ್ ವ್ಯವಸ್ಥೆ, ಉಪಹಾರಗೃಹ, ಟೂರಿಸಂ ಕಿಯೋಸ್ಕ್, ಡಿಜಿಟಲ್ ಮಾಹಿತಿ ಕೇಂಧ್ರ ವಸ್ತು ಸಂಗ್ರಹಾಲಯ, ಐತಿಹಾಸಿಕ ಕೆರೆಯಲ್ಲಿ ಬೋಟಿಂಗ್ ಸೌಲಭ್ಯ ಮುಂತಾದ ಪ್ರವಾಸಿ ಸೌಲಭ್ಯಗಳನ್ನು ಒದಗಿಸುವ ಕಾಮಗಾರಿ	500.00	441.00
22		ಚಿತ್ರದುರ್ಗ ನಗರದ ಚಂದವಳ್ಳಿಯ ತೋಟ ಪ್ರದೇಶದಲ್ಲಿ ಪಾರ್ಕಿಂಗ್ ಸೌಲಭ್ಯ, ವಿಸಿಟರ್ ಸೆಂಟರ್, ಸೈನೇಜಸ್, ಬಾಟರಿ ಚಾಲಿತ ವಾಹನಗಳು, ಎಲೆಕ್ಟ್ರಿಕಲ್ ಫೆಸಿಲಿಟೀಸ್‌ಗಳ ನಿರ್ಮಾಣ ಕಾಮಗಾರಿ	332.00	200.00
23	ಹೊಸದುರ್ಗ	ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕು, ಶ್ರೀ ಮತ್ತೋಡು ಬನಶಂಕರಿದೇವಿ ದೇವಸ್ಥಾನದ ಆವರಣದಲ್ಲಿ ಶುದ್ಧ ಕುಡಿಯುವ ನೀರು, ರಸ್ತೆ ಅಭಿವೃದ್ಧಿ ಹಾಗೂ ಶೌಚಾಲಯಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.	25.00	15.00

2019–20ನೇ ಸಾಲಿನಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ (ಮೂಲಭೂತ ಸೌಕರ್ಯ) ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು				
24	ಹಿರಿಯೂರು	ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಕೂನಿಕೆರೆ ಗ್ರಾಮದ ಶ್ರೀ ನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿ ಸಮುದಾಯ ಭವನ, ಕಾಂಕ್ರೀಟ್ ಮತ್ತು ಕುಡಿಯುವ ನೀರಿನ ಸೌಲಭ್ಯಕ್ಕೆ ಅನುದಾನ ಮತ್ತು ನಿರ್ಮಾಣ	50.00	16.00
25		ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ವಾಣಿವಿಲಾಸ ಸಾಗರ ಜಲಾಶಯ ಮುಂಭಾಗ ಪಾರ್ಕ್ ಅಭಿವೃದ್ಧಿ ಪಡಿಸಲು ವಿವಿಧ 10 ಕಾಮಗಾರಿಗಳ ಮಂಜೂರಾತಿ.	100.00	33.00
26	ಹೊಸದುರ್ಗ	ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನ ಅನಿವಾಳ ಶ್ರೀ ಬೇವಿನಹಳ್ಳಿ ಕರಿಯಮ್ಮ ದೇವಿ ದೇವಸ್ಥಾನ (ನಾಗ್ತಿಹಳ್ಳಿ ಬೆಟ್ಟದ) ಹತ್ತಿರ ಪ್ರವಾಸಿಗರ ಅನುಕೂಲಕ್ಕಾಗಿ ಭವನ ನಿರ್ಮಾಣ	50.00	16.00
27		ಹೊಸದುರ್ಗ ತಾಲ್ಲೂಕಿನ ಅನಿವಾಳ ಶ್ರೀ ಮಹಾರುದ್ರ ಸ್ವಾಮಿ ದೇವಸ್ಥಾನದ ಬಳಿ ಮೂಲಭೂತ ಸೌಕರ್ಯ ಅಭಿವೃದ್ಧಿ.	50.00	43.00
28	ಚಿತ್ರದುರ್ಗ	ಚಿತ್ರದುರ್ಗ ಕೋಟೆ ಪ್ರದೇಶಭಿವೃದ್ಧಿ ಯೋಜನೆಯಡಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವುದು.	815.00	143.00
	ಚಳ್ಳಕೆರೆ	2019–20ನೇ ಸಾಲಿನಲ್ಲಿ ಯಾವುದೇ ಕಾಮಗಾರಿ ಮಂಜೂರಾಗಿರುವುದಿಲ್ಲ		
	ಹೊಳಲ್ಕೆರೆ			
	ಮೊಳಕಾಲ್ಮೂರು			
ಒಟ್ಟು			2932.00	1488.25

ನಿರ್ದೇಶಕರ ಪರವಾಗಿ
ಪ್ರವಾಸೋದ್ಯಮ ಇಲಾಖೆ
ಕರ್ನಾಟಕ ಸರ್ಕಾರ, ಬೆಂಗಳೂರು.

ವಿ.ಸ.ಪ್ರಶ್ನೆ ಸಂಖ್ಯೆ: 2037ಕ್ಕೆ
ಅನುಬಂಧ-2

ಚಳ್ಳಕೆರೆ ತಾಲ್ಲೂಕಿಗೆ ಕಳೆದ ಮೂರು ವರ್ಷಗಳಲ್ಲಿ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಕೈಗೆತ್ತಿಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ವಿವರ.

(ರೂ.ಲಕ್ಷಗಳಲ್ಲಿ)

ಕ್ರ.ಸಂ	ಕಾಮಗಾರಿಗಳ ಹೆಸರು	ಅನುಷ್ಠಾನ ಸಂಸ್ಥೆ	ಅಂದಾಜು ಮೊತ್ತ	ಬಿಡುಗಡೆ ಮಾಡಿರುವ ಅನುದಾನ	ಕಾಮಗಾರಿಯ ಹಂತ
2017-18ನೇ ಸಾಲಿನಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ (ಮೂಲಭೂತ ಸೌಕರ್ಯ) ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು					
1	ಚಳ್ಳಕೆರೆ ತಾಲ್ಲೂಕಿನ ಕಾವಲುಚೌಡಮ್ಮ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ.	ಕೆ.ಆರ್.ಐ.ಡಿ.ಎಲ್. ಚಳ್ಳಕೆರೆ	75.00	60.00	ದಿನಾಂಕ 10.07.2019 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ನೆಲ ಮಹಡಿ ಗಿಲಾವು ಕೆಲಸ ಪ್ರಗತಿಯಲ್ಲಿದೆ.
2	ಚಳ್ಳಕೆರೆ ತಾಲ್ಲೂಕು, ಕುದಾಪುರ ಗ್ರಾಮದಲ್ಲಿ ಶ್ರೀ ಚಿಂತ್ರಗುಟ್ಟಲ ಭೈರವ ಲಿಂಗೇಶ್ವರ (ಬೋರೇದೇವರು) ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ.	ಕೆ.ಆರ್.ಐ.ಡಿ.ಎಲ್. ಚಳ್ಳಕೆರೆ	50.00	35.00	ಬೇಸ್ಮೆಂಟ್ ಪ್ರಗತಿಯಲ್ಲಿದೆ
3	ಚಳ್ಳಕೆರೆ ತಾಲ್ಲೂಕಿನ ಕಡಬನಕಟ್ಟೆ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ಯಾತ್ರಿನಿವಾಸ ನಿರ್ಮಾಣ (ಹೆಚ್ಚುವರಿ)	ಕೆ.ಆರ್.ಐ.ಡಿ.ಎಲ್. ಚಳ್ಳಕೆರೆ	70.00	30.00	ಛಾವಣಿ ಹಂತ ಪ್ರಗತಿಯಲ್ಲಿದೆ

2018–19ನೇ ಸಾಲಿನಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ (ಮೂಲಭೂತ ಸೌಕರ್ಯ) ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು

4	ಚಳ್ಳಕೆರೆ ತಾಲ್ಲೂಕು, ನಾಯಕನಹಟ್ಟಿ ಶ್ರೀ ತಿಪ್ಪೇರುದ್ರಸ್ವಾಮಿ ದೇವಾಲಯ ಪ್ರದೇಶದಲ್ಲಿ ಹೈಟೆಕ್ ಶೌಚಾಲಯ ಹಾಗೂ ಇತರೆ ಮೂಲಸೌಲಭ್ಯಗಳ ಅಭಿವೃದ್ಧಿ.	ಕೆ.ಆರ್.ಐ.ಡಿ.ಎಲ್. ಚಳ್ಳಕೆರೆ	50.00	25.00	ದಿನಾಂಕ.22.09.2020 ರಂದು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಚಿತ್ರದುರ್ಗರವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನ ಸಭೆಯಲ್ಲಿ ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಪ್ರಸಕ್ತ ಲಭ್ಯವಿರುವ ಮಾದರಿ ನಕ್ಷೆಯಂತೆ ಒಂದು ಶೌಚಾಲಯವನ್ನು ಹಾಗೂ ಉಳಿದ ಅನುದಾನದಲ್ಲಿ ಇತರೆ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಿ, ಈ ಸಂಬಂದ ಅಂದಾಜುಪಟ್ಟಿ ಪಡೆಯಲು ಸೂಚಿಸಿರುತ್ತಾರೆ. ದಿನಾಂಕ.05.03.2021ರಂದು ಅನುಷ್ಠಾನಾಧಿಕಾರಿಗಳು ಅಂದಾಜು ಪಟ್ಟಿ ಸಲ್ಲಿಸಿದ್ದು ಶೀಘ್ರವೇ ಆಡಳಿತಾತ್ಮಕ ಅನುಮೋದನೆ ನೀಡಲಾಗುವುದು.
5	ಬಂಡವಾಳ ವೆಚ್ಚಗಳ ಯೋಜನೆಯಡಿ / ಚಿತ್ರದುರ್ಗ ತಾಲ್ಲೂಕಿನ ಕಡಬನಕಟ್ಟೆ ಗ್ರಾಮದ ಈಶ್ವರ ದೇವಸ್ಥಾನದ ಹತ್ತಿರ ಮೂಲಭೂತ ಸೌಕರ್ಯ ಕಲ್ಪಿಸುವ ಕಾಮಗಾರಿ (ಚಿತ್ರದುರ್ಗ ತಾಲ್ಲೂಕು, ಚಳ್ಳಕೆರೆ ವಿಧಾನಸಭಾ ಕ್ಷೇತ್ರ)	ನಿರ್ಮಿತಿ ಕೇಂದ್ರ	50.00	15.00	ರೂಫ್ ಲೆವೆಲ್ ಪ್ರಗತಿಯಲ್ಲಿದೆ.
2019–20ನೇ ಸಾಲಿನಲ್ಲಿ ಚಳ್ಳಕೆರೆ ತಾಲ್ಲೂಕಿಗೆ ಯಾವುದೇ ಕಾಮಗಾರಿ ಮಂಜೂರಾಗಿರುವುದಿಲ್ಲ.					
	ಒಟ್ಟು	:	295.00	165.00	

ನಿರ್ದೇಶಕರ ಪರವಾಗಿ
ಪ್ರವಾಸೋದ್ಯಮ ಇಲಾಖೆ
ಕರ್ನಾಟಕ ಸರ್ಕಾರ, ಬೆಂಗಳೂರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2784
ಮಾನ್ಯ ಸದಸ್ಯರ ಹೆಸರು	:	ಡಾ. ಅವಿನಾಶ್ ಉಮೇಶ್ ಜಾಧವ್ (ಚಿಂಚೋಳಿ)
ಉತ್ತರಿಸುವ ದಿನಾಂಕ	:	18.03.2021
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ, ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕಲಬುರಗಿ ಜಿಲ್ಲೆಯ ಚಿಂಚೋಳಿ ಮತಕ್ಷೇತ್ರ ವ್ಯಾಪ್ತಿಯಲ್ಲಿರುವ ಪ್ರವಾಸಿ ತಾಣಗಳ ಸಂಖ್ಯೆ ಎಷ್ಟು;	ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ರಡಿ ಕಲಬುರಗಿ ವಿಭಾಗದ ಚಿಂಚೋಳಿ ತಾಲ್ಲೂಕಿನಲ್ಲಿ ಗುರುತಿಸಿರುವ ಪ್ರವಾಸಿ ತಾಣಗಳ ವಿವರ ಈ ಕೆಳಕಂಡಂತಿದೆ.
ಆ)	ಇವುಗಳ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಯೋಜನೆಗಳು ಯಾವುವು;	ಚಿಂಚೋಳಿ ತಾಲ್ಲೂಕಿನಲ್ಲಿ ಗುರುತಿಸಿರುವ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಕೈಗೊಂಡಿರುವ ಯೋಜನೆಗಳ ವಿವರ ಈ ಕೆಳಗಿನಂತಿವೆ:

ಕ್ರ. ಸಂ	ತಾಲ್ಲೂಕು	ಪ್ರವಾಸಿ ತಾಣದ ಹೆಸರು	ಪ್ರವಾಸಿ ತಾಣಗಳ ಸಂಖ್ಯೆ
1	ಚಿಂಚೋಳಿ	ಚಂದ್ರಂಪಳ್ಳಿ, ಅಣೆಕಟ್ಟು, ಎತ್ತಿ ಪೋತ ಜಲಪಾತ, ಪಂಚಲಿಂಗೇಶ್ವರ ಬುಗ್ಗಿ, ಗೊಟ್ಟಂಗೊಟ್ಟ, ಮೋಘಾ	5

(ರೂ. ಲಕ್ಷಗಳಲ್ಲಿ)

ಕ್ರ. ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಈವರೆಗೂ ಬಿಡುಗಡೆ ಮಾಡಿರುವ ಮೊತ್ತ
1	ಚಿಂಚೋಳಿ ತಾಲ್ಲೂಕಿನ ಸೂಗೂರು ಕೆ ಗ್ರಾಮದಲ್ಲಿರುವ ಶ್ರೀ ರುದ್ರಮುನೇಶ್ವರ ದೇವಸ್ಥಾನದ ಹತ್ತಿರ ಯಾತ್ರಿ ನಿವಾಸ ನಿರ್ಮಾಣ.	25.00	10.00
2	ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಮೋಘಾ ಗ್ರಾಮದ ಶ್ರೀ ರಾಮಲಿಂಗೇಶ್ವರ (ಸ್ವಯಂಭೂ ರಾಮನಾಥ) ದೇವಸ್ಥಾನಕ್ಕೆ ಯಾತ್ರಿ ನಿವಾಸ, ರಸ್ತೆ, ಕುಡಿಯುವ ನೀರು, ಭಕ್ತಾದಿಗಳಿಗೆ ಹೊರಗಡೆ ಆಸನ ಹಾಗೂ ಶೌಚಾಲಯ ನಿರ್ಮಾಣ.	25.00	10.00
3	ಕಲಬುರಗಿ ಜಿಲ್ಲೆ, ಚಿಂಚೋಳಿ ತಾಲ್ಲೂಕಿನ ಕೊರವಿ ಶ್ರೀರಾಮನಗರ ತಾಂಡಾದಲ್ಲಿ ಶ್ರೀ ಲಕ್ಷ್ಮೀ ದೇವಸ್ಥಾನದ ಬಳಿ ಯಾತ್ರಿ ನಿವಾಸ ಹಾಗೂ ಮೂಲಭೂತ ಸೌಲಭ್ಯ ನಿರ್ಮಾಣ.	100.00	30.00
4	ಕಲಬುರಗಿ ಜಿಲ್ಲೆಯ ಚಿಂಚೋಳಿ ವನ್ಯಜೀವಿ ಅಭಯಾರಣ್ಯದಲ್ಲಿ ಪರಿಸರ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದು	199.78	148.75

ಇ)	ಈ ಯೋಜನೆಗಳ ಅನುಷ್ಠಾನ ವಿಳಂಬವಾಗಲು ಕಾರಣಗಳೇನು;	ಚಿಂಚೋಳಿ ತಾಲ್ಲೂಕಿನ ಸೂಗೂರು ಕೆ ಗ್ರಾಮದಲ್ಲಿರುವ ಶ್ರೀ ರುದ್ರಮುನೇಶ್ವರ ದೇವಸ್ಥಾನದ ಹತ್ತಿರ ಯಾತ್ರಿ ನಿವಾಸ ನಿರ್ಮಾಣ ಹಾಗೂ ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಮೋಘಾ ಗ್ರಾಮದ ಶ್ರೀ ರಾಮಲಿಂಗೇಶ್ವರ (ಸ್ವಯಂಭೊ ರಾಮನಾಥ) ದೇವಸ್ಥಾನಕ್ಕೆ ಯಾತ್ರಿ ನಿವಾಸ, ರಸ್ತೆ, ಕುಡಿಯುವ ನೀರು, ಭಕ್ತಾದಿಗಳಿಗೆ ಹೊರಗಡೆ ಆಸನ ಹಾಗೂ ಶೌಚಾಲಯ ನಿರ್ಮಾಣ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿರುತ್ತವೆ.
ಈ)	ಯೋಜನೆಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು?	ಕಲಬುರಗಿ ಜಿಲ್ಲೆ, ಚಿಂಚೋಳಿ ತಾಲ್ಲೂಕಿನ ಕೊರವಿ ಶ್ರೀರಾಮನಗರ ತಾಂಡಾದಲ್ಲಿ ಶ್ರೀ ಲಕ್ಷ್ಮೀ ದೇವಸ್ಥಾನದ ಬಳಿ ರೂ.100.00 ಲಕ್ಷಗಳ ಅಂದಾಜು ವೆಚ್ಚದ ಯಾತ್ರಿ ನಿವಾಸ ಹಾಗೂ ಮೂಲಭೂತ ಸೌಲಭ್ಯ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಮಾನ್ಯ ಶಾಸಕರು, ಚಿಂಚೋಳಿ ವಿಧಾನ ಸಭಾ ಮತಕ್ಷೇತ್ರ ಇವರು ಪತ್ರ ದಿನಾಂಕ:10.06.2020ರಲ್ಲಿ ಸದರಿ ಕಾಮಗಾರಿಯ ಬದಲಾಗಿ ಚಿಂಚೋಳಿ ಮತಕ್ಷೇತ್ರದ ಕಾಳಗಿ ತಾಲ್ಲೂಕಿನ ಸೂಗರು ಗ್ರಾಮದ ಶ್ರೀ ವೆಂಕಟೇಶ್ವರ ದೇವಸ್ಥಾನದ ಹತ್ತಿರ ಮೂಲಭೂತ ಸೌಲಭ್ಯ ನಿರ್ಮಾಣ ಕಾಮಗಾರಿಯನ್ನು ರೂ.50.00 ಲಕ್ಷಗಳಲ್ಲಿ ಹಾಗೂ ಚಿಂಚೋಳಿ ಮತಕ್ಷೇತ್ರದ ಕಾಳಗಿ ತಾಲ್ಲೂಕಿನ ಕಾಳಗಿ ಗ್ರಾಮದ ಶ್ರೀ ಕಾಳೇಶ್ವರ ದೇವಸ್ಥಾನದ ಹತ್ತಿರ ಮೂಲಭೂತ ಸೌಲಭ್ಯ ನಿರ್ಮಾಣ ಕಾಮಗಾರಿಯನ್ನು ರೂ.50.00 ಲಕ್ಷಗಳಲ್ಲಿ ಕೈಗೊಳ್ಳಲು ಅನುಮೋದನೆಯನ್ನು ನೀಡುವಂತೆ ಪ್ರವಾಸೋದ್ಯಮ ನಿರ್ದೇಶಕರನ್ನು ಕೋರಿದ್ದು, ನಿರ್ದೇಶಕರಿಂದ ಪ್ರಸ್ತಾವನೆ ಸ್ವೀಕೃತವಾದ ನಂತರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. ಆದ್ದರಿಂದ ಕಾಮಗಾರಿಯನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬವಾಗಿರುತ್ತದೆ. ಕಲಬುರಗಿ ಜಿಲ್ಲೆಯ ಚಿಂಚೋಳಿ ವನ್ಯಜೀವಿ ಅಭಯಾರಣ್ಯದಲ್ಲಿ ಪರಿಸರ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿಯ ಅಂದಾಜು ಪಟ್ಟಿಗೆ ಹಲವು ಮಾರ್ಪಾಡಿನೊಂದಿಗೆ ತಾಂತ್ರಿಕ ಮಂಜೂರಾತಿ ಪಡೆಯುವಲ್ಲಿ ಅನುಷ್ಠಾನ ಸಂಸ್ಥೆಗೆ ಕಾಲಾವಕಾಶ ತಗುಲಿದ ಹಿನ್ನೆಲೆಯಲ್ಲಿ ಕಾಮಗಾರಿಯನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬವಾಗಿರುತ್ತದೆ.

ಕಡತ ಸಂಖ್ಯೆ: ಟಿಓಆರ್ 53 ಟಿಡಿವಿ 2021

(ಸಿ. ಪಿ. ಯೋಗೇಶ್ವರ)
ಪ್ರವಾಸೋದ್ಯಮ, ಪರಿಸರ ಮತ್ತು
ಜೀವಿಶಾಸ್ತ್ರ, ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3038
ಸದಸ್ಯರ ಹೆಸರು	:	ಶ್ರೀ ಶ್ರೀನಿವಾಸ್ ಎಂ. (ಮಂಡ್ಯ)
ಉತ್ತರಿಸಬೇಕಾದ ದಿನಾಂಕ	:	18.03.2021
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರ.ಸ	ಪ್ರಶ್ನೆ	ಉತ್ತರ
ಅ)	ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ (ಆರ್.ಎಂ.ಎಸ್.ಎ) ಯೋಜನೆಯಡಿಯಲ್ಲಿ ಸರ್ಕಾರಿ ಶಾಲೆಗಳ ಕಟ್ಟಡಗಳ ನಿರ್ಮಾಣ ಕಾಮಗಾರಿಯು ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಇವುಗಳ ನಿರ್ಮಾಣದ ಗುತ್ತಿಗೆದಾರರು ಯಾವುದೇ ಸ್ಥಳೀಯ ಆಡಳಿತ ನಿಯಂತ್ರಣಕ್ಕೆ ಸಿಗದೆ ಸಂಪರ್ಕಕ್ಕೂ ಬಾರದೆ ಕಟ್ಟಡಗಳನ್ನು ಇನ್ನೂ ಶಾಲೆಗೆ ಹಸ್ತಾಂತರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಮಂಡ್ಯ ಜಿಲ್ಲೆಯಲ್ಲಿ ಒಟ್ಟು 83 ಕಾಮಗಾರಿಗಳನ್ನು ಕೈಗೊಂಡಿದ್ದು ಇವುಗಳಲ್ಲಿ 63 ಕಾಮಗಾರಿಗಳು ಪೂರ್ಣಗೊಂಡಿದ್ದು 62 ಕಾಮಗಾರಿಗಳನ್ನು ಸಂಬಂಧಿಸಿದ ಶಾಲೆಗಳಿಗೆ ಹಸ್ತಾಂತರಿಸಲಾಗಿರುತ್ತದೆ. ಬಾಕಿ 01 ಕಾಮಗಾರಿಯನ್ನು ಹಸ್ತಾಂತರಿಸಬೇಕಾಗಿದೆ.
ಇ)	ಸದರಿ ಕಟ್ಟಡ ಕಾಮಗಾರಿಗಳು ತೀರಾ ಕಳಪೆ ಮಟ್ಟದ್ದಾಗಿದ್ದರೂ ಸಹ ಈವರೆಗೂ ಸರ್ಕಾರ ಕ್ರಮ ವಹಿಸದಿರಲು ಕಾರಣವೇನು;	ಮೂರನೇ ವ್ಯಕ್ತಿಯ ಗುಣಮಟ್ಟದ ಖಾತ್ರಿ ಹಾಗೂ ತಾಂತ್ರಿಕ ಪರಿಶೀಲನೆ ವರದಿ ಆಧಾರದ ಮೇಲೆ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಸರ್ಕಾರಿ ಪ್ರೌಢಶಾಲೆ ಎಲೆಚಾಕನಹಳ್ಳಿ ಕಾಮಗಾರಿಯಲ್ಲಿ ಕಳಪೆ ಗುಣಮಟ್ಟವಿರುವುದು ಕಂಡುಬಂದಿದ್ದು, ಕಟ್ಟಡದಲ್ಲಿ ಕಂಡುಬಂದ ಕಳಪೆ ಭಾಗಗಳನ್ನು ಮನರ್ ನಿರ್ಮಿಸಲು ಸಂಬಂಧಿಸಿದ ಗುತ್ತಿಗೆಧಾರರಿಗೆ ಸೂಚಿಸಲಾಗಿದೆ.
ಈ)	ಮಂಡ್ಯ ಜಿಲ್ಲೆಯಲ್ಲಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ (ಆರ್.ಎಂ.ಎಸ್.ಎ) ಯೋಜನೆಯಡಿಯಲ್ಲಿ ಕಟ್ಟಡ ಕಾಮಗಾರಿಗಳು ಮಂಜೂರಾಗಿ ಪೂರ್ಣಗೊಂಡಿರುವ ಮತ್ತು ಅಪೂರ್ಣಗೊಂಡಿರುವ ಶಾಲೆ ಕಟ್ಟಡಗಳ ಸಂಪೂರ್ಣ ವಿವರ ನೀಡುವುದು? (ವಿಧಾನಸಭಾ ಕ್ಷೇತ್ರವಾರು)	

ಕ್ರ. ಸಂ	ವಿಧಾನ ಸಭಾ ಕ್ಷೇತ್ರ	ಒಟ್ಟು ಕಾಮಗಾರಿಗಳು	ಪೂರ್ಣಗೊಂಡಿರುವ ಕಾಮಗಾರಿಗಳು	ಪ್ರಗತಿಯಲ್ಲಿರುವ ಕಾಮಗಾರಿಗಳು	ಪ್ರಗತಿಯಲ್ಲಿಲ್ಲದ ಕಾಮಗಾರಿಗಳು
1	ಕೃಷ್ಣರಾಜಪೇಟೆ	11	11	–	–
2	ಮದ್ದೂರು	13	12	–	01
3	ಮಳವಳ್ಳಿ	20	20	–	–

4	ಮಂಡ್ಯ	13	04	04	05
5	ನಾಗಮಂಗಲ	10	08	01	01
6	ಮೇಲುಕೋಟೆ	09	02	–	07
7	ಶ್ರೀರಂಗಪಟ್ಟಣ	07	06	–	01
	ಒಟ್ಟು	**83**	**63**	**05**	**15**

ಕಾಮಗಾರಿಗಳ ಪ್ರಗತಿಯ ವಿವಿಧ ಹಂತಗಳನ್ನು ಅನುಬಂಧ ದಲ್ಲಿ ಒದಗಿಸಲಾಗಿದೆ

ಇಪಿ: 72 ಯೋಸಕ 2021

(ಎಸ್.ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅನುಬಂಧ

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ಕೈಗೊಂಡ ಕಾಮಗಾರಿಗಳ ವಿಧಾನ ಸಭಾ ಕ್ಷೇತ್ರವಾರು ವಿವರಗಳು

ಕ್ರ ಸಂ.	ಕಾಮಗಾರಿಯ ಹೆಸರು	ಮಾದರಿ	ಕಾಮಗಾರಿಯ ಹಂತ
I	ಕೆ.ಆರ್ ಪೇಟೆ		
1	ಸರ್ಕಾರಿ ಪ್ರೌಢಶಾಲೆ ಬಳ್ಳೇಕೆರೆ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
2	ಸ.ಪ.ಪೂ ಕಾಲೇಜು ವಿಠಲಾಪುರ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
3	ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಕೆ.ಆರ್.ಪೇಟೆ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
4	ಸ.ಪ.ಪೂ ಕಾಲೇಜು ಅಘಾಲಯ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
5	ಸ.ಪ.ಪೂ ಕಾಲೇಜು ಬಲ್ಲೇನಹಳ್ಳಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
6	ಸರ್ಕಾರಿ ಪ್ರೌಢಶಾಲೆ ಬಿಲ್ಲೇನಹಳ್ಳಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
7	ಸ.ಪ.ಪೂ ಕಾಲೇಜು ಬೂಕನಕೆರೆ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
8	ಸರ್ಕಾರಿ ಪ್ರೌಢಶಾಲೆ ಮಡುವಿನಕೋಡಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
9	ಸ.ಪ.ಪೂ ಕಾಲೇಜು ಶೀಳನೆರೆ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
10	ಸ.ಪ.ಪೂ ಕಾಲೇಜು ಸಿಂಧಘಟ್ಟ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
11	ಸರ್ಕಾರಿ ಪ್ರೌಢಶಾಲೆ ವಳಗೆರೆಮೆಣಸ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
II.	ಮದ್ದೂರು		
1	ಸರ್ಕಾರಿ ಪ್ರೌಢಶಾಲೆ ಗೆಜ್ಜಲಗೆರೆ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
2	ಸರ್ಕಾರಿ ಪ್ರೌಢಶಾಲೆ ಮಡೇನಹಳ್ಳಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
3	ಸ.ಪ.ಪೂ ಕಾಲೇಜು ಚಂದೂಪುರ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
4	ಸರ್ಕಾರಿ ಪ್ರೌಢಶಾಲೆ ಆತಗೂರು (ವಳಗೆರೆದೊಡ್ಡಿ)	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
5	ಸ.ಪ.ಪೂ ಕಾಲೇಜು ಬೆಸಗರಹಳ್ಳಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
6	ಸರ್ಕಾರಿ ಪ್ರೌಢಶಾಲೆ ಬಿದರಹೊಸಹಳ್ಳಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
7	ಸ.ಪ.ಪೂ ಕಾಲೇಜು ಚಿಕ್ಕಂಕನಹಳ್ಳಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
8	ಸರ್ಕಾರಿ ಪ್ರೌಢಶಾಲೆ ಚಿಕ್ಕರಸಿನಕೆರೆ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
9	ಸರ್ಕಾರಿ ಪ್ರೌಢಶಾಲೆ ಹೂತಗೆರೆ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
10	ಸ.ಪ.ಪೂ ಕಾಲೇಜು ಕೆಸ್ತೂರು	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
11	ಸರ್ಕಾರಿ ಪ್ರೌಢಶಾಲೆ ಕ್ಯಾತಘಟ್ಟ	ಬಲವರ್ಧನೆ	ಕಾಮಗಾರಿಯು ಪ್ಲಿಂತ್ ಹಂತದಲ್ಲಿ ಸ್ಥಗಿತಗೊಂಡಿರುತ್ತದೆ.
12	ಸರ್ಕಾರಿ ಪ್ರೌಢಶಾಲೆ ನವಿಲೆ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
13	ಸರ್ಕಾರಿ ಪ್ರೌಢಶಾಲೆ ತಗ್ಗಹಳ್ಳಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
III.	ಮಳವಳ್ಳಿ		
1	ಸರ್ಕಾರಿ ಪ್ರೌಢಶಾಲೆ ಬ್ಯಾಡರಹಳ್ಳಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
2	ಸರ್ಕಾರಿ ಪ್ರೌಢಶಾಲೆ ದಳವಾಯಿ ಕೊಡಿಹಳ್ಳಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
3	ಸರ್ಕಾರಿ ಪ್ರೌಢಶಾಲೆ ಹಾಡ್ಲಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
4	ಸರ್ಕಾರಿ ಪ್ರೌಢಶಾಲೆ ಕುಂದೂರು	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
5	ಸರ್ಕಾರಿ ಪ್ರೌಢಶಾಲೆ ಚೊಟ್ಟನಹಳ್ಳಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
6	ಸ.ಪ.ಪೂ ಕಾಲೇಜು ಹಲಗೂರು	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
7	ಸರ್ಕಾರಿ ಪ್ರೌಢಶಾಲೆ ಹೊಸಹಳ್ಳಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
8	ಸ.ಪ.ಪೂ ಕಾಲೇಜು ಕಿರುಗಾವಲು	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
9	ಸರ್ಕಾರಿ ಪ್ರೌಢಶಾಲೆ ಮಾರಗೌಡನಹಳ್ಳಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
10	ಸರ್ಕಾರಿ ಪ್ರೌಢಶಾಲೆ ನಿಟ್ಟೂರು	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
11	ಸರ್ಕಾರಿ ಪ್ರೌಢಶಾಲೆ ರಾಗಿಬೊಮ್ಮನಹಳ್ಳಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
12	ಸರ್ಕಾರಿ ಪ್ರೌಢಶಾಲೆ ಸುಜ್ಜಲೂರು	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
13	ಸ.ಪ.ಪೂ ಕಾಲೇಜು ತಳಗವಾಡಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
14	ಸರ್ಕಾರಿ ಪ್ರೌಢಶಾಲೆ ಯತ್ತಂಬಾಡಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
15	ಸ.ಪ.ಪೂ ಕಾಲೇಜು ಮಳವಳ್ಳಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
16	ಸರ್ಕಾರಿ ಪ್ರೌಢಶಾಲೆ ಬಾಲಕಿ ಮಳವಳ್ಳಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
17	ಸರ್ಕಾರಿ ಉನ್ನತಿಕರಿಸಿದ ಪ್ರೌಢಶಾಲೆ ಧನಗೂರು	ಉನ್ನತೀಕರಣ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
18	ಸರ್ಕಾರಿ ಉನ್ನತಿಕರಿಸಿದ ಪ್ರೌಢಶಾಲೆ ಬೆಂಡರವಾಡಿ	ಉನ್ನತೀಕರಣ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
19	ಆದರ್ಶ ವಿದ್ಯಾಲಯ ಮಳವಳ್ಳಿ	ಆದರ್ಶ ವಿದ್ಯಾಲಯ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
20	ಹೆಣ್ಣು ಮಕ್ಕಳ ವಸತಿ ನಿಲಯ ದಳವಾಯಿ ಕೋಡಿಹಳ್ಳಿ	ಹೆಣ್ಣು ಮಕ್ಕಳ ವಸತಿ ನಿಲಯ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
IV.	ಮಂಡ್ಯ		

ಕ್ರ. ಸಂ.	ಕಾಮಗಾರಿಯ ಹೆಸರು	ಮಾದರಿ	ಕಾಮಗಾರಿಯ ಹಂತ
1	ಸ.ಪ.ಪೂ ಕಾಲೇಜು ಬಸರಾಳು	ಬಲವರ್ಧನೆ	ಕಾಮಗಾರಿಯು ಮುಕ್ತಾಯದ ಹಂತದಲ್ಲಿದೆ
2	ಸರ್ಕಾರಿ ಪ್ರೌಢಶಾಲೆ ಬಿ.ಹೊಸೂರು	ಬಲವರ್ಧನೆ	ಕಾಮಗಾರಿಯು ಮುಕ್ತಾಯಗೊಂಡಿದ್ದು ಹಸ್ತಾಂತರಿಸಿರುವುದಿಲ್ಲ
3	ಸರ್ಕಾರಿ ಪ್ರೌಢಶಾಲೆ ಮುದಗಂದೂರು	ಬಲವರ್ಧನೆ	ನೆಲಮಾಳಿಗೆ ಛಾವಣಿ ಹಂತದಲ್ಲಿದ್ದು, ಕಾಮಗಾರಿ ಸ್ಥಗಿತಗೊಂಡಿರುತ್ತದೆ
4	ಸರ್ಕಾರಿ ಪ್ರೌಢಶಾಲೆ ಬೇಲೂರು	ಬಲವರ್ಧನೆ	ನೆಲಮಾಳಿಗೆ ಲಿಂಟೆಲ್ ಹಂತದಲ್ಲಿದ್ದು, ಕಾಮಗಾರಿ ಸ್ಥಗಿತಗೊಂಡಿರುತ್ತದೆ
5	ಸರ್ಕಾರಿ ಪ್ರೌಢಶಾಲೆ ಹಳೇಬೂದನೂರು	ಬಲವರ್ಧನೆ	ಕಾಮಗಾರಿಯು ಮುಕ್ತಾಯದ ಹಂತದಲ್ಲಿದೆ
6	ಸರ್ಕಾರಿ ಪ್ರೌಢಶಾಲೆ ದೊಡ್ಡಗರುಡನಹಳ್ಳಿ	ಬಲವರ್ಧನೆ	ಕಾಮಗಾರಿಯು ಮುಕ್ತಾಯದ ಹಂತದಲ್ಲಿದೆ
7	ಸರ್ಕಾರಿ ಪ್ರೌಢಶಾಲೆ ದೊಡ್ಡಕೊತ್ತಗೆರೆ	ಬಲವರ್ಧನೆ	ನೆಲಮಾಳಿಗೆ ಛಾವಣಿ ಹಂತದಲ್ಲಿದ್ದು, ಕಾಮಗಾರಿ ಸ್ಥಗಿತಗೊಂಡಿರುತ್ತದೆ
8	ಸರ್ಕಾರಿ ಪ್ರೌಢಶಾಲೆ ಚಿಕ್ಕಮಂಡ್ಯ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
9	ಸರ್ಕಾರಿ ಪ್ರೌಢಶಾಲೆ ಸೂನಗಹಳ್ಳಿ	ಬಲವರ್ಧನೆ	ಕಾಮಗಾರಿಯು ಮುಕ್ತಾಯದ ಹಂತದಲ್ಲಿದೆ
10	ಸರ್ಕಾರಿ ಪ್ರೌಢಶಾಲೆ ಉಮ್ಮಡಹಳ್ಳಿ	ಬಲವರ್ಧನೆ	ಕಾಮಗಾರಿಯು ಪ್ಲಿಂತ್ ಹಂತದಲ್ಲಿದ್ದು, ಕಾಮಗಾರಿ ಸ್ಥಗಿತಗೊಂಡಿರುತ್ತದೆ
11	ಸರ್ಕಾರಿ ಪ್ರೌಢಶಾಲೆ ಶಂಕರಪುರ, ಮಂಡ್ಯ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
12	ಸ.ಪ.ಪೂ ಕಾಲೇಜು ಎಕ್ಸ್-ಮುನ್ಸಿಪಲ್	ಬಲವರ್ಧನೆ	ನೆಲಮಾಳಿಗೆ ಛಾವಣಿ ಹಂತದಲ್ಲಿದ್ದು, ಕಾಮಗಾರಿ ಸ್ಥಗಿತಗೊಂಡಿರುತ್ತದೆ
13	ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಹಾಲಹಳ್ಳಿ ಬಡಾವಣೆ, ಮಂಡ್ಯ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
V.	ನಾಗಮಂಗಲ		
1	ಸರ್ಕಾರಿ ಪ್ರೌಢಶಾಲೆ ಆರ್.ಡಿ.ಎಸ್ ಬೆಳ್ಳೂರು	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
2	ಸ.ಪ.ಪೂ ಕಾಲೇಜು ಬಿಂಡಿಗನವಿಲೆ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
3	ಸರ್ಕಾರಿ ಪ್ರೌಢಶಾಲೆ ಕಾಂತಪುರ	ಬಲವರ್ಧನೆ	ಕಾಮಗಾರಿಯು ಪ್ಲಿಂತ್ ಹಂತದಲ್ಲಿದ್ದು, ಕಾಮಗಾರಿ ಸ್ಥಗಿತಗೊಂಡಿರುತ್ತದೆ
4	ಸರ್ಕಾರಿ ಪ್ರೌಢಶಾಲೆ ಕೂಚಹಳ್ಳಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
5	ಸರ್ಕಾರಿ ಪ್ರೌಢಶಾಲೆ ಶೆಟ್ಟಿಹಳ್ಳಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
6	ಸರ್ಕಾರಿ ಪ್ರೌಢಶಾಲೆ ಅಳೀಸಂದ್ರ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
7	ಸ.ಪ.ಪೂ ಕಾಲೇಜು ಬೊಗಾದಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
8	ಸ.ಪ.ಪೂ ಕಾಲೇಜು ಚೀಣ್ಯ	ಬಲವರ್ಧನೆ	ಪ್ಲಾಸ್ಟ್ರಿಂಗ್ ಹಂತದಲ್ಲಿ ಸ್ಥಗಿತಗೊಂಡಿರುತ್ತದೆ
9	ಸರ್ಕಾರಿ ಪ್ರೌಢಶಾಲೆ ಕರಡಹಳ್ಳಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
10	ಸ.ಪ.ಪೂ ಕಾಲೇಜು ನಾಗಮಂಗಲ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
VI.	ಮೇಲುಕೋಟೆ		
1	ಸರ್ಕಾರಿ ಪ್ರೌಢಶಾಲೆ ಅರಳಕುಪ್ಪೆ	ಬಲವರ್ಧನೆ	ಪ್ಲಾಸ್ಟ್ರಿಂಗ್ ಹಂತದಲ್ಲಿ ಸ್ಥಗಿತಗೊಂಡಿರುತ್ತದೆ
2	ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಚಿನಕುರಳಿ	ಬಲವರ್ಧನೆ	ಮುಕ್ತಾಯದ ಹಂತದಲ್ಲಿರುತ್ತದೆ
3	ಸರ್ಕಾರಿ ಪ್ರೌಢಶಾಲೆ ರಾಗಿಮುದ್ದನಹಳ್ಳಿ	ಬಲವರ್ಧನೆ	ಮುಕ್ತಾಯದ ಹಂತದಲ್ಲಿರುತ್ತದೆ
4	ಸರ್ಕಾರಿ ಪ್ರೌಢಶಾಲೆ ಕಟ್ಟೇರಿ	ಬಲವರ್ಧನೆ	ಪ್ಲಾಸ್ಟ್ರಿಂಗ್ ಹಂತದಲ್ಲಿ ಸ್ಥಗಿತಗೊಂಡಿರುತ್ತದೆ
5	ಸರ್ಕಾರಿ ಪ್ರೌಢಶಾಲೆ ಸುಂಕಾತೊಣ್ಣೂರು	ಬಲವರ್ಧನೆ	ಪ್ಲಾಸ್ಟ್ರಿಂಗ್ ಹಂತದಲ್ಲಿ ಸ್ಥಗಿತಗೊಂಡಿರುತ್ತದೆ
6	ಸರ್ಕಾರಿ ಪ್ರೌಢಶಾಲೆ ಹಿರೇಮರಳಿ	ಬಲವರ್ಧನೆ	ಮುಕ್ತಾಯದ ಹಂತದಲ್ಲಿರುತ್ತದೆ
7	ಸರ್ಕಾರಿ ಪ್ರೌಢಶಾಲೆ ಸಣಬ ಹೊಸಬಡಾವಣೆ	ಬಲವರ್ಧನೆ	ಆರ್.ಸಿ.ಸಿ ಛಾವಣಿ ಕಾಂಕ್ರಿಟ್ ಪೂರ್ಣಗೊಂಡಿದ್ದು ಸ್ಥಗಿತಗೊಂಡಿರುತ್ತದೆ.
8	ಸ.ಪ.ಪೂ ಕಾಲೇಜು ದುದ್ದ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
9	ಆದರ್ಶ ವಿದ್ಯಾಲಯ ಪಾಂಡವಪುರ	ಆದರ್ಶ ವಿದ್ಯಾಲಯ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
VII.	ಶ್ರೀರಂಗಪಟ್ಟಣ		
1	ಸರ್ಕಾರಿ ಪ್ರೌಢಶಾಲೆ ಅರಕೆರೆ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
2	ಸರ್ಕಾರಿ ಪ್ರೌಢಶಾಲೆ ಚಿಕ್ಕಅಂಕನಹಳ್ಳಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
3	ಸರ್ಕಾರಿ ಪ್ರೌಢಶಾಲೆ ಎಂ. ಶೆಟ್ಟಿಹಳ್ಳಿ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
4	ಸರ್ಕಾರಿ ಪ್ರೌಢಶಾಲೆ ಕೆ.ಆರ್.ಸಾಗರ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
5	ಸರ್ಕಾರಿ ಪ್ರೌಢಶಾಲೆ ಗಂಜಾಂ	ಬಲವರ್ಧನೆ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
6	ಸರ್ಕಾರಿ ಉನ್ನತೀಕರಿಸಿದ ಪ್ರೌಢಶಾಲೆ ಬಿದರಹಳ್ಳಿ	ಉನ್ನತೀಕರಣ	ಕಟ್ಟಡವನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ
7	ಸರ್ಕಾರಿ ಪ್ರೌಡಶಾಲೆ, ಎಲೆಚಾಕನಹಳ್ಳಿ	ಬಲವರ್ಧನೆ	ಆರ್.ಸಿ.ಸಿ ಛಾವಣಿ ಕಾಂಕ್ರಿಟ್ ಪೂರ್ಣಗೊಂಡಿದ್ದು ಸ್ಥಗಿತಗೊಂಡಿರುತ್ತದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2973
ಸದಸ್ಯರ ಹೆಸರು	:	ಶ್ರೀ ರಾಮದಾಸ್ ಎಸ್.ಎ. (ಕೃಷ್ಣರಾಜ)
ಉತ್ತರಿಸಬೇಕಾದ ದಿನಾಂಕ	:	18.03.2021
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರಸ	ಪ್ರಶ್ನೆ	ಉತ್ತರ
ಅ)	ರಾಜ್ಯಾದ್ಯಂತ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಉಸ್ತುವಾರಿಯಲ್ಲಿ ನಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದರೂ ತಾಲ್ಲೂಕಿಗೊಂದು ಆಂಗ್ಲ ಮಾಧ್ಯಮದ "ಕರ್ನಾಟಕ ಪಬ್ಲಿಕ್ ಶಾಲೆ" ಏಕೆ ಅನುಷ್ಠಾನಗೊಳಿಸಲಾಗುತ್ತಿದೆ;	2019-20ನೇ ಸಾಲಿನ (ಫೆಬ್ರವರಿ) ಆಯವ್ಯಯ ಭಾಷಣದಲ್ಲಿ "ಮುಂದಿನ 4 ವರ್ಷಗಳಲ್ಲಿ ಒಂದು ಸಾವಿರ (1000) ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಹೋಬಳಿ ಕೇಂದ್ರ ಸ್ಥಾನಗಳಲ್ಲಿ ಸ್ಥಾಪಿಸಲಾಗುವುದು. ಸದರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳಿಂದ 12ನೇ ತರಗತಿ ವರೆಗೆ ಶಿಕ್ಷಣವನ್ನು ಒಂದೇ ಸೂರಿನಡಿ ಒದಗಿಸಲಾಗುವುದು ಎಂದು ಘೋಷಿಸಲಾಗಿದೆ. ಪ್ರಸ್ತುತ ರಾಜ್ಯಾದಾದ್ಯಂತ ಒಟ್ಟು 276 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಕರ್ನಾಟಕ ಪಬ್ಲಿಕ್ ಶಾಲೆಗಳು ವಸತಿರಹಿತ ಶಾಲೆಗಳಾಗಿದ್ದು,ಕರ್ನಾಟಕ ಸರ್ಕಾರವು "ಪ್ರತಿ ಮಗುವೂ ಶಾಲೆಯಲ್ಲಿ ಮತ್ತು ಉತ್ತಮ ಕಲಿಕೆಯೊಂದಿಗೆ" ಎಂಬ ಘೋಷ ನೀತಿಯನ್ನು ಅಳವಡಿಸಿಕೊಂಡಿದ್ದು, ಪ್ರತಿ ಮಗುವಿಗೂ ಶಿಕ್ಷಣ ಹಕ್ಕು ಕಾಯ್ದೆ ಅನ್ವಯ ಗುಣಮಟ್ಟದ ಶಿಕ್ಷಣ ನೀಡುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಅದೇ ವೇಳೆಯಲ್ಲಿ ವಿದ್ಯಾರ್ಥಿಗಳು ಉತ್ತಮವಾಗಿ ಕಲಿಯಲು ಸಹಕರಿಸುವಂತೆ ಶಾಲೆಗಳಲ್ಲಿ ಬೋಧನಾ ಪದ್ಧತಿಯನ್ನು ಸುಧಾರಿಸಲು ಆವಿಷ್ಕೃತ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ದೂರದೃಷ್ಠಿ ಹಿನ್ನೆಲೆಯಲ್ಲಿ ಶಿಕ್ಷಕರು ಮತ್ತು ಇತರ ಸಂಪನ್ಮೂಲಗಳ ಬಳಕೆಯ ಸಮರ್ಪಕತೆಯನ್ನು ಸುಧಾರಿಸಲು, ಒಂದೇ ಭೌಗೋಳಿಕ ಸ್ಥಳಗಳಲ್ಲಿ ಅಸ್ತಿತ್ವದಲ್ಲಿರುವ ಪೂರ್ವ ಪ್ರಾಥಮಿಕ ಶಿಕ್ಷಣ ದಿಂದ 12ನೇ ತರಗತಿವರೆಗಿನ ಶಾಲೆಗಳನ್ನು ಆಡಳಿತಾತ್ಮಕ, ಶೈಕ್ಷಣಿಕ ಮತ್ತು ಕ್ರಿಯಾತ್ಮಕ ಸಂಯೋಜನೆಯೊಂದಿಗೆ ಒಟ್ಟುಗೂಡಿಸಿ ಕರ್ನಾಟಕ

		ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಈ ಶಾಲೆಗಳಲ್ಲಿ ಕನ್ನಡ ಮತ್ತು ಆಂಗ್ಲ ಮಾಧ್ಯಮಗಳು ಎರಡರಲ್ಲೂ ಬೋಧನೆ ಮಾಡಲಾಗುತ್ತಿದೆ.
ಆ)	ಹೊಸದಾಗಿ ಆಂಗ್ಲ ಮಾಧ್ಯಮದ "ಕರ್ನಾಟಕ ಪಬ್ಲಿಕ್ ಶಾಲೆ" ಅನುಷ್ಠಾನಗೊಳಿಸುವ ಪ್ರಸ್ತಾವನೆ ಕೈಬಿಟ್ಟು ಸದರಿ ವಸತಿ ಶಾಲೆಗಳನ್ನು ಬಲಪಡಿಸುವ ಕುರಿತು ಸರ್ಕಾರದ ನಿಲುವೇನು?	ಕರ್ನಾಟಕ ಪಬ್ಲಿಕ್ ಶಾಲೆಗಳು ಹೊಸ ಶಾಲೆಗಳಾಗಿರುವುದಿಲ್ಲ. ಒಂದೇ ಭೌಗೋಳಿಕ ಪ್ರದೇಶ/ಅದೇ ಗ್ರಾಮ, ನಗರ ಮತ್ತು ಪಟ್ಟಣಗಳಲ್ಲಿ ಹಾಲಿ ಅಸ್ಥಿತ್ವದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸರ್ಕಾರಿ ಪ್ರೌಢ ಶಾಲೆ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಒಗ್ಗೂಡಿಸಿ ಪೂರ್ವ ಪ್ರಾಥಮಿಕದಿಂದ ಪದವಿ ಪೂರ್ವ ಹಂತದವರೆಗೆ ಶಿಕ್ಷಣ ನೀಡುವ ಪದ್ಧತಿಯಾಗಿದೆ.

ಇಪಿ: 56 ಯೋಸಕ 2021

(ಎಸ್.ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1555
ಸದಸ್ಯರ ಹೆಸರು : ಶ್ರೀ ಕೃಷ್ಣಾರೆಡ್ಡಿ ಎಂ. (ಚಿಂತಾಮಣಿ)
ಉತ್ತರಿಸಬೇಕಾದ ದಿನಾಂಕ : 18.03.2021
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರಸ	ಪ್ರಶ್ನೆ	ಉತ್ತರ
ಅ)	ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕಿನಲ್ಲಿರುವ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಟ್ಟಡದ ಪಕ್ಕದಲ್ಲಿ, ಶೌಚಾಲಯವನ್ನು ನಿರ್ಮಾಣ ಮಾಡಲು ಯಾವ ಯೋಜನೆಯಡಿ ಎಷ್ಟು ಅನುದಾನ ಬಿಡುಗಡೆಯಾಗಿದೆ;	ಆರ್‌ಐಡಿಎಫ್–19 ರ ಯೋಜನೆಯಡಿ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ಚಿಂತಾಮಣಿ, ಈ ಕಾಲೇಜಿಗೆ ರೂ 83.20 ಲಕ್ಷ ಮೊತ್ತದ ವೆಚ್ಚದಲ್ಲಿ ನಾಲ್ಕು ತರಗತಿ ಕೊಠಡಿಗಳು ಮತ್ತು ಎಂಟು ಶೌಚಾಲಯಗಳು ಮಂಜೂರಾಗಿರುತ್ತವೆ. ಪ್ರಸ್ತುತ ನಾಲ್ಕು ತರಗತಿ ಕೊಠಡಿಗಳು ಪೂರ್ಣಗೊಂಡು ಹಸ್ತಾಂತರವಾಗಿರುತ್ತದೆ.
ಆ)	ಶೌಚಾಲಯದ ಕಟ್ಟಡ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗಿದೆಯೇ:	ದಿನಾಂಕ:06–03–2021ರಂದು ಅನುಷ್ಠಾನಾಧಿಕಾರಿಗಳಾದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಚಿಕ್ಕಬಳ್ಳಾಪುರ ಇವರು ಶೌಚಾಲಯದ ಕಟ್ಟಡ ನಿರ್ಮಾಣ ನಿವೇಶನವನ್ನು ಸಮೀಕ್ಷೆ ಮಾಡಿ ಕಾಮಗಾರಿಯನ್ನು ಪ್ರಾರಂಭಿಸಲು ತಮ್ಮ ಸುಪರ್ದಿಗೆ ಪಡೆದುಕೊಂಡಿರುತ್ತಾರೆ.
ಇ)	ಸದರಿ ಕಾಮಗಾರಿಯನ್ನು ಪ್ರಾರಂಭಿಸಿದ್ದಲ್ಲಿ, ಅದು ಯಾವ ಹಂತದಲ್ಲಿದೆ:	ಸದರಿ ಕಾಮಗಾರಿಯು ಇನ್ನು ಪ್ರಾರಂಭಗೊಂಡಿರುವುದಿಲ್ಲ.
ಈ)	ಯಾವ ಕಾಲಮಿತಿಯೊಳಗೆ ಕಾಮಗಾರಿ ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು)	ಏಪ್ರಿಲ್–2021ರ ಮಾಹೆಯ ಅಂತ್ಯದಲ್ಲಿ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ

ಇಪಿ: 61 ಯೋಸಕ 2021

(ಎಸ್.ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1566
ಸದಸ್ಯರ ಹೆಸರು : ಶ್ರೀ ರಾಘವೇಂದ್ರ ಬಸವರಾಜ್ ಹಿಟ್ನಾಳ್ ಕೆ. (ಕೊಪ್ಪಳ)
ಉತ್ತರಿಸಬೇಕಾದ ದಿನಾಂಕ : 18.03.2021
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

<table>
<tr><th>ಕ್ರಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ನೂತನ ಶಾಲಾ ಕಟ್ಟಡಗಳನ್ನು ನಿರ್ಮಾಣ ಮಾಡಲು ಕಳೆದ 03 ವರ್ಷಗಳಿಂದ ಈವರೆಗೂ ಮಂಜೂರಾಗಿರುವ ಅನುದಾನವೆಷ್ಟು?</td><td>➢ ರಾಜ್ಯದಲ್ಲಿ ನೂತನ ಶಾಲಾ ಕಟ್ಟಡಗಳನ್ನು ನಿರ್ಮಾಣ ಮಾಡಲು ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡತಿದೆ.
<table>
<tr><th>ವರ್ಷ</th><th>ಶಾಲೆಗಳ ಸಂಖ್ಯೆ</th><th>ಕೊಠಡಿಗಳ ಸಂಖ್ಯೆ</th><th>ಬಿಡುಗಡೆಂ ಮಾದಅನು ದಾನ</th></tr>
<tr><td>2017–18</td><td>1021</td><td>1299</td><td>13038.72</td></tr>
<tr><td>2018–19</td><td>1909</td><td>2966</td><td>17445.68</td></tr>
<tr><td>2019–20</td><td>632</td><td>973</td><td>21982.67</td></tr>
<tr><td>2020–21</td><td>1006</td><td>1484</td><td>18000.00</td></tr>
<tr><td>ಒಟ್ಟು</td><td>4568</td><td>6722</td><td>70467.07</td></tr>
</table></td></tr>
<tr><td>ಆ)</td><td>ಆ ಪೈಕಿ ಎಷ್ಟು ಶಾಲಾ ಕಟ್ಟಡಗಳ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; ಪ್ರಸ್ತುತ ಕಾಮಗಾರಿಗಳ ಪ್ರಗತಿಯ ಹಂತವೇನು;</td><td>ಶಾಲಾ ಕಟ್ಟಡ ಕಾಮಗಾರಿಗಳ ಪ್ರಗತಿಯ ವಿವರ ಕೆಳಕಂಡಂತಿದೆ.
2017–18
<table>
<tr><th>ಕೊಠಡಿ ಗಳ ಸಂಖ್ಯೆ</th><th>YET TO STA RT WOR K</th><th>ತಳಪಾ ಯ ಕೊಠಡಿ ಗಳ ಸಂಖ್ಯೆ</th><th>ಲಿಂಟ ಲ್ ಕೊಠಡಿ ಗಳ ಸಂಖ್ಯೆ</th><th>ಛಾವಣಿ ಕೊಠಡಿ ಗಳ ಸಂಖ್ಯೆ</th><th>ಪೂರ್ಣ ಗೊಂಡಿರು ವ ಕೊಠಡಿಗ ಳ ಸಂಖ್ಯೆ</th></tr>
<tr><td>1299</td><td>138</td><td>31</td><td>28</td><td>70</td><td>1032</td></tr>
</table>
2018–19
<table>
<tr><th>ಕೊಠಡಿ ಗಳ ಸಂಖ್ಯೆ</th><th>YET TO STA RT WOR K</th><th>ತಳಪಾ ಯ ಕೊಠಡಿ ಗಳ ಸಂಖ್ಯೆ</th><th>ಲಿಂಟ ಲ್ ಕೊಠಡಿ ಗಳ ಸಂಖ್ಯೆ</th><th>ಛಾವಣಿ ಕೊಠಡಿ ಗಳ ಸಂಖ್ಯೆ</th><th>ಪೂರ್ಣ ಗೊಂಡಿರು ವ ಕೊಠಡಿಗ ಳ ಸಂಖ್ಯೆ</th></tr>
<tr><td>2966</td><td>364</td><td>247</td><td>206</td><td>410</td><td>1739</td></tr>
</table></td></tr>
</table>

		2019–20 ಕೊಠಡಿಗಳ ಸಂಖ್ಯೆ / YET TO START WORK / ತಳಪಾಯ ಕೊಠಡಿಗಳ ಸಂಖ್ಯೆ / ಲಿಂಟಲ್ ಕೊಠಡಿಗಳ ಸಂಖ್ಯೆ / ಛಾವಣಿ ಕೊಠಡಿಗಳ ಸಂಖ್ಯೆ / ಪೂರ್ಣಗೊಂಡಿರುವ ಕೊಠಡಿಗಳ ಸಂಖ್ಯೆ 973 / 564 / 158 / 106 / 103 / 42 (ಜಿಲ್ಲಾವಾರು ಕಟ್ಟಡ ನಿರ್ಮಾಣ ಕಾಮಗಾರಿಯ ಪ್ರಗತಿಯ ವಿವರವನ್ನು ಅನುಬಂಧ 1-3 ರಲ್ಲಿ ಒದಗಿಸಿದೆ)
ಇ)	ನೂತನ ಶಾಲಾ ಕಟ್ಟಡಗಳ ನಿರ್ಮಾಣಕ್ಕೆ ಕೇಂದ್ರ ಸರ್ಕಾರವು ಒದಗಿಸಿರುವ ಅನುದಾನವೆಷ್ಟು; ಇದರಲ್ಲಿ ಕೊಪ್ಪಳ ಮತಕ್ಷೇತ್ರಕ್ಕೆ ಹಂಚಿಕೆ ಮಾಡಲಾಗಿರುವ ಅನುದಾನವೆಷ್ಟು?	ಕಳೆದ 3 ವರ್ಷಗಳಿಂದ ನೂತನ ಕಟ್ಟಡ ನಿರ್ಮಾಣಕ್ಕೆ ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.
ಈ)	ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಶಾಲೆಗಳಿಗೆ ಸರ್ಕಾರದಿಂದ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆಯೇ? (ವಿವರ ನೀಡುವುದು)	ಅನುದಾನದ ಲಭ್ಯತೆ ಮತ್ತು ಅಗತ್ಯತೆಗನುಗುಣವಾಗಿ ಹಂತ ಹಂತವಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಇಪಿ: 63 ಯೋಸಕ 2021

(ಎಸ್.ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅನುಬಂಧ-1

Primary & Secondary Education Deprtment - Monitoring of Civil Works
Status of Works at the District Level : 2017-18

District:

Amount Rs. Lakhs, Position as on: .28.02.2021

	ಜಿಲ್ಲೆ	ವರ್ಷ	ತಾಲ್ಲೂಕುಗಳ ಸಂಖ್ಯೆ	ಶಾಲೆಗಳ ಸಂಖ್ಯೆ	ಜಿಲ್ಲೆಗೆ ಒಟ್ಟು ನಿಗದಿತ ಕೊಠಡಿಗಳು	ಮಂಜೂರಾದ ಅನುದಾನ	ಬಿಡುಗಡೆಯಾದ ಅನುದಾನ	ವಿವಿದ ಹಂತದಲ್ಲಿರುವ ಕಾಮಗಾರಿ ಕೊಠಡಿಗಳ ಸಂಖ್ಯೆ							
								ಟೆಂಡರ್ ಆದ ಕೊಠಡಿಗಳ ಸಂಖ್ಯೆ	ಕಾರ್ಯಾದೇಶ ನೀಡಿದ ಕೊಠಡಿಗಳ ಸಂಖ್ಯೆ	YET TO START WORKS (ಕೊಠಡಿಗಳ ಸಂಖ್ಯೆ)	ತಳ ಪಾಯ (ಕೊಠಡಿಗಳ ಸಂಖ್ಯೆ)	ಲಿಂಟಲ್ (ಕೊಠಡಿಗಳ ಸಂಖ್ಯೆ)	ಛಾವಣಿ (ಕೊಠಡಿಗಳ ಸಂಖ್ಯೆ)	ಪೂರ್ಣಗೊಂಡಿದ(ಕೊಠಡಿಗಳ ಸಂಖ್ಯೆ)	ಮುಖ್ಯೋಪಾಧ್ಯಾಯರಿಗೆ ಹಸ್ತಾಂತರಿಸಲಾಗಿದೆ (ಕೊಠಡಿಗಳ ಸಂಖ್ಯೆ)
1	2		3	4	5	6	7	8	9	10	11	12	13	14	15
1	BELAGAVI	2017-18	7	31	45	413.15	413.15	27	27	18	2	0	7	18	0
2	BAGALKOT	2017-18	6	19	24	236.10	236.10	24	24	0	0	0	4	20	0
3	BELLARY	2017-18	9	60	70	631.75	631.75	65	654	6	0	4	5	55	0
4	BENGALURU NORTH	2017-18	4	4	4	34.80	34.80	4	4	0	0	0	0	4	4
5	BENGALURU RURAL	2017-18	4	27	31	278.80	278.80	31	31	0	0	0	2	29	28
6	BENGALURU SOUTH	2017-18	5	9	15	130.50	130.50	0	0	0	0	0	0	15	14
7	BIDAR	2017-18	5	26	35	381.85	381.85	35	35	10	4	0	2	19	14
8	CHAMARAJANAGARA	2017-18	5	16	17	161.55	161.55	17	17	0	0	0	1	16	16
9	CHIKKABALLAPURA	2017-18	6	22	22	247.30	247.30	22	22	4	0	0	6	12	0
10	CHIKKAMANGALURU	2017-18	8	28	34	323.10	323.10	32	32	2	0	0	2	30	30
11	CHIKKODI	2017-18	8	66	75	693.45	693.45	75	75	0	2	7	6	60	4
12	CHITRADURGA	2017-18	6	49	93	800.90	800.90	93	93	0	13	2	14	64	64
13	DAKSHINA KANNADA	2017-18	7	19	23	245.60	245.60	21	21	2	0	0	0	21	0
14	DAVANAGERE	2017-18	6	57	85	858.20	858.20	85	85	0	0	0	0	85	0
15	DHARWAD	2017-18	7	42	49	750.97	750.97	42	42	7	0	0	3	39	39
16	GADAG	2017-18	6	41	44	412.45	412.45	0	0	0	0	0	0	44	38
17	HASSAN	2017-18	8	20	27	248.55	248.55	27	27	0	1	2	0	24	24
18	HAVERI	2017-18	7	43	51	521.05	521.05	51	51	16	0	0	0	35	16
19	KALBURGI	2017-18	7	52	57	550.50	550.50	35	0	39	4	1	9	4	0
20	KODAGU	2017-18	3	6	9	105.60	105.60	2	0	2	2	2	0	3	0
21	KOLAR	2017-18	6	42	73	675.15	675.15	73	73	0	1	5	3	64	0
22	KOPPAL	2017-18	4	46	48	567.75	567.75	48	48	7	0	0	0	41	41
23	MADHUGIRI	2017-18	4	23	38	385.20	385.20	37	37	1	0	0	0	37	37
24	MANDYA	2017-18	8	23	27	258.95	258.95	27	27	4	0	0	0	23	23
25	MYSURU	2017-18	9	24	39	432.45	432.45	39	39	0	0	0	0	39	39
26	RAICHUR	2017-18	5	56	62	603.10	603.10	62	62	6	1	0	1	54	6
27	RAMANAGARA	2017-18	4	23	41	404.80	404.80	41	41	0	0	0	2	39	37
28	SHIVAMOGGA	2017-18	7	23	28	248.15	248.15	24	24	4	0	0	0	24	24
29	SIRSI	2017-18	6	19	22	211.30	211.30	21	21	1	1	5	0	15	0
30	TUMKUR	2017-18	6	5	5	43.50	43.50	5	5	0	0	0	0	5	5
31	UDUPI	2017-18	5	19	19	307.00	307.00	11	11	8	0	0	0	11	11
32	UTTARA KANNADA	2017-18	5	9	9	82.85	82.85	9	9	0	0	0	0	9	9
33	VIJAYAPURA	2017-18	7	49	52	516.10	516.10	51	51	1	0	0	0	9	9
34	YADAGIRI	2017-18	4	23	26	276.25	276.25	26	26	0	0 0	0 0	0 3	51 23	0 20
	Grand Total	2017-18	204	1021	1299	13038.72	13038.72	1162	1714	138	31	28	70	1032	543

Primary & Secondary Education Deprtment - Monitoring of Civil Works
Status of Works at the District Level : 2018-19

District:

Amount Rs. Lakh, Position as on: 28.02.2021

	ಜಿಲ್ಲೆ	ತಾಲ್ಲೂಕುಗಳ ಸಂಖ್ಯೆ	ಶಾಲೆಗಳ ಸಂಖ್ಯೆ	ಜಿಲ್ಲೆಗೆ ಒಟ್ಟು ನಿಗದಿತ ಕೊಠಡಿಗಳು	ಮಂಜೂರಾದ ಅನುದಾನ	ಬಿಡುಗಡೆಯಾದ ಅನುದಾನ	ವಿವಿಧ ಹಂತದಲ್ಲಿರುವ ಕಾಮಗಾರಿ ಕೊಠಡಿಗಳ ಸಂಖ್ಯೆ							
							ಟೆಂಡರ್ ಆದ ಕೊಠಡಿಗಳ ಸಂಖ್ಯೆ	ನೀಡಿದ ಕೊಠಡಿಗಳ ಸಂಖ್ಯೆ	START WORKS (ಕೊಠಡಿಗಳ ಸಂಖ್ಯೆ)	ತಳ ಪಾಯ (ಕೊಠಡಿಗಳ ಸಂಖ್ಯೆ)	ಲಿಂಟಲ್ (ಕೊಠಡಿಗಳ ಸಂಖ್ಯೆ)	ಛಾವಣಿ (ಕೊಠಡಿಗಳ ಸಂಖ್ಯೆ)	ಪೂರ್ಣಗೊಂಡಿದೆ (ಕೊಠಡಿಗಳ ಸಂಖ್ಯೆ)	ಮುಖ್ಯೋಪಾಧ್ಯಾಯರಿಗೆ ಹಸ್ತಾಂತರಿಸಲಾಗಿದೆ (ಕೊಠಡಿಗಳ ಸಂಖ್ಯೆ)
1	2	3	4	5	6	7	8	9	10	11	12	13	14	15
1	BAGALKOT	6	73	140	1726.05	754.05	133	133	7	9	27	18	79	0
2	BELAGAVI	7	97	152	1724.35	732.48	144	144	8	28	49	24	43	0
3	BELLARY	9	55	78	1084.30	550.63	66	66	12	29	12	12	13	6
4	BENGALURU NORTH	4	16	35	489.45	254.22	35	35	2	15	0	0	18	18
5	BENGALURU RURAL	4	48	72	928.00	407.47	29	28	29	6	5	9	23	11
6	BENGALURU SOUTH	5	12	19	268.35	208.58	5	7	12	0	0	0	7	0
7	BIDAR	5	67	105	1483.80	627.87	94	94	11	7	4	16	67	0
8	CHAMARAJANAGARA	5	109	143	1045.50	450.07	13	70	83	6	5	21	28	0
9	CHIKKABALLAPURA	6	52	76	944.64	451.58	6	6	6	0	24	22	24	0
10	CHIKKAMANGALURU	8	46	54	690.85	426.55	49	49	5	0	3	10	36	36
11	CHIKKODI	8	111	171	2142.20	910.33	171	171	8	33	27	4	99	3
12	CHITRADURGA	6	65	106	1211.15	568.48	106	106	0	18	1	19	68	68
13	DAKSHINA KANNADA	7	36	59	769.60	417.67	44	43	44	0	0	0	15	0
14	DAVANAGERE	6	67	111	1542.25	727.92	87	87	26	0	0	2	83	0
15	DHARWAD	7	38	59	774.75	426.00	59	47	12	26	2	7	12	3
16	GADAG	6	39	51	664.20	368.60	51	51	0	10	1	5	35	3
17	HASSAN	8	74	126	1768.20	813.73	126	126	0	6	0	53	67	67
18	HAVERI	7	66	112	1341.70	615.43	112	112	2	0	0	5	105	0
19	KALBURGI	7	52	89	1267.85	618.00	18	0	18	0	6	20	45	0
20	KODAGU	3	19	29	348.60	165.27	26	1	3	7	0	9	10	10
21	KOLAR	6	41	77	1022.20	487.92	71	71	6	13	4	12	42	8
22	KOPPAL	4	55	105	1504.40	599.60	105	105	12	1		14	78	15
23	MADHUGIRI	4	51	78	1048.25	447.55	78	78	0	0	0	0	78	78
24	MANDYA	8	44	55	706.60	431.80	50	50	5	0	0	0	50	0
25	MYSURU	9	68	113	1506.80	719.53	113	113	0	0	0	38	75	0
26	RAICHUR	5	62	92	1217.25	524.88	82	82	10	3	9	10	60	2
27	RAMANAGARA	4	40	78	1058.55	450.98	66	66	12	0	5	26	35	24
28	SHIVAMOGGA	7	67	101	1199.35	525.98	0	0	0	0	0	0	101	99
29	SIRSI	6	39	47	560.00	333.87	43	43	2	5	2	8	30	0
30	TUMKUR	6	58	99	1301.75	581.12	96	96	3	0	0	0	96	96
31	UDUPI	5	25	33	432.20	263.20	33	33	0	0	0	4	29	0
32	UTTARA KANNADA	5	42	48	581.20	319.93	48	46	2	7	9	6	24	17
33	VIJAYAPURA	7	82	141	1803.60	769.40	133	133	8	12	4	24	93	0
34	YADAGIRI	4	93	112	1274.75	494.98	96	96	16	6	7	12	71	0
	Grand Total	204	1909	2966	37432.69	17445.68	2388	2388	364	247	206	410	1739	564

ಅನುಬಂಧ-3

Primary & Secondary Education Deprtment - Monitoring of Civil Works
Status of Works at the District Level : 2019-20

District: Amount Rs. Lakh, Position as on: 28.02.2021

	ಜಿಲ್ಲೆ	ಶಾಲೆಗಳ ಸಂಖ್ಯೆ	ಜಿಲ್ಲೆಗೆ ಒಟ್ಟು ನಿಗದಿತ ಕೊಠಡಿಗಳು	ಮಂಜೂರಾದ ಅನುದಾನ	ಬಿಡುಗಡೆಯಾದ ಅನುದಾನ	ವಿವಿಧ ಹಂತದಲ್ಲಿರುವ ಕಾಮಗಾರಿ ಕೊಠಡಿಗಳ ಸಂಖ್ಯೆ: ಟೆಂಡರ್ ಆದ ಕೊಠಡಿಗಳ ಸಂಖ್ಯೆ	ಕಾರ್ಯಾದೇಶ ನೀಡಿದ ಕೊಠಡಿಗಳ ಸಂಖ್ಯೆ	YET TO START WORKS (ಕೊಠಡಿಗಳ ಸಂಖ್ಯೆ)	ತಳ ಪಾಯ (ಕೊಠಡಿಗಳ ಸಂಖ್ಯೆ)	ಲಿಂಟಲ್ (ಕೊಠಡಿಗಳ ಸಂಖ್ಯೆ)	ಛಾವಣಿ (ಕೊಠಡಿಗಳ ಸಂಖ್ಯೆ)	ಪೂರ್ಣಗೊಂಡಿದೆ (ಕೊಠಡಿಗಳ ಸಂಖ್ಯೆ)	ಮುಖ್ಯೋಪಾಧ್ಯಾಯರಿಗೆ ಹಸ್ತಾಂತರಿಸಲಾಗಿದೆ (ಕೊಠಡಿಗಳ ಸಂಖ್ಯೆ)
1	2	4	5	6	7	8	9	10	11	12	13	14	15
1	BELAGAVI	30	55	633.00	1128.93	55	0	55	0	0	0	0	0
2	BAGALKOT	13	17	226.55	712.55	9	8	17	0	0	0	0	0
3	BELLARY	34	46	575.15	975.15	43	42	18	11	0	3	14	0
4	BENGALURU NORTH	17	28	312.25	429.87	28	28	17	6	3	0	2	1
5	BENGALURU RURAL	6	7	89.65	349.92	4	4	3	2	0	2	0	0
6	BENGALURU SOUTH	21	35	376.15	406.03	0	0	35	0	0	0	0	0
7	BIDAR	15	20	294.40	724.37	20	20	3	17	0	0	0	0
8	CHAMARAJANAGARA	18	21	258.65	556.37	0	0	21	0	0	0	0	0
9	CHIKKABALLAPURA	11	13	168.70	413.23	8	0	13	0	0	0	0	0
10	CHIKKAMANGALURU	10	19	247.75	379.90	19	19	8	8	1	2	0	0
11	CHIKKODI	39	64	691.75	1307.68	64	0	64	0	0	0	0	0
12	CHITRADURGA	32	66	807.75	1129.08	66	66	25	12	8	19	2	0
13	DAKSHINA KANNADA	8	24	283.50	459.47	24	24	5	0	19	0	0	0
14	DAVANAGERE	35	67	797.75	1071.75	61	61	8	8	7	40	4	0
15	DHARWAD	11	11	135.83	309.98	7	7	5	6	0	0	0	0
16	GADAG	9	13	163.55	311.35	13	13	11	0	0	1	1	0
17	HASSAN	16	20	246.85	724.08	20	20	0	5	14	1	0	0
18	HAVERI	19	25	295.90	659.03	25	25	0	0	6	15	4	0
19	KALBURGI	29	47	609.10	933.58	25	0	47	0	0	0	0	0
20	KODAGU	3	4	51.33	143	4	0	4	0	0	0	0	0
21	KOLAR	11	11	137.20	404.33	11	11	0	11	0	0	0	0
22	KOPPAL	16	25	325.50	777.90	25	25	16	4	1	2	2	0
23	MADHUGIRI	14	18	242.30	542.65	18	18	0	8	10	0	0	0
24	MANDYA	23	30	379.80	517.2	23	23	10	0	20	0	0	0
25	MYSURU	27	36	458.85	852.48	36	36	5	31	0	0	0	0
26	RAICHUR	18	22	320.75	666.93	4	4	20	0	0	2	0	0
27	RAMANAGARA	19	27	342.85	646.63	27	27	22	5	0	0	0	0
28	SHIVAMOGGA	25	37	428.15	764.83	37	37	5	6	0	13	13	13
29	SIRSI	9	12	152.95	266.02	11	11	1	2	8	1	0	
30	TUMKUR	40	71	891.65	1251.97	71	71	71	0	0	0	0	0
31	UDUPI	5	13	168.70	253.20	13	13	0	11	2	0	0	0
32	UTTARA KANNADA	11	17	190.50	321.13	17	9	10	1	4	2	0	0
33	VIJAYAPURA	23	35	437.95	955.05	35	35	35	0	0	0	0	0
34	YADAGIRI	15	17	247.15	637.03	7	7	10	4	3	0	0	0
	Grand Total	632	973	11989.86	21982.67	830	664	564	158	106	103	42	14

ವಿಶೇಷ ಸೂಚನೆ: ಕ್ರಮ ಸಂಖ್ಯೆ 5 ರ ಕೊಠಡಿ ಸಂಖ್ಯೆಗಳಿಗೆ ಕ್ರಮ ಸಂಖ್ಯೆ 10,11,12,13,14 ರ ಕೊಠಡಿ ಸಂಖ್ಯೆಗಳ ಮೊತ್ತಕ್ಕೆ ತಾಳೆ ಹೊಂದಬೇಕು.

2018–19ನೇ ಸಾಲಿನಲ್ಲಿ ವಿಶೇಷ ಪ್ಯಾಕೇಜ್ ಯೋಜನೆಯಡಿ 03 ವರ್ಷಗಳ ಪ್ಯಾಕೇಜ್ ಯೋಜನೆಯಡಿ ರೂ.300 ಕೋಟಿಗಳ ಅನುದಾನವನ್ನು 03 ವರ್ಷಗಳಿಗೆ ಪರಿಗಣಿಸಿ ಪ್ರತಿ ವರ್ಷ ರೂ.100 ಕೋಟಿಗಳಂತೆ 03 ವರ್ಷಗಳಿಗೆ ರೂ.300 ಕೋಟಿಗಳ ಅನುದಾನ ಮಂಜೂರಾಗಿರುತ್ತದೆ. ಸದರಿ ಮಂಜೂರಾಗಿರುವ ರೂ.300 ಕೋಟಿಗಳನ್ನು 2018–19ನೇ ಸಾಲಿನಲ್ಲಿ ಮಂಜೂರಾಗಿರುವ ಅನುದಾನದಲ್ಲಿ ತೋರಿಸಲಾಗಿರುತ್ತದೆ. ಈಗಾಗಲೇ 2018–19ನೇ ಸಾಲಿನಲ್ಲಿ ರೂ.300 ಕೋಟಿಗಳ ಅನುದಾನವನ್ನು ನಮೂದಿಸಿರುವುದರಿಂದ 2019–20ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ ರೂ.100 ಕೋಟಿಗಳನ್ನು ಮಾತ್ರ ನಮೂದಿಸಿರುವ ಕಾರಣ 2019–20ನೇ ಸಾಲಿನಲ್ಲಿ ಮಂಜೂರಾಗಿರುವ ಅನುದಾನಕ್ಕಿಂತ ಬಿಡುಗಡೆಯಾಗಿರುವ ಅನುದಾನ ಹೆಚ್ಚುವರಿಯಾಗಿದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1560
ಸದಸ್ಯರ ಹೆಸರು	:	ಡಾ॥ ಅಂಜಲಿ ಹೇಮಂತ್ ನಿಂಬಾಳ್ಕರ್ (ಖಾನಾಪುರ)
ಉತ್ತರಿಸಬೇಕಾದ ದಿನಾಂಕ	:	18.03.2021
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರ.ಸ	ಪ್ರಶ್ನೆ	ಉತ್ತರ
ಅ)	ಪ್ರತಿವರ್ಷ ಶಾಲಾ ಮಕ್ಕಳಿಗೆ ಸರ್ಕಾರದಿಂದ ಉಚಿತವಾಗಿ ವಿತರಿಸುವ ಸಮವಸ್ತ್ರಗಳು, ಶೂ ಮತ್ತು ಸಾಕ್ಸ್‌ಗಳನ್ನು ಸಕಾಲದಲ್ಲಿ ಮಕ್ಕಳಿಗೆ ವಿತರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಸರ್ಕಾರವು ಪ್ರತಿವರ್ಷ, ಪ್ರತಿ ವಿದ್ಯಾರ್ಥಿಗೆ ಉಚಿತವಾಗಿ ವಿತರಿಸುವ ಸಮವಸ್ತ್ರ, ಶೂ ಮತ್ತು ಸಾಕ್ಸ್‌ಗಳ ವಿವರಗಳನ್ನು ಒದಗಿಸುವುದು;	ಸರ್ಕಾರವು ಪ್ರತಿ ವರ್ಷ ಸರ್ಕಾರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ 1 ರಿಂದ 10ನೇ ತರಗತಿಯ ಮಕ್ಕಳಿಗೆ ಉಚಿತವಾಗಿ 2 ಜೊತೆ ಸಮವಸ್ತ್ರ ಮತ್ತು 1 ಜೊತೆ ಶೂ–ಸಾಕ್ಸ್ ಗಳನ್ನು ವಿತರಿಸಲಾಗುತ್ತಿದೆ. ಸದರಿ ಸಮವಸ್ತ್ರ ಬಟ್ಟೆಗಳನ್ನು ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ ಮೆ:ಕೆ.ಹೆಚ್.ಡಿ.ಸಿ, ಮೆ:ಕೆ.ಎಸ್.ಟಿ.ಐ.ಡಿ.ಸಿ ಹಾಗೂ ಇ–ಟೆಂಡರ್ ಮೂಲಕ ಆಯ್ಕೆಯಾದ ಸಂಸ್ಥೆಯಿಂದ ಖರೀದಿಸಿ ಕ್ರಮವಹಿಸಲಾಗುತ್ತಿದೆ. 2020–21ನೇ ಸಾಲಿನಲ್ಲಿ ಶೂ–ಸಾಕ್ಸ್ ಮತ್ತು 2ನೇ ಜೊತೆ ಸಮವಸ್ತ್ರ ವಿತರಿಸಲು ಅನುದಾನ ಒದಗಿಸಿರುವುದಿಲ್ಲ. 2021–22ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಅನುದಾನದ ಲಭ್ಯತೆಗೆ ಅನುಗುಣವಾಗಿ ಕ್ರಮವಹಿಸಲಾಗುವುದು
ಇ)	ನಿಗದಿತ ಸಮಯದೊಳಗೆ ಸಮವಸ್ತ್ರ, ಶೂ ಮತ್ತು ಸಾಕ್ಸ್‌ಗಳ ವಿತರಣೆ ಮಾಡಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ?	ನಿಗದಿತ ಸಮಯದೊಳಗೆ ಸಮವಸ್ತ್ರವನ್ನು ವಿತರಣೆ ಮಾಡಲು ಸರ್ಕಾರವು ಶೈಕ್ಷಣಿಕ ವರ್ಷ ಆರಂಭಕ್ಕೆ 3 ತಿಂಗಳ ಮೊದಲೇ ಸಚಿವ ಸಂಪುಟದ ಅನುಮೋದನೆ ಪಡೆದು ನಿಗದಿತ ಸಮಯದೊಳಗೆ ವಿತರಣೆ ಮಾಡಲು ಕ್ರಮವಹಿಸಲಾಗುತ್ತಿದೆ.

ಇಪಿ: 62 ಯೋಸಕ 2021

(ಎಸ್.ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

<u>**ಕರ್ನಾಟಕ ವಿಧಾನ ಸಭೆ**</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**3023**
ಸದಸ್ಯರ ಹೆಸರು	:	**ಶ್ರೀ ಖಾದರ್ ಯು.ಟಿ. (ಮಂಗಳೂರು)**
ಉತ್ತರಿಸಬೇಕಾದ ದಿನಾಂಕ	:	**18.03.2021**
ಉತ್ತರಿಸುವ ಸಚಿವರು	:	**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು**

ಕ್ರಸ	ಪ್ರಶ್ನೆ	ಉತ್ತರ
ಅ)	ಪ್ರಾಥಮಿಕ ಶಾಲಾ ಕಟ್ಟಡಗಳ ದುರಸ್ತಿಗಾಗಿ 2020–21ನೇ ಸಾಲಿನಲ್ಲಿ ಸರ್ಕಾರವು ಅನುದಾನ ಬಿಡುಗಡೆ ಮಾಡಿದೆಯೇ;	ಹೌದು
ಆ)	ಮಾಡಿದ್ದಲ್ಲಿ ವಿವರ ಒದಗಿಸುವುದು?	2020–21ನೇ ಸಾಲಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯವಲಯದ ಮುಂದುವರೆದ ಯೋಜನೆ ಕಾರ್ಯಕ್ರಮದಡಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಾಲಾ ಕಟ್ಟಡಗಳ ನಿರ್ವಹಣೆಯಡಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಅನುದಾನವನ್ನು ಒಗ್ಗೂಡಿಸುವಿಕೆಯ (Convergence) ಮೂಲಕ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಶಾಲಾ ಶೌಚಾಲಯ, ಆಟದ ಮೈದಾನ, ಶಾಲಾ ಕಾಂಪೌಂಡ್ ನಿರ್ಮಾಣ, ಬಿಸಿಯೂಟದ ಅಡಿಗೆ ಕೋಣೆ ನಿರ್ಮಾಣ ಮತ್ತು ಪೌಷ್ಠಿಕ ತೋಟ ಅಭಿವೃದ್ಧಿ ಚಟುವಟಿಕೆಗಳ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ರೂ.2921.00 ಲಕ್ಷಗಳನ್ನು ರಾಜ್ಯದ 34 ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ. (ವಿವರವನ್ನು ಅನುಬಂಧ–01 ರಲ್ಲಿ ಒದಗಿಸಿದೆ) 2020–21ನೇ ಸಾಲಿನಲ್ಲಿ ರಾಜ್ಯ ಪ್ರಕೃತಿ ವಿಪತ್ತು ನಿರ್ವಹಣೆಯಡಿಯಲ್ಲಿ ಶಾಲೆಗಳ ದುರಸ್ಥಿಗಾಗಿ ರೂ.7557.99ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ. (ವಿವರವನ್ನು ಅನುಬಂಧ–02 ರಲ್ಲಿ ಒದಗಿಸಿದೆ)

		ಪ್ರಕೃತಿ ವಿಕೋಪ ಕಾರ್ಯಕ್ರಮದಡಿಯಲ್ಲಿ ದಕ್ಷಿಣಕನ್ನಡ ಜಿಲ್ಲೆಗೆ ಹಂಚಿಕೆಯಾದ 417.00 ಲಕ್ಷಗಳಿಗೆ ಉಪನಿರ್ದೇಶಕರು ದುರಸ್ತಿ ಮಾಡಬೇಕಾದ 152 ಶಾಲೆಗಳ ಪಟ್ಟಿ ಸಿದ್ದಪಡಿಸಿ ಮಂಜೂರಾತಿಗಾಗಿ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.(ವಿವರವನ್ನು ಅನುಬಂಧ-3ರಲ್ಲಿ ಒದಗಿಸಲಾಗಿದೆ)

ಇಪಿ: 74 ಯೋಸಕ 2021

(ಎಸ್.ಸುರೇಶ್ ಕುಮಾರ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

